ಹೊಸಪೇಟೆ ತಾಲೂಕು

ಉಪ್ಪಾರರ ಮದುವೆ ಸಂಪ್ರದಾಯಗಳು

ಎಂ. ಫಿಲ್. ಪದವಿಯ ಆಂಶಿಕ ಅವಶ್ಯಕತೆಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ನಿಬಂಧ

ಸಂಶೋಧಕರು :
ಸ. ಚಿ. ರಮೇಶ್

ಮಾರ್ಗದರ್ಶಕರು :
ಡಾ. ಪುರುಷೋತ್ತಮ ಬಿಳಿಮಲೆ

ಜಾನಪದ ವಿಭಾಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ-583 211

ಮಾರ್ಚ್ 1994

ಹೊಸಪೇಟೆ ತಾಲೂಕು

ಉಪ್ಪಾರರ ಮದುವೆ ಸಂಪ್ರದಾಯಗಳು

ಎಂ. ಫಿಲ್. ಪದವಿಯ ಆಂಶಿಕ ಅವಶ್ಯಕತೆಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ನಿಬಂಧ

ಸಂಶೋಧಕರು :
ಸ. ಚಿ. ರಮೇಶ್

ಮಾರ್ಗದರ್ಶಕರು :
ಡಾ. ಪುರುಷೋತ್ತಮ ಬಿಳಿಮಲೆ

ಜಾನಪದ ವಿಭಾಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ-583 211

ಮಾರ್ಚ್ 1994

ಅರ್ಹತಾ ಪತ್ರ

ಶ್ರೀ ಸ.ಚಿ. ರಮೇಶ ಇವರು '' ಹೊಸಪೇಟೆ ತಾಲ್ಲೂಕು ಉಪ್ಪಾರರ ಮದುವೆ ಸಂಪ್ರದಾಯಗಳು'' ಎಂಬ ಶೀರ್ಷಿಕೆಯ ಈ ಪ್ರೌಢ ಪ್ರಬಂಧವನ್ನು ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಲು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಇದರಲ್ಲಿನ ವಿಷಯವನ್ನು ಅಥವಾ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿ ಮತ್ತು ಉದ್ದೇಶಗಳಿಗಾಗಿ ಇವರು ಒಪ್ಪಿಸಿಲ್ಲ.

ಹಂಪಿ

31.3.1994

(ಪುರುಷೋತ್ತಮ ಬಿಳಿಮಲೆ)

ಮಾರ್ಗದರ್ಶಕ.

ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು

ಜಾನಪದ ವಿಭಾಗ

ಕನ್ನಡ ವಿಶ್ವವಿದ್ಯಾಲಯ

ಹಂಪಿ. 583211

ಪ್ರಮಾಣ ಪತ್ರ

"ಹೊಸಪೇಟೆ ತಾಲ್ಲೂಕು ಉಪ್ಪಾರರ ಮದುವೆ ಸಂಪ್ರದಾಯಗಳು" ಎಂಬ ಶೀರ್ಷಿಕೆಯ ಈ ಪ್ರೌಢ ಪ್ರಬಂಧವನ್ನು ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಲು ಪ್ರೊ: ಪುರುಷೋತ್ತಮ ಬಿಳಿಮಲೆ ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಈ ಪ್ರೌಢ ಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಲಿ ಅಥವಾ ಯಾವುದೇ ಉದ್ದೇಶಗಳಿಗಾಗಲಿ ಬಳಸಿಕೊಂಡಿಲ್ಲವೆಂದು ಘೋಷಿಸುತ್ತೇನೆ.

31.3.94

ಹಂಪಿ

31.3.1994

(ಸ. ಚಿ. ರಮೇಶ)

ಎಂ.ಫಿಲ್ ವಿದ್ಯಾರ್ಥಿ

ಕನ್ನಡ ವಿಶ್ವವಿದ್ಯಾಲಯ

ಹಂಪಿ. 583211

ಕೃತಜ್ಞತೆಗಳು

ಸೇವಾ ಅವಧಿಯಲ್ಲಿ ಎಂ.ಫಿಲ ಅಧ್ಯಯನಕ್ಕೆ ಅವಕಾಶ ಕಲ್ಪಿಸಿ ಪ್ರೋತ್ಸಾಹಿಸಿದ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ: ಚಂದ್ರಶೇಖರ ಕಂಬಾರ ಅವರಿಗೆ,

ಎಂ.ಫಿಲ ಅಧ್ಯಯನಕ್ಕೆ ಪ್ರೋತ್ಸಾಹಿಸಿ, ಈ ಪ್ರಾಥ ಪ್ರಬಂಧ ರಚನೆಯ ಮಾರ್ಗ ದರ್ಶಕರಾಗಿ, ಉಪಯುಕ್ತ ಸಲಹೆ ನೀಡಿ ಸಹಕರಿಸಿದ ಪ್ರೊ: ಪುರುಷೋತ್ತಮ ಬಿಳಿಮಲೆಯವರಿಗೆ,

ಅಧ್ಯಯನದ ಅವಧಿಯಲ್ಲಿ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿದ ಪ್ರೊ: ಎಚ್.ಎಸ್. ರಾಘವೇಂದ್ರರಾವ್, ಮತ್ತು ಪ್ರೊ: ಬಿ. ಶ್ರೀನಿವಾಸ ರಾಜು ಅವರಿಗೆ,

ಪ್ರಬಂಧದ ರಚನೆಯ ಎಲ್ಲಾ ಹಂತದಲ್ಲಿಯೂ ವಿಷಯದ ಬಗೆಗೆ ಚರ್ಚಿಸಿ ಬರೆದುದನ್ನು ಓದಿ ಅವಶ್ಯವಿದ್ದಲ್ಲಿ ಸೂಕ್ತ ಸಲಹೆ ಕೊಟ್ಟ ಗೆಳೆಯ ಡಾ: ಮೋಹನ ಕುಂಟಾರ ಅವರಿಗೆ,

ಎಂ.ಫಿಲ ವಿಷಯದ ಕುರಿತು ಚರ್ಚಿಸಿದ ಗೆಳೆಯ ಡಾ: ಎ. ಸುಬ್ಬಣ್ಣ ರೈ ಅವರಿಗೆ,

ಪ್ರಬಂಧದಲ್ಲಿ ಬರುವ ಎಲ್ಲಾ ರೇಖಾಚಿತ್ರಗಳನ್ನು ಅಂದವಾಗಿ ಬರೆದು ಕೊಟ್ಟ ಗೆಳೆಯ ಶ್ರೀ ಡಿ.ಎನ್ ನಾರಾಯಣ ಅವರಿಗೆ,

ಪ್ರಬಂಧ ರಚನೆಗೆ ಒಂದು ಮಾದರಿಯನ್ನು ಕೊಟ್ಟ ಗೆಳೆಯ ವಿಶ್ವನಾಥ ಬದಿಕಾನ ಅವರಿಗೆ,

ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಮದುವೆಯ ಆಚರಣೆಯ ಬಗೆಗಿನ ಹಾಡು, ಕಥೆ ಮತ್ತು ಮಾಹಿತಿಯನ್ನು ನೀಡಿ ಸಹಕರಿಸಿದ ಎಲ್ಲಾ ನಿರೂಪಕರಿಗೆ,

ಈ ಅಧ್ಯಯನಕ್ಕೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿದ ಕನ್ನಡ ವಿಶ್ವವಿದ್ಯಾಲಯದ ಎಲ್ಲಾ ಅಧ್ಯಾಪಕರುಗಳಿಗೆ,

ಅಧ್ಯಯನ ಸಂದರ್ಭದಲ್ಲಿ ಸಹಕರಿಸಿದ ನನ್ನ ಎಲ್ಲಾ ಗೆಳೆಯರಿಗೆ, ಮತ್ತು ವಿಶ್ವವಿದ್ಯಾಲಯದ ಸಹೋದ್ಯೋಗಿಗಳಿಗೆ;

ಬಹಳ ಕಡಿಮೆ ಅವಧಿಯಲ್ಲಿ ಅಂದವಾಗಿ ಬೆರಳಚ್ಚು ಮಾಡಿ ಕೊಟ್ಟ ಕುಮಾರಿ ಡಿ. ಪರಿಮಳ ಅವರಿಗೆ;

ನನ್ನ ಹೃದಯ ಪೂರ್ವಕ ಕೃತಜ್ಞತೆಗಳು.

ಹಂಪಿ

31.3.1994

ಸ. ಚಿ. ರಮೇಶ

ಕನ್ನಡ ವಿಶ್ವವಿದ್ಯಾಲಯ

ಹಂಪಿ. 583211

ಪ ರಿ ವಿ ಡಿ

ಅಧ್ಯಾಯ – 1

ಪ್ರಸ್ತಾವನೆ

1.1 ಪ್ರವೇಶ

1.2 ಪ್ರಸ್ತುತ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

1.1 ಪ್ರವೇಶ

'ಉಪ್ಪಾರ' ಎಂಬ ಹೆಸರಿನಿಂದ ಗುರುತಿಸುವ ಜನಾಂಗಗಳನ್ನು ಕರ್ನಾಟಕದಾದ್ಯಂತ ಇಂದು ಕಾಣಬಹುದು. ಕೆಲವೆಡೆ ವಿರಳವಾಗಿಯೂ ಮತ್ತು ಕೆಲವೆಡೆ ದಟ್ಟವಾಗಿಯೂ ಇವರು ವ್ಯಾಪಿಸಿದ್ದಾರೆ. ಬಳ್ಳಾರಿ, ಮೈಸೂರು, ಶಿವಮೊಗ್ಗ, ಚಿಕ್ಕಮಗಳೂರು, ತುಮಕೂರು, ಚಿತ್ರದುರ್ಗ, ರಾಯಚೂರು, ಬೆಳಗಾವಿ ಜಿಲ್ಲೆಗಳ ಕೆಲವು ಪ್ರದೇಶಗಳಲ್ಲಿ ಇವರು ದಟ್ಟವಾಗಿಯೇ ಇದ್ದಾರೆ. ಕರ್ನಾಟಕದ ಉಪ್ಪಾರ ಜನಾಂಗದವರು ಇಂದು ತಮ್ಮ ಜೀವನ ವೃತ್ತಿಗಾಗಿ ವಿವಿಧ ಕ್ಷೇತ್ರಗಳನ್ನು ಅವಲಂಬಿಸಿದ್ದಾರೆ. ಕೃಷಿಯನ್ನವಲಂಬಿಸಿದ ಭೂಮಾಲೀಕರೂ ಇದ್ದಾರೆ. ಆರ್ಥಿಕವಾಗಿ ದುರ್ಬಲರೂ ಇದ್ದಾರೆ. ಅಲ್ಲದೆ ಕರ್ನಾಟಕ ಸರಕಾರದ ಉನ್ನತ ವಲಯಗಳಲ್ಲೂ, ಸಿನಿಮಾ ಕ್ಷೇತ್ರಗಳಲ್ಲೂ, ವಾಣಿಜ್ಯೋದ್ಯಮಗಳಲ್ಲೂ ಇಂದು ಉಪ್ಪಾರ ಜನಾಂಗದವರನ್ನು ಕಾಣಬಹುದು. ಕರ್ನಾಟಕದೆಲ್ಲೆಡೆ ವಾಸಿಸುವ ಉಪ್ಪಾರ ಜನಾಂಗದ ಸಾಂಸ್ಕೃತಿಕ ಮತ್ತು ಸಾಮಾಜಿಕ ಬದುಕನ್ನು ಬಹುತೇಕವಾಗಿ ಇಂದು ನಿಯಂತ್ರಿಸುವವರು ಹೊಸದುರ್ಗದ ಬ್ರಹ್ಮವಿದ್ಯಾನಗರಿಯ ಶ್ರೀ ಚನ್ನೈಲಾದ್ರಿ ಶಿಲಾಪುರಿ ಮಹಾ ಸಂಸ್ಥಾನದ ಉಪವೀರ ಜಗದ್ಗುರುಗಳಾಗಿರುತ್ತಾರೆ. (ಮಠದ ಈಗಿನ ಜಗದ್ಗುರು ಶ್ರೀ ಶ್ರೀ ಶ್ರೀ ಲೇಪಾಕ್ಷಿ ಸ್ವಾಮಿಗಳು)

ಉಪ್ಪಾರ ಎನ್ನುವ ಹೆಸರಿನಿಂದ ಗುರುತಿಸಲ್ಪಡುವ ಇನ್ನೊಂದು ಪರಿಶಿಷ್ಟ ಜನಾಂಗವೂ ಕರ್ನಾಟಕದಲ್ಲಿದೆ. ಸುಣ್ಣತಯಾರಿ, ಗಾರೆ ವೃತ್ತಿಯನ್ನವಲಂಬಿಸಿದ್ದ ಇವರು ತೀರ್ಥಹಳ್ಳಿ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ವಾಸಿಸುತ್ತಿದ್ದಾರೆ. ಮೇಲೆ ಹೇಳಿದ ಉಪ್ಪಾರರಿಗೂ ಪರಿಶಿಷ್ಟ ಜನಾಂಗದ ಉಪ್ಪಾರರಿಗೂ ಯಾವುದೇ ರೀತಿಯ ಸಂಬಂಧಗಳಿಲ್ಲ.

ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನಲ್ಲಿ ವಾಸಿಸುವ ಉಪ್ಪಾರರನ್ನು ದೃಷ್ಟಿಯಲ್ಲಿರಿಸಿಕೊಂಡು ಪ್ರಸ್ತುತ ಅಧ್ಯಯನವನ್ನು ಮಾಡಲಾಗಿದೆ. ಹೊಸಪೇಟೆ, ಕಾಮಲಾಪುರ, ಉಪ್ಪಾರಹಳ್ಳಿ, ಪಾಪಿನಾಯಕನ ಹಳ್ಳಿ ಪ್ರದೇಶಗಳಲ್ಲಿ ಉಪ್ಪಾರರು ಹೆಚ್ಚಿನ ಸಂಖ್ಯೆಯಲ್ಲಿ ವಾಸವಾಗಿದ್ದಾರೆ. ಇಲ್ಲಿ ವಾಸಿಸುವ ಉಪ್ಪಾರ ಜನರಲ್ಲಿ ಆರ್ಥಿಕವಾಗಿ ದುರ್ಬಲ ವರ್ಗದವರೇ ಹೆಚ್ಚು. ಆದ್ದರಿಂದ ಶೈಕ್ಷಣಿಕವಾಗಿಯೂ ಇವರು ಹಿಂದುಳಿದವರಾಗಿದ್ದಾರೆ. ಅವರು ಜೀವನಾಧಾರಕ್ಕಾಗಿ ಇಂದು ವಿವಿಧ ವೃತ್ತಿಗಳನ್ನು ಅವಲಂಬಿಸಿದ್ದಾರೆ.

ಆರ್ಥಿಕವಾಗಿ ಸಬಲರಾದವರಲ್ಲಿ ಶಿಕ್ಷಣ ಪಡೆದು ಕೆಲವರು ಸರಕಾರದ ವರಿಷ್ಠ ಹುದ್ದೆಗಳಲ್ಲೂ ಸೇವೆ ಸಲ್ಲಿಸುತ್ತಿದ್ದಾರೆ.

ಉಪ್ಪಾರ ಮತ್ತು ಇತರ ಜನಾಂಗದವರಿಗೂ ಉಡುಗೆ ತೊಡುಗೆಗಳಲ್ಲಿ ಯಾವುದೇ ರೀತಿಯ ವ್ಯತ್ಯಾಸವಿಲ್ಲ. ಸಾಮಾಜಿಕ ವಲಯದಲ್ಲೂ ಇವರು ಇತರರಿಂದ ಜನಾಂಗಿಕವಾಗಿ ಭಿನ್ನರಾಗುಳಿದಿಲ್ಲ. ಆದರೆ ಧಾರ್ಮಿಕ ಆಚರಣೆಗಳಲ್ಲಿ ಉಳಿದ ಜನಾಂಗಗಳಿಗಿಂತ ಭಿನ್ನರಾಗಿದ್ದಾರೆ. ಆದರೂ ಈ ಪ್ರದೇಶಗಳಲ್ಲಿ ವಾಸಿಸುವ ಇತರ ಬಹು ಸಂಖ್ಯಾತ ಜನರ ಆಚರಣೆಗಳಿಂದ ಇವರು ಸಾಕಷ್ಟು ಪ್ರಭಾವ ಹೊಂದಿದ್ದಾರೆ ಎಂಬುದನ್ನು ಗಮನಿಸಬಹುದು. ಈ ಪ್ರದೇಶದ ಉಪ್ಪಾರರು ಗಾಳಮ್ಮ, ಊರಮ್ಮ ಮೊದಲಾದ ಗ್ರಾಮದೇವತೆಗಳನ್ನು ಆರಾಧಿಸುತ್ತಾರೆ. ಜೊತೆಗೆ ಸ್ಥಳದೇವತೆಗಳನ್ನು ಆರಾಧಿಸುವುದಿದೆ. ಆದರೆ ಕರ್ನಾಟಕದ ಇತರೆಡೆಗಳಲ್ಲಿ ಮಲೆಯ ಮಹಾದೇಶ್ವರ , ಅಂತರಗಟ್ಟಮ್ಮ, ಬಳ್ಳಾರಮ್ಮ ಮೊದಲಾದ ಗ್ರಾಮದೇವತೆಗಳನ್ನು ಪೂಜಿಸುತ್ತಾರೆ. ಹಾಗಾಗಿ ಕರ್ನಾಟಕದ ಎಲ್ಲಾ ಭಾಗಗಳಲ್ಲೂ ಉಪ್ಪಾರ ಜನಾಂಗಗಳಲ್ಲಿನ ಧಾರ್ಮಿಕ ಕ್ರಿಯಾ ಆಚರಣೆಗಳಲ್ಲಿ ಪ್ರಾದೇಶಿಕ ಭಿನ್ನತೆಯನ್ನು ಗುರುತಿಸುವುದು ಸಾಧ್ಯವಿದೆ.

ಹೊಸಪೇಟೆ ಪ್ರದೇಶದ ಉಪ್ಪಾರರ ಸಾಂಸ್ಕೃತಿಕ ಬದುಕಿನ ಮೇಲೆ ನೆರೆ ರಾಜ್ಯವಾದ ಆಂಧ್ರ ಪ್ರದೇಶದಲ್ಲಿ ವಾಸಿಸುವ ಉಪ್ಪಾರರ ಪ್ರಭಾವವಾಗಿರುವುದು ಇದೆ. ಆಂಧ್ರದಲ್ಲಿರುವ ಉಪ್ಪಾರರ ಜೊತೆಗೆ ಈ ಪ್ರದೇಶದ ಉಪ್ಪಾರರು ಕಳೆದ ಹಲವಾರು ವರ್ಷಗಳಿಂದ ವೈವಾಹಿಕ ಸಂಬಂಧ ಬೆಳೆಸುತ್ತಾ ಬಂದಿದ್ದಾರೆ. ಕರ್ನಾಟಕದಾದ್ಯಂತ ಉಪ್ಪಾರರು ಕನ್ನಡವನ್ನು ಮಾತೃ ಭಾಷೆಯಾಗುಳಿಸಿಕೊಂಡಿದ್ದಾರೆ. ಆಂಧ್ರದ ಉಪ್ಪಾರರು ತೆಲುಗು ಮಾತನಾಡುವವರಾಗಿದ್ದಾರೆ. ಪ್ರಾದೇಶಿಕವಾದ ವ್ಯತ್ಯಾಸಗಳಿಂದಾಗಿ ಇದು ತಲೆದೋರಿದರೂ ಸಹ ಈ ಪ್ರದೇಶದ ಉಪ್ಪಾರರು ಅವರನ್ನು ತಮ್ಮವರೆಂದು ಒಪ್ಪಿಕೊಂಡು ಸಂಬಂಧ ಬೆಸೆಸುತ್ತಿದ್ದಾರೆನ್ನುವುದು ಗಮನಾರ್ಹ ಅಂಶ. ಪ್ರಸ್ತುತ ಪ್ರಬಂಧದಲ್ಲಿ ಅವುಗಳನ್ನು ವಿಸ್ತರಿಸದೆ ಹೊಸಪೇಟೆ ಪ್ರದೇಶದ ಉಪ್ಪಾರ ಜನಾಂಗದಲ್ಲಿನ ಸಾಂಪ್ರದಾಯಕ ಮದುವೆಯ ಸಾಂಸ್ಕೃತಿಕ ವಿಶ್ಲೇಷಣೆಯನ್ನು ಮಾಡಲಾಗಿದೆ.

1.2 ಪ್ರಸ್ತುತ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಆದಿಮಾನವ ತನ್ನ ಸಂಸ್ಕೃತಿ ವಿಕಾಸಗೊಂಡಾಗ ಕೆಲವು ಸಾಮಾಜಿಕ, ಕೌಟುಂಬಿಕ ವ್ಯವಸ್ಥೆಗಳನ್ನು ರೂಪಿಸಿಕೊಂಡ. ಈ ವ್ಯವಸ್ಥೆಯ ಒಳಗೆ ಅನೇಕ ಆಚರಣೆಗಳ ಮೂಲಕ ತನ್ನ ಅಸ್ತಿತ್ವವನ್ನು ಸಮಾಜದಲ್ಲಿ ಗುರುತಿಸಿಕೊಂಡ. ಮನುಷ್ಯ ಹುಟ್ಟಿನಿಂದ ಸಾಯುವ ತನಕ ಅನೇಕ ಸಂಸ್ಕಾರಗಳ ಮೂಲಕ ತನ್ನ ಬದುಕಿನ ವ್ಯವಸ್ಥೆಗೆ ಒಂದು ಚೌಕಟ್ಟನ್ನು ಧಾರ್ಮಿಕ, ಸಾಮಾಜಿಕ ಮಹತ್ವವನ್ನು ಕಲ್ಪಿಸಿಕೊಂಡ. ಈ ಸಂಸ್ಕಾರಗಳಲ್ಲಿ ಷೋಡಶ ಸಂಸ್ಕಾರಗಳು ಮುಖ್ಯವಾದವುಗಳು. ಅವುಗಳಲ್ಲಿ ಮದುವೆಯೂ ಒಂದು ಪ್ರಮುಖ ಹಂತ. ಮದುವೆ ಎಂದರೆ, ಹೆಣ್ಣು – ಗಂಡನ್ನು ಜೊತೆ ಗೂಡಿಸುವುದು ಅಷ್ಟೆ ಅಲ್ಲ; ಹೆಣ್ಣು ಗಂಡು ಜೊತೆ ಗೂಡಿ ಬಾಳುವುದಕ್ಕೆ ಹತ್ತಾರು ಜನರು ಬಹಿರಂಗವಾಗಿ ಕೊಡುವ ಅನುಮತಿಯೂ ಅಲ್ಲ; ಮದುವೆ ಎಂಬುದೊಂದು ವಿಶಿಷ್ಟ ಸಂಸ್ಕಾರ. ಅದು ಮಾನವನ ಸಂಸ್ಕೃತಿಯ ದ್ಯೋತಕವೂ ಹೌದು. ವ್ಯಕ್ತಿಯ ಬದುಕಿನಲ್ಲಿ ಈ ಮದುವೆ ಎನ್ನುವ ಸಂಸ್ಕಾರ ಆತನ ಇಡೀ ಬದುಕಿನ ಮೇಲೆ ಅಗಾಧವಾದ ಪರಿಣಾಮವನ್ನು ಬೀರುತ್ತದೆ. ಈ ದೃಷ್ಟಿಯಿಂದ ಒಬ್ಬನ ವ್ಯಕ್ತಿತ್ವದ ಮಹತ್ವ ಕೂಡ ಈ ಮದುವೆ ಎಂಬ ಸಂಸ್ಕಾರವನ್ನೇ ಅವಲಂಬಿಸಿರುತ್ತದೆ. ಆದ್ದರಿಂದ ಒಟ್ಟು ಮಾನವ ಸಮಾಜದ ಸಂಸ್ಕೃತಿಯಲ್ಲಿ ಮದುವೆ ಎಂಬ ಸಂಸ್ಕಾರ ವೈಶಿಷ್ಟ್ಯಪೂರ್ಣವಾಗಿದೆ. ಮದುವೆ ಸಂದರ್ಭದ ಧಾರ್ಮಿಕ, ಕೌಟುಂಬಿಕ, ಸಾಮಾಜಿಕ ಆಚರಣೆಗಳು ಒಟ್ಟು ಮಾನವ ಜನಾಂಗದ ಸಂಸ್ಕೃತಿ ದತ್ತವಾದವುಗಳಾಗಿರುತ್ತವೆ. ಈ ಅರ್ಥದಲ್ಲಿ ಸಾಂಪ್ರದಾಯಿಕ ಮದುವೆಯ ಅಧ್ಯಯನಕ್ಕೆ ಒಂದು ಜನಾಂಗದ ಸಂಸ್ಕೃತಿಯ ಅಧ್ಯಯನದ ಮಹತ್ವವಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಪ್ರಬಂಧದಲ್ಲಿ ಹೊಸಪೇಟೆ ತಾಲ್ಲೂಕಿನ ಉಪ್ಪಾರ ಜನಾಂಗದಲ್ಲಿ ಆಚರಣೆಯಲ್ಲಿರುವ ಮದುವೆಯ ಸಂಪ್ರದಾಯಗಳನ್ನು ಕುರಿತು ವಿವೇಚಿಸಲಾಗಿದೆ. ಪ್ರಬಂಧದಲ್ಲಿ ಸಂಪ್ರದಾಯಿಕ ಮದುವೆ ಅಧ್ಯಯನ ಮಾಡುವಾಗ ಇಲ್ಲಿ ಸಾಂಸ್ಕೃತಿಕವಾಗಿ ಹೆಚ್ಚು ಒತ್ತು ಕೊಡಲಾಗಿದೆ. ಈ ಅಧ್ಯಯನದಲ್ಲಿ ಹೊಸಪೇಟೆ ತಾಲ್ಲೂಕಿನ ಒಟ್ಟು ಮಾನವ ಸಮುದಾಯದ ಮಧ್ಯೆ ಉಪ್ಪಾರ ಜನಾಂಗದ ಮದುವೆ ಆಚರಣೆ ಕರ್ಮಗಳು ಹೇಗೆ ವಿಶಿಷ್ಟವಾಗುತ್ತವೆ ಎಂಬುದರತ್ತ ಕೇಂದ್ರ ಗಮನವಿದೆ. ಒಟ್ಟು ಈ ಪ್ರದೇಶದ ಸಂಸ್ಕೃತಿಗೆ ಈ ಜನಾಂಗದ ಕೊಡುಗೆಗಳನ್ನು ಗುರುತಿಸುವ ಪ್ರಯತ್ನವನ್ನು ಸಹ ಮಾಡಲಾಗಿದೆ.

ಉಪ್ಪಾರ ಜನಾಂಗದಲ್ಲಿ ಮದುವೆ ಸಂಸ್ಕಾರಕ್ಕೆ ಮುನ್ನ ಮತ್ತು ಮದುವೆಯ ತರುವಾಯದ ಆಚರಣೆಗಳನ್ನು ಸಹ ಅಧ್ಯಯನದ ವ್ಯಾಪ್ತಿಯಲ್ಲಿ ಅಳವಡಿಸಿ ಕೊಳ್ಳಲಾಗಿದೆ. ಹೆಣ್ಣು ನೋಡುವಲ್ಲಿಂದ ಆರಂಭಿಸಿ ಪ್ರಸ್ತದವರೆಗಿನ ಆಚರಣೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಪ್ರಬಂಧದಲ್ಲಿ ಅಧ್ಯಯನ ಮಾಡಲಾಗಿದೆ. ಅಧ್ಯಯನದಲ್ಲಿ ಕಂಡುಕೊಂಡ ವಿಶಿಷ್ಟ ಅಂಶಗಳನ್ನು ಮತ್ತು ಅದರ ಕೊಡುಗೆಗಳನ್ನು ಸಹ ಗುರುತಿಸಲಾಗಿದೆ.

ಅಧ್ಯಯನಕ್ಕೆ ಪೂರಕವಾದ ಮಾಹಿತಿಗಳನ್ನು ಸ್ವತಃ ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಲಾಗಿದೆ. ಅಧ್ಯಯನಕ್ಕೆ ಅನುಕೂಲವಾಗುವ ಹಾಗೆ ಹೊಸಪೇಟೆ ನಗರ ಸಭೆ ವ್ಯಾಪ್ತಿಯಲ್ಲಿ ನೆಲೆಸಿರುವ, ಉಪ್ಪಾರರಿಂದಲೂ, ಅನಂತಶಯನ ಗುಡಿ, ಉಪ್ಪಾರ ಹಳ್ಳಿ, ಮಲಪನ ಗುಡಿ, ಕಮಲಾಪುರ, ಪಾಪಿನಾಯಕನ ಹಳ್ಳಿಗಳಲ್ಲಿ ನೆಲೆಸಿರುವ ಉಪ್ಪಾರರಿಂದ ಮಾಹಿತಿಗಳನ್ನು ಸಂಗ್ರಹಿಸಿಕೊಳ್ಳಲಾಗಿದೆ. ಪ್ರಬಂಧಕ್ಕೆ ಪೂರಕವಾಗಿ ಈಗಾಗಲೆ ಪ್ರಕಟವಾಗಿರುವ ಜನಾಂಗಿಕ ಅಧ್ಯಯನದ ಕೃತಿಗಳಿಂದ ಮತ್ತು ವಿದ್ವಾಂಸರಿಂದ ಮಾಹಿತಿಗಳನ್ನು ಪಡೆಯಲಾಗಿದೆ. ಈ ಎಲ್ಲಾ ಮಾಹಿತಿಗಳ ಹಿನ್ನೆಲೆಯಲ್ಲಿ ಒಟ್ಟು ಪ್ರಬಂಧಕ್ಕೆ ಒಂದು ಅರ್ಥಪೂರ್ಣವಾದ ಚೌಕಟ್ಟನ್ನು ಒದಗಿಸಲಾಗಿದೆ.

—.—

ಅಧ್ಯಾಯ – 2

ಉಪ್ಪಾರ ಜನಾಂಗದ ಪರಿಚಯ

2.1 ಉಪ್ಪಾರ ಜನಾಂಗದ ಭೌಗೋಳಿಕ ಪರಿಸರ

2.2 'ಉಪ್ಪಾರ' ಶಬ್ದದ ಪ್ರಾಚೀನತೆ ಮತ್ತು ಅರ್ಥ

2.3 'ಉಪ್ಪಾರ' ಶಬ್ದದ ನಿಷ್ಪತ್ತಿ

2.4 ಪೌರಾಣಿಕ ಹಿನ್ನಲೆ

2.5 ಉಪ್ಪಾರರ ಪೂರ್ವ ಪರಿಚಯ

2.6 ಉಪ್ಪಾರರ ಕುಟುಂಬ ಪದ್ಧತಿ

2.1 ಉಪ್ಪಾರ ಜನಾಂಗದ ಭೌಗೋಳಿಕ ಪರಿಸರ:

ಬಳ್ಳಾರಿ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿಯೂ ಉಪ್ಪಾರರು ವಾಸಿಸುತ್ತಾರೆ. ಸುಮಾರು ಮೂರು ಲಕ್ಷಕ್ಕೂ ಹೆಚ್ಚು ಇದ್ದಾರೆ. ಹೊಸಪೇಟೆ ತಾಲೂಕಿನಲ್ಲಿ ಅಂದಾಜು ಇಪ್ಪತ್ತು ಸಾವಿರ ಉಪ್ಪಾರರು ವಾಸಿಸುತ್ತಿದ್ದಾರೆ. ಬಳ್ಳಾರಿ ಜಿಲ್ಲೆಯ ಕೆಲವು ಗಡಿ ಭಾಗದ ಉಪ್ಪಾರರು ತೆಲುಗು ಮಾತನಾಡುತ್ತಾರೆ. ಇವರಿಗೆ ತೆಲುಗು ಉಪ್ಪಾರರೆಂದು ಕರೆಯುತ್ತಾರೆ. ಇವರ ಸಂಖ್ಯೆ ಬಹಳ ಕಡಿಮೆ. ಇವರು ಆಂಧ್ರದಿಂದ ಬಂದವರು. ಈ ಆಂಧ್ರದ ಉಪ್ಪಾರರಿಗೂ ಇಲ್ಲಿಯ ಉಪ್ಪಾರರಿಗೂ ವೈವಾಹಿಕ ಸಂಬಂಧವಿದೆ. ಹೊಸಪೇಟೆ ಉಪ್ಪಾರರ ಮಾತೃ ಭಾಷೆ ಕನ್ನಡವಾಗಿದೆ. ಇಲ್ಲಿನ ಬಹು ಸಂಖ್ಯಾತ ಜನಾಂಗಗಳಾದ ಲಿಂಗಾಯತರ, ಬ್ರಾಹ್ಮಣರ ಮತ್ತು ಬೇಡ ನಾಯಕರ ಪ್ರಭಾವ ಇವರ ಮೇಲಾಗಿದೆ. ಇವರೆಲ್ಲರೂ ಕನ್ನಡವನ್ನೇ ಮಾತೃ ಭಾಷೆಯಾಗಿ ಬಳಸುತ್ತಾರೆ.

2.2 'ಉಪ್ಪಾರ' ಶಬ್ದದ ಪ್ರಾಚೀನತೆ ಮತ್ತು ಅರ್ಥ:

ಜಾತಿ ಸೂಚಕವಾದ 'ಉಪ್ಪಾರ' ಪದ ಮೊದಲು ವೃತ್ತಿ ಸೂಚಕವಾಗಿತ್ತು. ಪ್ರಾಚೀನ ಶಾಸನಗಳಲ್ಲಿ ಉಪ್ಪಾರ ಗೌಡ, ಉಪ್ಪರಿಗ ಶೆಟ್ಟಿ ಎನ್ನುವ ಉಲ್ಲೇಖಗಳು ಇವೆ. ಇವುಗಳನ್ನು ಗಮನಿಸಿದರೆ, ರಾಜ ಮಹಾರಾಜರ ಕಾಲದಲ್ಲಿ ಇವರಿಗೆ ಒಳ್ಳೆಯ ಸ್ಥಾನ ಇದ್ದುದೆಂದು ತಿಳಿಯುತ್ತದೆ. 'ಗೌಡ' ಮತ್ತು 'ಶೆಟ್ಟಿ' ಎನ್ನುವುದು 'ನಾಯಕ' ಮತ್ತು 'ವ್ಯಾಪಾರಿ' ಗಳನ್ನು ತಿಳಿಸುವ ಶಬ್ದವಾಗಿವೆ. ಹೊನ್ನೂರು ಕೆಂಕೆರೆ ಕಟ್ಟೆಯಲ್ಲಿ ಹುಗಾತು ಹೋಗಿದ್ದ ಕಲ್ಲು ಹೊಯ್ಸಳರ ವೀರ ನರಸಿಂಹ ದೇವನ ಕಾಲದ್ದು (1283). ಹರದರ ಹಳ್ಳಿ ತಾಮ್ರಶಾಸನ ಇದು ಹೊಯ್ಸಳರ ಕಾಲದ್ದು (1246). ಇವೆರಡರಲ್ಲಿಯೂ ಉಪ್ಪಾರರ ಬಗೆಗಿನ ಉಲ್ಲೇಖಗಳಿವೆ. ಉಪ್ಪನ್ನು ತಯಾರಿಸುವ ವೃತ್ತಿ ಮಾಡಿದವರೆಲ್ಲ 'ಉಪ್ಪಾರ' ರೆಂದು ಕರೆಯಿಸಿಕೊಂಡರೆಂದು ಶಾಸನಗಳಿಂದ ಖಚಿತವಾಗಿ ತಿಳಿದು ಬರುತ್ತದೆ.

ಕಿಟೆಲ್ ಕೋಶದಲ್ಲಿ 'ಉಪ್ಪಾರ' ಎಂಬ ಪದಕ್ಕೆ A man of the Salt maker Caste ಎಂಬ ಅರ್ಥವಿದೆ (ಕಿಟ್ಟೆಲ್ 1894 – 245) 'ಉಪ್ಪಲಿಗ' ಎಂಬುದಕ್ಕೆ Uppaliga a man who belongs to a division of the Salt - maker caste, the members of which are also fishermen (ಕಿಟ್ಟೆಲ್ 1894 – 245) ಎಂಬ ಅರ್ಥವೂ ಇದೆ. 'ಉಪ್ಪಾರ' ಎಂಬುದಕ್ಕೆ 'ಕಸ್ತೂರಿ ಕೋಶದಲ್ಲಿ ಗೋಡೆ ಕಟ್ಟುವವನು, ಗಾರೆ, ಎಂಬುದಾಗಿಯೂ 'ಉಪ್ಪಲಿಗ' ಎಂಬುದಕ್ಕೆ ಉಪ್ಪಾರ, ಮೀನುಗಾರ, ಉಪ್ಪು ತಯಾರಿಸುವವನು ಎನ್ನುವ ಅರ್ಥವಿದೆ (ಕವಂ. 1957 – 120) ಗುರುನಾಥ ಜೋಶಿಯವರ ಶಬ್ದಕೋಶದಲ್ಲಿ 'ಉಪ್ಪಾರ' ಎಂದರೆ ಮನೆ ಕಟ್ಟುವವ. ಗೋಡೆ ಕಟ್ಟುವವ, ಉಪ್ಪುಗಾರ, ಎಂದು ಅರ್ಥವನ್ನು ಕೊಡಲಾಗಿದೆ. (1971 – 95) 'ಸಿರಿಗನ್ನಡ ಅರ್ಥಕೋಶದಲ್ಲಿ 'ಉಪ್ಪಾರ' ಎಂದರೆ ಗಾರೆ ಹಾಕುವವ, ಗೋಡೆ ಮಾಡುವವ ಎನ್ನುವ ಅರ್ಥವಿದೆ (ಕಾರಂತ:1990 – 63) 'ಉಪ್ಪಾರ' ಎಂಬುದಕ್ಕೆ ಕನ್ನಡ ನಿಘಂಟುವಿನಲ್ಲಿ ಉಪ್ಪು ತಯಾರಿಸುವವನು, ಆ ಜಾತಿಗೆ ಸೇರಿದವನು ಎಂಬ ಅರ್ಥವಿದೆ. (ನರಸಿಂಹಾಚಾರ – 1970 – 959) 'ಕನ್ನಡ ರತ್ನ ಕೋಶದಲ್ಲಿ 'ಉಪ್ಪಾರ' ಎಂದರೆ ಉಪ್ಪು ತಯಾರಿಸುವವನು, ಮಣ್ಣು ಅಥವಾ ಗಾರೆ ಕೆಲಸದವನು ಎನ್ನುವ ಅರ್ಥವಿದೆ (ಹಾ. ಮಾ. ನಾ 1977 – 31) ಕನ್ನಡ ಮತ್ತು ಇಂಗ್ಲಿಷ್ ನಿಘಂಟುನಲ್ಲಿ 'ಉಪ್ಪಲಿಗ' ಎಂದರೆ ಉಪ್ಪು ತಯಾರಿಸುವವನು ಎಂಬುದಾಗಿ ಇದೆ. (ವೆಂಕಟಸುಬ್ಬಯ್ಯ – 1985 – 110) ಡಾ: ಚಂದ್ರಶೇಖರ ಕಂಬಾರರು ಕನ್ನಡ ಜಾನಪದ ವಿಶ್ವಕೋಶ ಸಂಪುಟ 1 ರಲ್ಲಿ ಉಪ್ಪಾರರು ದಕ್ಷಿಣಭಾರತ ತುಂಬ ಇರುವ ಒಂದು ಜನಾಂಗವೆಂದು ತಮಿಳು, ತೆಲುಗು ಮತ್ತು ಕನ್ನಡ ಉಪ್ಪಾರರು ಒಂದೇ ಶಾಖೆಗೆ ಸೇರಿದ್ದಿರಬೇಕು. ಕಾಲಾನಂತರದಲ್ಲಿ ದೇಶದ ಬೇರೆ ಬೇರೆ ಭಾಗಗಳಿಗೆ ಚದುರಿ ಆ ಭಾಗದ ಭಾಷೆಯನ್ನು ತಮ್ಮದಾಗಿಸಿ ಕೊಂಡಿರಬೇಕು ಎಂದಿದ್ದಾರೆ. "ಉಪ್ಪಾರರ ಮೂಲ ಕಸುಬು ಕೆರೆ, ಭಾವಿ, ಕಾಲುವೆ ತೋಡುವುದು. ದಕ್ಷಿಣ ಭಾರತದ ಜನತೆ ಮುಖ್ಯವಾಗಿ ಕೃಷಿಯನ್ನೇ ಅವಲಂಬಿಸಿದವರು. ಉಪ್ಪಾರರು ಈ ಅಗತ್ಯಗಳನ್ನು ಪೂರೈಸುವುದರ ಜೊತೆಗೆ ಇಟ್ಟಿಗೆ ಮಾಡುವುದು ಮನೆ ಕಟ್ಟುವುದು, ಕೋಟೆ ಕಟ್ಟುವುದು ಇವುಗಳನ್ನು ಮಾಡುತ್ತಿದ್ದರು." (ಚಂದ್ರಶೇಖರ ಕಂಬಾರ: 1985 – 215) "ಉಪ್ಪಾರರ ಇನ್ನೊಂದು

ಉದ್ಯೋಗ ಮಣ್ಣುಪ್ಪನ್ನು ತಯಾರಿಸುವುದು. ಇವರಲ್ಲಿ ಶೈವರು, ವೈಷ್ಣವರು ಇರುವರಾದರೂ ಸುಂಕಾಳಮ್ಮ, ತಿಮ್ಮಪ್ಪ, ಜಂಬುಳಮ್ಮ ದೇವರನ್ನು ಪೂಜಿಸುತ್ತಾರೆ. ಕನ್ನಡ, ತೆಲುಗು ಉಪ್ಪಾರರು, ಹಾಗೂ ತಮಿಳು ಉಪ್ಪಿಳಿಯನ್ನರ ನಡುವೆ ಮದುವೆ ನಡೆಯುವುದಿಲ್ಲ." (ಕಂಬಾರ:1985 – 215). ಕಾಲ ಬದಲಾದಂತೆ ಮದುವೆ ಸಂಬಂಧದ ವ್ಯಾಪ್ತಿಯೂ ವಿಸ್ತರಿಸುತ್ತದೆ. ಕನ್ನಡ ಉಪ್ಪಾರರಿಗೂ ತೆಲುಗು ಉಪ್ಪಾರರಿಗೂ ಈಚಿನ ದಿನಗಳಲ್ಲಿ ಮದುವೆ ನಡೆಯುತ್ತದೆ. (ನೋಡಿ ಅನುಬಂಧ: ಕರೆಂಟಿಯೋರಿ)

2.3 'ಉಪ್ಪಾರ' ಪದದ ನಿಷ್ಪತ್ತಿ:

ಉಪ್ಪಾರ ಪದದ ಬಗೆಗೆ ವಿದ್ವಾಂಸರು ಚರ್ಚಿಸಿದ ವಾದಗಳು ಈ ಕೆಳಗಿನಂತಿವೆ.

1. ಉಪ್ಪು — ಆರೆ > — ಉಪ್ಪಾರ ಆಗಿದೆ. 'ಆರೆ' ಜಲವಾಚಕ ಶಬ್ದವಾಗಿದೆ. (ರಘುಪತಿಭಟ್ಟ — 1979 — 43)

2. ಉಪವೀರ ಶಬ್ದವು ಅಪಭ್ರಂಶ ಹೊಂದಿ 'ಉಪ್ಪಾರ' ಆಗಿದೆ ಎಂದು ಹೊಸದುರ್ಗ ತಾಲ್ಲೂಕಿನ ಶ್ರೀ ರಾಮಚಂದ್ರಪ್ಪನವರು ಹೇಳಿದ್ದಾರೆ.

3. ಶಿವನು ತನ್ನ ಬೆವರಿನ ಹನಿಯಿಂದ ಒಬ್ಬನನ್ನು ಸೃಷ್ಟಿಸಿ, ಆತನಿಗೆ ಉಪ್ಪು ತಯಾರಿಸಲು ಹೇಳಿದ. ಅಂದಿನಿಂದ ಅವನ ವಂಶದವರು 'ಉಪ್ಪಾರ' ರಾದರು.

4. ಮಣ್ಣಿನಿಂದ ಉಪ್ಪನ್ನು ತಯಾರಿಸುವುದರಿಂದ ಆ ವ್ಯಕ್ತಿಯವರಿಗೆ 'ಉಪ್ಪಾರ' ಎಂಬ ಪದ ಬಳಕೆಗೆ ಬಂದಿದೆ(ಚಿಕ್ಕಮಗಳೂರು ಗೆಜೆಟಿಯರ್ 1981 — 84)

5. ಉಪ್ಪರಿಗೆ(ಮಹಡಿ) ಮನೆ ಕಟ್ಟುತ್ತಿದ್ದವರಿಗೆ 'ಉಪ್ಪಾರ' ಎಂದು ಕರೆಯಲಾಗಿತ್ತು.

6. ದಕ್ಷಿಣ ಭಾರತದಲ್ಲಿ ಉಪ್ಪಿನ ತಯಾರಿಕೆಯನ್ನೇ ಕಸುಬಾಗಿಸಿಕೊಂಡಿದ್ದ ಜನದ ವರ್ಗದವರಿಗೆ ಉಪ್ಪರಿಯನ್, ಉಪ್ಪಾರ, ಉಪ್ಪಲಿಗ, ಎಂದು ಕರೆಯಲಾಗಿದೆ. ಎಂದು ಥರ್ಸ್ಟನ್ ಅವರು Castes and Tribes of Southern India, ದಲ್ಲಿ 7 ನೆ ಸಂಪುಟದಲ್ಲಿ ವಿವರಿಸಿದ್ದಾರೆ.

2.4 ಉಪ್ಪಾರರ ಪೌರಾಣಿಕ ಹಿನ್ನಲೆ:

ಕಥೆ1. ಶ್ರೀ ರಾಮನ ಪೂರ್ವಜರಲ್ಲೊಬ್ಬನಾದ ಬಾಹುಕ ರಾಜ ಶತ್ರುಗಳಿಂದ ಸೋತು ಕಾಡಿನಲ್ಲಿದ್ದು ಕೆಲವು ದಿನಗಳ ನಂತರ ತೀರಿಕೊಂಡನು. ಆಗಲೇ ಗರ್ಭಿಣಿಯಾಗಿದ್ದ ಅವನ ಹಿರಿಯ ಹೆಂಡತಿ ಸವತಿಯರ ಮೋಸದಿಂದ ವಿಷ ಸೇವಿಸಲ್ಪಟ್ಟರೂ ವಿಷವನ್ನು ಜೀರ್ಣಿಸಿ ಜನಿಸಿದ ಶಿಶುವಿಗೆ ಔರ್ವ ಋಷಿಗಳು 'ಸಗರ' ನೆಂದು ನಾಮಕರಣ ಮಾಡಿದರು, ಆತನು

ಬಹಳ ವರ್ಷ ಚಕ್ರವರ್ತಿಯಾಗಿ ಆಳಿದನು. ಸಗರನಿಗೆ ಸುಮತಿ ಮತ್ತು ಕೇಶಿನಿಯರೆಂಬ ಇಬ್ಬರು ಪತ್ನಿಯರಿದ್ದರು. ಸುಮತಿಗೆ ಅರವತ್ತು ಸಾವಿರ ಮಕ್ಕಳು ಮತ್ತು ಕೇಶಿನಿಗೆ ಅಸಮಂಜಸನೆಂಬ ಮಗ ಇದ್ದನು. ಅಸಮಂಜಸನಿಗೆ 'ಅಂಶುಮಾನ' ನೆಂಬ ಮಗನನ್ನು ಪಡೆದ ನಂತರ ರಾಜ್ಯವನ್ನು ತ್ಯಜಿಸಿದನು. 'ಸಗರ' ಚಕ್ರವರ್ತಿಯು 99 ಅಶ್ವಮೇಧ ಯಾಗಗಳನ್ನು ಮಾಡಿ ನೂರನೇ ಯಾಗಕ್ಕೆ ಇಂದ್ರನಿಂದ ವಂಚಿಸಲ್ಪಟ್ಟು ಕಪಿಲ ಮಹರ್ಷಿಗಳ ಶಾಪಕ್ಕೆ ಒಳಗಾಗಿ ಸುಮತಿಯ ಪುತ್ರರೆಲ್ಲರೂ ಸುಟ್ಟು ಬೂದಿಯಾದರು. ಇದನ್ನು ಅಂಶುಮಾನನು ತಿಳಿದು, ಕಪಿಲರಿಂದ ಆಶೀರ್ವಾದಗಳನ್ನು ಪಡೆದು ಕುದುರೆಯನ್ನು ತಂದು ನೂರನೆ ಅಶ್ವಮೇಧ ಯಾಗವನ್ನು ಪೂರ್ಣಗೊಳಿಸುವಂತೆ ಸಗರನಿಗೆ ಸಹಾಯ ಮಾಡಿದನು. ತನ್ನ ಮಗ ದಿಲೀಪನನ್ನು ಸಗರನಿಗೆ ಒಪ್ಪಿಸಿ ಹಿಮಾಲಯಕ್ಕೆ ಹೋಗಿ ತನ್ನ ಆಯುಸ್ಸು ಮುಗಿಯುವವರೆಗೆ ತಪಸ್ಸು ಮಾಡಿ ತೀರಿಕೊಂಡನು. ದಿಲೀಪನು ತನ್ನ ಮಗ ಭಗೀರಥನಿಗೆ ರಾಜ್ಯವನ್ನು ಒಪ್ಪಿಸಿ ತನ್ನ ಆಯುಸ್ಸು ಪೂರ್ತಿ ತಪಸ್ಸನ್ನು ಮಾಡಿ ತೀರಿಕೊಂಡನು.

ಭಗೀರಥನು ಹಿಂದಿನ ವಿಷಯಗಳೆಲ್ಲವನ್ನೂ ತಿಳಿದು ದೇವಗಂಗೆಯನ್ನು ಕುರಿತು ತಪಸ್ಸು ಮಾಡಿ ಗಂಗೆಯ ವರ ಪಡೆದು ಭೂಮಿಗೆ ಬರುವಂತೆ ವಚನ ಪಡೆದು ಗಂಗೆ ಧರೆಗೆ ಬರುವಾಗ ಯಾವ ತೊಂದರೆಯೂ ಆಗದಂತೆ ನಿಧಾನವಾಗಿ ಭೂಮಿಗೆ ಬಂದು ಉಪಯುಕ್ತವಾಗಿ ಹರಿಯುವಂತೆ ಸಹಾಯಮಾಡಲು ಶಿವನ ವರವನ್ನು ಪಡೆದು ಗಂಗೆಯನ್ನು ತನ್ನ ತಾತಂದಿರ ಬೂದಿಯ ರಾಶಿಗಳತ್ತ ಕರೆದೊಯ್ದು ಅವುಗಳ ಮೇಲೆ ಹರಿಯುವಂತೆ ಮಾಡಿ ಅವರೆಲ್ಲರನ್ನೂ ಸದ್ಗತಿ ಪಡೆಯುವಂತೆ ಮಾಡಿದ. ಈ ಕಥೆಯಲ್ಲಿ ಬರುವ 'ಸಗರ' ಮತ್ತು 'ಭಗೀರಥ' ಹೆಸರನ್ನು ಉಪ್ಪಾರರ ಬೆಡಗಿನಲ್ಲಿಯೂ ಕಾಣಬಹುದು. ಮದುವೆಯಲ್ಲಿ ಹೆಚ್ಚಾಗಿ ಇವರು 'ಸಗರ' ಮತ್ತು 'ಭಗೀರಥ' ಬೆಡಗಿನವರೊಂದಿಗೆ ಸಂಬಂಧ ಬೆಳೆಸುತ್ತಾರೆ.

ಕಥೆ 2. ಒಮ್ಮೆ ಪಾರ್ವತಿಯು ಊಟ ಮಾಡುತ್ತಿರುವಾಗ, ಆಹಾರದಲ್ಲಿ ರುಚಿ ಕಂಡು ಬರಲಿಲ್ಲ. ಆ ದೂರನ್ನು ತನ್ನ ಪತಿ ಪರಮೇಶ್ವರನಲ್ಲಿ ವಿನಂತಿಸಿಕೊಳ್ಳಲಾಗಿ, ಅವನು ತನ್ನ ಬೆವರಿನ ಹನಿಯಿಂದ ಒಬ್ಬ ಮಾನವನನ್ನು ಸೃಷ್ಟಿಮಾಡಿ, ಆ ಮಾನವನಿಗೆ ಭೂಮಿ

ಯಿಂದ 'ಉಪ್ಪು' ತಯಾರಿಸುವ ವೃತ್ತಿಯಲ್ಲಿ ನಿರತನಾಗಬೇಕೆಂದೂ, ಅವನ ವಂಶದಿಂದ ಬೆಳೆಯುವ ಪರಂಪರೆಯೂ ಮುಂದೆ ಉಪ್ಪು ತಯಾರಿಕೆ ವೃತ್ತಿಯಲ್ಲಿ ಬರಬೇಕೆಂದು ಆಜ್ಞಾಪಿಸಿದನು. ಆ ಮಾನವನು ತನ್ನ ಆಶ್ರಯದಾತನ ದಿವ್ಯಶಕ್ತಿಗೆ ಮೆಚ್ಚಿ ಆಶೀರ್ವಾದ ಪಡೆದು ಉಪ್ಪು ತಯಾರಿಕೆಯಲ್ಲಿ ನಿರತನಾದನಂತೆ.

ಈ ಕಥೆಯಲ್ಲಿಯೂ ಉಪ್ಪಾರರ ಮದುವೆಗೆ ಸಂಬಂಧಿಸಿದ 'ಉಪ್ಪು' ಬೆಡಗು ಇರುವುದನ್ನು ಗುರುತಿಸಬಹುದು. 'ಉಪ್ಪು' ಎಂಬ ಬೆಡಗಿನೊಂದಿಗೂ ಹೆಚ್ಚಾಗಿ ಇತರ ಬೆಡಗಿನವರು ಸಂಬಂಧ ಬೆಳೆಸಲು ಇಷ್ಟಪಡುತ್ತಾರೆ.

2.5 ಉಪ್ಪಾರರ ಪೂರ್ವ ಪರಿಚಯ:

ಉಪ್ಪಾರರು ಹೊಸಪೇಟೆ ತಾಲ್ಲೂಕಿನ ಮೂಲನಿವಾಸಿಗಳೆಂದು ಹೇಳುತ್ತಾರೆ. ಇವರನ್ನು ಮೇಲು ಸಕ್ಕರೆಯವರು, ಮಣ್ಣು ಉಪ್ಪಾರರು, ಕಲ್ಲು ಉಪ್ಪಾರರು ಎಂದು ಗುರುತಿಸಲಾಗುತ್ತಿದೆ. 'ಮೇಲುಸಕ್ಕರೆ' ಸಕ್ಕರೆಗೂ ಹೆಚ್ಚಾದದ್ದು ಎಂಬ ಅರ್ಥವಿದೆ. ಆರು ರಸಗಳಲ್ಲಿ ಶ್ರೇಷ್ಠವಾದುದೆ ಉಪ್ಪು ಎಂದು ಹೇಳುತ್ತಾರೆ. ಆದುದರಿಂದ ಉಪ್ಪು ತಯಾರಿಸುವವನಿಗೆ 'ಮೇಲು ಸಕ್ಕರೆ' ಯವರು ಎಂದು ಕರೆಯಲಾಗಿದೆ. ಮಣ್ಣಿನಿಂದ ಗಾರೆ ಮಾಡುವುದು, ಮಣ್ಣಿನಿಂದ ಉಪ್ಪು ತಯಾರಿಸುವುದರಿಂದ ಮಣ್ಣು ಉಪ್ಪಾರರಾದರು. ಕಲ್ಲು ಕೆಲಸ ಮಾಡಿ ಜೀವನ ಸಾಗಿಸುತ್ತಿದ್ದರಿಂದ ಕಲ್ಲು ಉಪ್ಪಾರರಾದರು. ಹೀಗೆ ಉಪ್ಪು ತಯಾರಿಸುತ್ತಿದ್ದ ಉಪ್ಪಾರರು ಕರ್ನಾಟಕಕ್ಕೆ ಹೊರಗಿನಿಂದ ಬಂದವರೊ ಅಥವಾ ಅವರು ಇಲ್ಲಿಯ ಮೂಲ ನಿವಾಸಿಗಳೇ ಎಂದು ನಿರ್ಣಯಿಸಲು ಸಾಕಷ್ಟು ಆಧಾರಗಳಿಲ್ಲ.

ಉಪ್ಪಾರರ ಜನಾಂಗದ ಲಾಂಛನ 'ಅಂಗೈ' ಎಂದು ವದನಕಾರರು ಹೇಳುತ್ತಾರೆ. ಅಂಗೈ ಚಲುಕ ಚಾಲುಕ್ಯ ಆಗಿದೆ. ಈ ಕಾರಣದಿಂದ ಉಪ್ಪಾರರು ಬಾದಾಮಿ ಯನ್ನಾಳಿದ ಚಾಲುಕ್ಯರೆಂದು ಹೇಳಿಕೊಳ್ಳುತ್ತಾರೆ. ಇದು ಆರ್. ಎನ್. ಪಂಡಮುಖಿ ಯವರ ಅಭಿಪ್ರಾಯವಾಗಿದೆ.

ಹೊಸಪೇಟೆ ತಾಲ್ಲೂಕಿನಲ್ಲಿ 20 ಸಾವಿರದಷ್ಟು ಉಪ್ಪಾರರಿದ್ದಾರೆ. ಉಪ್ಪಾರ ಹಳ್ಳಿ ಎಂಬಲ್ಲಿಯೇ ಸುಮಾರು 4 ಸಾವಿರ ಉಪ್ಪಾರರಿದ್ದಾರೆ. ತಾಲ್ಲೂಕಿನ ಕೆಲವು ಪ್ರದೇಶ ಬಿಟ್ಟು ಸಾಮಾನ್ಯವಾಗಿ ಎಲ್ಲಾ ಕಡೆ ಇದ್ದಾರೆ. ಈ ಪ್ರದೇಶದ ಮಣ್ಣು ಫಲವತ್ತಾಗಿರುವುದರಿಂದ ವ್ಯವಸಾಯ, ಪಶುಪಾಲನೆಯಲ್ಲಿ ತೊಡಗಿದ್ದರು(ನೀರಾವರಿಗಾಗಿ ತುಂಗಭದ್ರ ಜಲಾಶಯ ಹಾಗೂ ಅನೇಕ ಕೆರೆಗಳಿವೆ. ಕೃಷಿಕರಾದ ಉಪ್ಪಾರರು ಕಬ್ಬು, ಭತ್ತ, ತೆಂಗು ಬೆಳೆಯುತ್ತಾರೆ.) ಬ್ರಿಟಿಷರು ಉಪ್ಪಿನ ತಯಾರಿಕೆಯನ್ನು ನಿಷೇಧಿಸಿದ್ದರಿಂದ ಇವರು ತಮ್ಮ ಮೂಲ ವೃತ್ತಿಯನ್ನು ಕೈಬಿಡಬೇಕಾಯಿತು. ಒಂದು ವೃತ್ತಿಯಿಂದ ಇನ್ನೊಂದು ವೃತ್ತಿಗೆ ತಮ್ಮನ್ನು ಬದಲಾಯಿಸಿಕೊಳ್ಳುವಾಗ ತುಂಬಾ ತೊಂದರೆ ಎದುರಿಸಬೇಕಾಯಿತು. ಈ ಕಾರಣದಿಂದಾಗಿ ಆರ್ಥಿಕ, ಸಾಮಾಜಿಕ, ರಾಜಕೀಯವಾಗಿ ಹಿಂದುಳಿದವರಾದರು. ಭಾರತ ಸ್ವಾತಂತ್ರ್ಯ ಬಂದು ಇಲ್ಲಿಯವರೆಗೂ ಉಪ್ಪಾರರ ಜೀವನ ಕ್ರಮದಲ್ಲಿ ಗಂಭೀರ ಬದಲಾವಣೆಗಳೇನು ಆಗಿಲ್ಲ.

2.6 ಉಪ್ಪಾರರ ಕುಟುಂಬ ಪದ್ಧತಿ:

ಇವರಲ್ಲಿ ವಿಭಕ್ತ ಕುಟುಂಬ ಮತ್ತು ಅವಿಭಕ್ತ ಕುಟುಂಬ ಎಂಬ ಎರಡು ಪ್ರಭೇಧಗಳಿದ್ದರೂ, ವಿಭಕ್ತ ಕುಟುಂಬಗಳೇ ಹೆಚ್ಚು. ಅವಿಭಕ್ತ ಕುಟುಂಬದಲ್ಲಿ ಅಣ್ಣನಾದವನೇ ಮನೆಯ ಯಜಮಾನನಾಗಿರುತ್ತಾನೆ. ಮದುವೆ, ಹಬ್ಬ ಇತ್ಯಾದಿ ಆಚರಣೆಗಳು ಇವನ ಒಪ್ಪಿಗೆ ಮೇರೆಗೆ ನಡೆಯುತ್ತವೆ. ಮನೆಯಲ್ಲಿ ನಡೆಯುವ ಒಳಜಗಳಗಳು ಇವನ ಮೂಲಕ ಪರಿಹಾರ ಗೊಳ್ಳುತ್ತವೆ.

ವಿಭಕ್ತ ಕುಟುಂಬದಲ್ಲಿ ಪತಿ, ಪತ್ನಿ ಮತ್ತು ಮಕ್ಕಳು ಸೇರಿರುತ್ತಾರೆ. ಇಲ್ಲಿ ತಂದೆ ಪ್ರಧಾನ ವ್ಯಕ್ತಿಯಾಗಿರುತ್ತಾನೆ. ವೃದ್ಧರಿಗೆ ಮನೆಯ ಅಧಿಕಾರವಿರುವುದಿಲ್ಲ. ತನ್ನ ಮಕ್ಕಳು ಮದುವೆಯಾಗುವವರೆಗೆ ಅವನ ಜೊತೆ ಇದ್ದು ನಂತರ ಅವರಿಗೆ ಬಂದ ಭಾಗದಲ್ಲಿ ಸುಖವಾಗಿ ಬದುಕುತ್ತಾರೆ. ಈ ಕಾರಣದಿಂದ ಗಂಡುಮಕ್ಕಳಿಗೆ ಮದುವೆ ಪ್ರಧಾನ ಘಟ್ಟ. ಈ ಕುಟುಂಬದಲ್ಲಿ ತಂದೆ ಪ್ರಧಾನ ರಕ್ಷಕನಾಗಿ ಕೆಲಸ ನಿರ್ವಹಿಸುತ್ತಾನೆ.

ಇವರಲ್ಲಿ ಪಿತೃ ಪ್ರಧಾನ ಕುಟುಂಬ ವ್ಯವಸ್ಥೆ ಇದೆ, ಮದುವೆಯಲ್ಲಿ ಬೆಡಗನ್ನು(ಬಳಿ) ತಂದೆಯಿಂದಲೇ ಗುರುತಿಸಿಕೊಳ್ಳುತ್ತಾರೆ. ಮಕ್ಕಳ ಮೇಲೆ ತಂದೆಗೆ ಹಿಡಿತವಿರುತ್ತದೆ. ಆಸ್ತಿಯ ಹಕ್ಕು ತಂದೆಯಿಂದ ಮಗನಿಗೆ ವರ್ಗಾವಣೆಯಾಗುತ್ತದೆ. ಇವರಲ್ಲಿ ಮಾತೃ ಪ್ರಧಾನ ಕುಟುಂಬ ವ್ಯವಸ್ಥೆ ಇರುವುದಿಲ್ಲ.

ಉಪ್ಪಾರರಲ್ಲಿ ತಂದೆಯ ಕಡೆಯ ರಕ್ತ ಸಂಬಂಧಿಗಳಿಗೆ ವಿಶೇಷ ಮಹತ್ವ ಸಿಕ್ಕುತ್ತದೆ. ತಂದೆಯ ತಂದೆ, ತಾಯಿ, 'ಅಜ್ಜ' 'ಅಜ್ಜಿ' ರೆಂದು ಕರೆಸಿಕೊಳ್ಳುತ್ತಾರೆ. ಮೊಮ್ಮಕ್ಕಳಿಗೆ ಅಜ್ಜ ಅಜ್ಜಿಯರೆಂದರೆ ಬಹಳ ಪ್ರೀತಿ. ಹಾಗೆಯೇ ಅಜ್ಜ ಅಜ್ಜಿಯರಿಗೂ, ಮೊಮ್ಮಕ್ಕಳನ್ನು ವಿಶೇಷ ಮಮತೆಯಿಂದ ಬೆಳೆಸುತ್ತಾರೆ. ಕೆಲವು ವಿಶೇಷ ದಿನಗಳಲ್ಲಿ ಹಣವನ್ನು ಕೊಡುತ್ತಾರೆ. ಹೊಸ ಬಟ್ಟೆಗಳನ್ನು ಹೊಲಿಸಿ ಕೊಡುತ್ತಾರೆ.

ಇವರು ಗಾಳೆಮ್ಮ, ಊರಮ್ಮ, ಬಳ್ಳಾರಮ್ಮ, ತಾಯಮ್ಮ ಈ ದೇವತೆಗಳಿಗೆ ವರ್ಷಕ್ಕೆ ಒಮ್ಮೆ ಹರಕೆಯನ್ನು ಒಪ್ಪಿಸುತ್ತಾರೆ. ತಮ್ಮ ತಮ್ಮಲ್ಲಿ ಜಗಳಗಳುಂಟಾದಾಗ ಜಾತಿಯ ಮುಖ್ಯಸ್ಥರಿಂದ ನ್ಯಾಯ ಬಗೆಹರಿಸಿಕೊಳ್ಳುತ್ತಾರೆ. ಬೇರೆ ಜಾತಿಯ ಜನರೊಂದಿಗೆ ಜಗಳಗಳಾದಾಗ ಊರ ಮುಖಂಡರಿಂದ ನ್ಯಾಯ ಬಗೆಹರಿಸಿಕೊಳ್ಳುತ್ತಾರೆ.

ಅಧ್ಯಾಯ – 3

ಮದುವೆ: ಬದುಕಿನ ಅವಿಭಾಜ್ಯ ಅಂಗ

ಮದುವೆ: ಬದುಕಿನ ಅವಿಭಾಜ್ಯ ಅಂಗ

ಮಾನವನು ಪ್ರಾಣಿಗಳಂತೆ ಲೈಂಗಿಕ ಪ್ರಚೋದನೆಯನ್ನು ಹೊಂದಿದರೂ ಅದನ್ನು ಈಡೇರಿಸಿ ಕೊಳ್ಳುವಾಗ ಪ್ರಾಣಿವರ್ಗದಂತೆ ಎಲ್ಲಿಬೇಕಾದರೂ ಅಲ್ಲಿ ಪಡೆದು ಕೊಳ್ಳಲು ಸಾಧ್ಯವಿಲ್ಲ. ಕಾರಣ ಮಾನವ ಸಮಾಜ ಇದನ್ನು ವೈಯಕ್ತಿಕ ಅಥವಾ ಜೈವಿಕವೆಂದು ಮಾತ್ರ ಭಾವಿಸದೆ ಸಾಮಾಜಿಕ ಹಾಗೂ ನೈತಿಕ ವಿಷಯವೆಂದು ಪರಿಗಣಿಸಿದೆ. ಈ ಕಾರಣ ದಿಂದ ಎಲ್ಲಾ ಮಾನವ ಸಮುದಾಯವೂ ನಿರ್ದಿಷ್ಟ ಸಂಗಾತಿಗಳ ನಡುವೆ ಉನ್ನತ ಪ್ರಕಾರದ ಹಾಗೂ ಸ್ಥಿರವಾದ ಬಂಧನವೊಂದನ್ನು ಇಷ್ಟಪಡುತ್ತದೆ. ಇದನ್ನೇ 'ಮದುವೆ' ಎಂದು ಕರೆದು ಗಂಡು ಹೆಣ್ಣುಗಳನ್ನು ಒಂದು ವ್ಯವಸ್ಥಿತ ಕುಟುಂಬ ಜೀವನಕ್ಕೆ ಒಳಪಡಿಸುವುದು.

ಅತ್ಯಂತ ಪ್ರಾಚೀನ ಮಾನವನ ಕಾಲದಲ್ಲಿ ಲೈಂಗಿಕ ಸ್ವಚ್ಛಂದತೆ ಪ್ರಚಲಿತವಿದ್ದು ಯಾರು ಯಾರನ್ನಾದರೂ ಸೇರಬಹುದಾಗಿತ್ತು. ತಾಯಿ ಮಗನೊಡನೆ, ತಂದೆ ಮಗಳೊಡನೆ, ಕೆಲವು ಸಾರಿ ಅಣ್ಣ ತಂಗಿಯೊಡನೆ ಲೈಂಗಿಕ ಸಂಯೋಗ ನಡೆದು ಮಕ್ಕಳಾ ಗುತ್ತಿದ್ದುವು. ಆದರೆ ಹಾಗೆ ಹುಟ್ಟಿದ ಮಕ್ಕಳು ಶಾರೀರಿಕವಾಗಿ ಮತ್ತು ಮಾನಸಿಕವಾಗಿ ದುರ್ಬಲವಾಗಿರುತ್ತಿದ್ದುವು. ಹೀಗೆ ಹುಟ್ಟಿದ ಮಕ್ಕಳಿಗೆ, ಗರ್ಭಿಣಿಯರಿಗೆ ಸರಿಯಾದ ರಕ್ಷಣೆ ಸಿಕ್ಕುತ್ತಿರಲಿಲ್ಲ. ಈ ತೊಂದರೆಗಳ ಪರಿಹಾರಕ್ಕಾಗಿ ವಿವಾಹ ಪದ್ಧತಿ ಜಾರಿಗೆ ಬಂದಿತೆಂದು ಮಾನವ ಶಾಸ್ತ್ರಜ್ಞರು ಹೇಳಿದ್ದಾರೆ.

ಮದುವೆಯು ಮಾನವನ ಬದುಕಿನಲ್ಲಿ ಒಂದು ಮಹತ್ವದ ಘಟ್ಟ. ಅಪರಿಚಿತವಾದ ಗಂಡು ಹೆಣ್ಣನ್ನು ಒಂದು ಗೂಡಿಸಿ ಜೀವನ ಸಂಗಾತಿಗಳನ್ನಾಗಿ ಮಾಡುವ ವಿಶಿಷ್ಟ ಸಂದರ್ಭ. ಬದುಕಿನಲ್ಲಿ ಒಮ್ಮೆ ಮಾತ್ರ(ಕೆಲವು ಸಂದರ್ಭಗಳ ಹೊರತು) ನಡೆಯುವ ಘಟನೆ — ಬದುಕಿಗೆ ಭದ್ರತೆಯನ್ನು, ಜವಾಬ್ದಾರಿಯನ್ನು ತಂದುಕೊಡುತ್ತದೆ. ಜೀವನದಲ್ಲಿ ಉತ್ಸಾಹ, ಆನಂದ, ಹೆಚ್ಚುವಂತೆ ಮಾಡಿ, ಗಂಡು — ಹೆಣ್ಣುಗಳನ್ನು ಜೀವನದ ರಸಯಾನಕ್ಕೆ ತೊಡಗಿಸುವ ಒಂದು ಮಂಗಳಕರ ಪ್ರಸಂಗವಾಗುತ್ತದೆ. ಎರಡು ಕುಟುಂಬಗಳ ನಡುವೆ ಹೊಸ ಸಂಬಂಧವನ್ನು ಬೆಸೆಯುತ್ತದೆ. ಎರಡು ಕುಟುಂಬಗಳು ಎರಡು ಊರುಗಳಲ್ಲಿ ಸೇರಿಕೊಂಡಿದ್ದರೆ ಆ ಎರಡು ಊರುಗಳ ನಡುವೆ ಮಧುರ ಸಂಬಂಧವನ್ನು ಬೆಳೆಸುತ್ತದೆ. ಊರು ಊರುಗಳ ನಡುವೆ ಸಾಮರಸ್ಯ ಕುದುರುತ್ತದೆ. ಒಟ್ಟಿನಲ್ಲಿ ಮದುವೆ ಸಾಮಾಜಿಕ

ವಾಗಿ, ಸಾಂಸ್ಕೃತಿಕವಾಗಿ, ರಾಜಕೀಯವಾಗಿ ಬಹು ಮಹತ್ವದ ಪಾತ್ರ ವಹಿಸುತ್ತದೆ.

ಮದುವೆಯ ಉದ್ದೇಶ ಪ್ರತಿ ಮಾನವ ಸಮಾಜಗಳಲ್ಲೂ ಒಂದೇ. ಆದರೆ ಅದನ್ನು ನಡೆಸುವ ರೀತಿ ಮಾತ್ರ ಬೇರೆ ಬೇರೆ. ಸಮಾಜ ನೆಲೆಗೊಂಡ ಪರಿಸರ, ಬದುಕಿನ ಸ್ಥಿತಿಗತಿ, ಧರ್ಮ, ನಂಬಿಕೆ ಇವೇ ಮುಂತಾದ ಅಂಶಗಳಿಗನುಗುಣವಾಗಿ ಮದುವೆ ಪದ್ಧತಿ ರೂಪು ಪಡೆದಿದೆ. ಕಾಲ ಕಾಲಕ್ಕೆ ಬದುಕಿನ ಇನ್ನಿತರ ಮಹತ್ವದ ಘಟ್ಟಗಳ ಅನುಸರಣೆಯಲ್ಲಿ ಅನೇಕ ವ್ಯತ್ಯಾಸಗಳುಂಟಾದಂತೆ ಮದುವೆ ಪದ್ಧತಿಯಲ್ಲೂ ಹಲವು ವ್ಯತ್ಯಾಸಗಳು ಸಾಧಿತ ವಾಗಿವೆ. 'ನಿರ್ದಿಷ್ಟ ಸಮಾಜವೊಂದರಲ್ಲಿ ಜರುಗುವ ಮದುವೆ ಆಚರಣೆಯ ಅಧ್ಯಯನ ವೆಂದರೆ, ಆ ಸಮಾಜದ ಸಂಸ್ಕೃತಿಯ ಅಧ್ಯಯನವೇ ಸರಿ. ಕಾರಣ ಮದುವೆ ಕೂಡ ಆ ಸಮಾಜದ ಒಂದು ಸಾಂಸ್ಕೃತಿಕ ಕ್ರಿಯೆ. ಇಡೀ ಸಮಾಜ ಅಥವಾ ಆ ಸಮಾಜದ ಬಹುಪಾಲು ಸಮೂಹ ಆ ಕ್ರಿಯೆಯಲ್ಲಿ ಭಾಗಿಯಾಗುವುದನ್ನು ಕಾಣಬಹುದು.' (ಚನ್ನಬಸಪ್ಪ. ಗೊ. ರು(ಸಂ) 1978 :369) ಮದುವೆ ಬಂಧನಕ್ಕೆ ಹೊಸಪೇಟೆ ಸುತ್ತಿನ ಉಪ್ಪಾರರಲ್ಲಿ ವಿಶೇಷ ಪ್ರಾಶಸ್ತ್ಯವಿದೆ. ಇದೊಂದು ದೇವರ ಕಾರ್ಯ ಎಂಬ ಕಲ್ಪನೆ ಇದೆ. ಈ ಕಾರಣದಿಂದ ವಿವಾಹದ ಕಾರ್ಯಕಲಾಪಗಳಿಗೆಲ್ಲ ಅನೇಕ ಶಾಸ್ತ್ರ, ವಿಧಿ, ವಿಧಾನಗಳನ್ನು ತಳಕು ಹಾಕಿ ಕೊಂಡಿದ್ದಾರೆ. ಮದುವೆಯ ಆಗು ಹೋಗುಗಳು ಕೇವಲ ಗಂಡು ಹೆಣ್ಣುಗಳಿಗೆ ಮಾತ್ರ ಸೀಮಿತವಾದುದಲ್ಲ, ಇಡೀ ಸಮಾಜಕ್ಕೆ ಸಂಬಂಧಿಸಿದವು. ಸಾಮಾಜಿಕ ಸುವ್ಯವಸ್ಥೆ ಮತ್ತು ಸಾಮಾಜಿಕ ಭದ್ರತೆ ಮದುವೆಯನ್ನು ಅವಲಂಬಿಸಿದೆ ಎಂಬ ತಿಳಿವಳಿಕೆ ಇವರಲ್ಲಿ ಬೇರೂರಿದೆ.

ಇವರ ಕಸುಬು ಉಪ್ಪು ತಯಾರಿಸುವುದಾಗಿತ್ತು. ಈಗ ಈ ಕೆಲಸವನ್ನು ಬಿಟ್ಟು ವ್ಯವಸಾಯ, ಗೋಡೆ ಕಟ್ಟುವುದು, ಇಟ್ಟಿಗೆ ಸುಡುವುದು, ಗಾರೆ ಕೆಲಸ ಮಾಡುವುದು ಇತ್ಯಾದಿ ಕೆಲಸಗಳನ್ನು ಮಾಡಿ ಜೀವನ ನಡೆಸುತ್ತಿದ್ದಾರೆ. ಈ ಎಲ್ಲಾ ಕೆಲಸವನ್ನು ಸುಗಮವಾಗಿ ನಿರ್ವಹಿಸುವ ಸಲುವಾಗಿ ಮದುವೆಗೆ ವಿಶೇಷ ಮಹತ್ವ ನೀಡಿದ್ದಾರೆ. ಈ ಸಮಾಜ ಬ್ರಹ್ಮಚರ್ಯ ಜೀವನವನ್ನು ಪುರಸ್ಕರಿಸುವುದಿಲ್ಲ. ವಯಸ್ಕ ಅವಿವಾಹಿತರ ಮುಖ ನೋಡುವುದು ಒಳ್ಳೆಯದಲ್ಲ ಎಂದು ನಂಬುತ್ತಾರೆ. ಅಲ್ಲದೆ ಮದುವೆ ಇಲ್ಲದ ಬಾಳು ಬರಡು ಮತ್ತು ಗೋಳು ಎಂಬ ನಂಬಿಕೆ ಇದೆ. ಅಷ್ಟೇ ಅಲ್ಲ, ಅವಿವಾಹಿತನಾದ ವ್ಯಕ್ತಿ ಮರಣವಪ್ಪಿದರೆ ಆತನಿಗೆ ಮುಕ್ತಿ ದೊರಕುವುದಿಲ್ಲ ಎಂದೂ ನಂಬುತ್ತಾರೆ.

ಮೋಕ್ಷದ ಮಾರ್ಗದಲ್ಲಿ ಸಾಗಬೇಕಾದರೆ ಮದುವೆಯಾಗಿ ಒಂದಾದರೂ ಗಂಡು ಮಕ್ಕಳನ್ನು ಪಡೆಯಬೇಕು. ಪುತ್ರ ಸಂತಾನವಿಲ್ಲದ ವ್ಯಕ್ತಿ ತಾನು ಪಿತೃಗಳಿಂದ ಪಡೆದ ಪಿತೃ ಋಣ ವನ್ನು ತೀರಿಸದೆ ಋಣಸ್ಥನಾಗಿಯೇ ಉಳಿದು ಗತಿಸಿದ ನಂತರ ಮೋಕ್ಷ ಪ್ರಾಪ್ತವಾಗದೆ, ದುಷ್ಕರ್ಮಿಯಾಗಿ ನರಕಕ್ಕೆ ಹೋಗಬೇಕಾಗುತ್ತದೆಂದೂ ನಂಬುವರು. (ಅಂಬಳಿಕೆ ಹಿರಿಯಣ್ಣ 1978:22)

ಸಾಮಾನ್ಯವಾಗಿ ಇವರ ಈಗಿನ ಮದುವೆ ಸಂಪ್ರದಾಯವನ್ನು ಪರಿಶೀಲಿಸಿ ನೋಡಿದರೆ ಹಿಂದೆ ಇವರಲ್ಲಿ ಅನೇಕ ಬಗೆಯ ಮದುವೆ ಪದ್ಧತಿಗಳು ಜಾರಿಯಲ್ಲಿದ್ದುವೆಂದು ತಿಳಿದು ಬರುತ್ತದೆ. ಅನೇಕ ವಕ್ತೃಗಳು, ಈಗ್ಗೆ ಕೆಲವು ದಶಕಗಳ ಹಿಂದಿನವರೆಗೂ ಬೇರೆ ಬೇರೆ ಮದುವೆ ಪದ್ಧತಿಗಳು ರೂಢಿಯಲ್ಲಿದ್ದುವೆಂಬುದನ್ನು ಖಚಿತ ಪಡಿಸಿದ್ದಾರೆ. ಅವುಗಳನ್ನು ಇಲ್ಲಿ ಸ್ಥೂಲವಾಗಿ ವಿವೇಚಿಸಲಾಗಿದೆ.

1. ಕನ್ಯಾಪಹರಣ:-

ಪ್ರಾಚೀನ ಕಾಲದಲ್ಲಿ ಅಧಿಕೃತವೆನ್ನುವ ರೀತಿಯಲ್ಲಿ ರೂಢಿಯಲ್ಲಿರಲಿಲ್ಲ. ಕಾರಣ ಈ ಸಮಾಜ ಇಂಥ ಮದುವೆಯನ್ನು ಕೀಳಾಗಿ ಕಾಣುತ್ತಿತ್ತು. ಹೆಣ್ಣನ್ನು ಹಾರಿಸಿ ಕೊಂಡು ಹೋಗುವುದು ಸಾಮಾಜಿಕವಾಗಿ, ಆರ್ಥಿಕವಾಗಿ, ತಮಗಿಂತ ಕೀಳಾದ ಕೆಳವರ್ಗದ ಜನರಿಗೆ ಹೇಳಿಸಿದ ಕಾರ್ಯವೆಂದೂ ತಮ್ಮಂಥವರಿಗೆ ಅವಮಾನಕರವಾದ ಹೇಯಕಾರ್ಯ ವೆಂದು ಇವರು ತಿಳಿದುಕೊಂಡಿದ್ದರು. ಅದರಲ್ಲಿಯೂ, ಹೆಣ್ಣೇ ಬಯಸಿದ ಹುಡುಗ ನೊಡನೆ 'ಓಡಿ ಹೋದರೆ ಅಂಥವಳನ್ನು ತಿರಸ್ಕಾರದಿಂದ ಕಾಣುತ್ತಿದ್ದರು.[1] ಅಲ್ಲದೆ ಆ ದಂಪತಿಗಳಿಗೆ ಜೀವನದುದ್ದಕ್ಕೂ ಯಾರ ಸಹಕಾರ, ಸಹಾನುಭೂತಿ ದೊರಕುತ್ತಿರಲಿಲ್ಲ.

2. ಅಳಿಯ ಸಂತಾನ ಪದ್ಧತಿ:-

ಈ ವಿವಾಹ ಪದ್ಧತಿಯ ಪ್ರಕಾರ, ಹೆಣ್ಣನ್ನು ಗಂಡನ ಮನೆಗೆ ಕಳಿಸುವುದಿಲ್ಲ ಬದಲಾಗಿ ಗಂಡನ್ನೇ ತರುವ ಕ್ರಮ.[2] ಒಂದು ಇಲ್ಲವೆ ಒಂದಕ್ಕಿಂತ ಹೆಚ್ಚು ಹೆಣ್ಣು ಮಕ್ಕಳನ್ನು ಹೊಂದಿದ್ದ ತಂದೆ ತಾಯಿಗಳು ಈ ಬಗೆಯ ಮದುವೆ ಪದ್ಧತಿಗೆ ಹೆಚ್ಚು ಪ್ರಾಶಸ್ತ್ಯ ನೀಡುತ್ತಿದ್ದರು. ಆದರೆ ಅವರು ತಮ್ಮ ಅನುಕೂಲಕ್ಕೆ ತಕ್ಕಂತೆ ಹಿರಿಯ, ಇಲ್ಲವೆ

ಕಿರಿಯ ಮಗಳಿಗೆ ಮಾತ್ರ ಇಂಥ ಮದುವೆ ಮಾಡುತ್ತಿದ್ದರು. ಉಳಿದವರನ್ನು ಹೊರಕ್ಕೆ ಕೊಡುತ್ತಿದ್ದರು. ಹುಡುಗ ಸೋದರಿಕೆ ಸಂಬಂಧದವನು ಅಥವಾ ದೂರದ ಸಂಬಂಧಿಯೋ ಆಗಿರುತ್ತಿದ್ದ. ಗುರುತು ಪರಿಚಯ ಬಳಕೆಯುಳ್ಳ ವ್ಯಕ್ತಿ ಮಾತ್ರ ಮುಂದೆ ಆ ಮನೆಯ ಯಜಮಾನನಾಗಿ ಯಶಸ್ಸು ಹೊಂದಲು ಸಾಧ್ಯವೆಂದು ತಿಳುವಳಿಕೆ ಇರುವುದರಿಂದಲೇ ಈ ಪದ್ಧತಿ ಬಳಕೆಗೆ ಬರಲು ಕಾರಣವಾಗಿದೆ.

3. ಸೇವಾ ವಿವಾಹ:—

ಈ ಪದ್ಧತಿ ಅತ್ಯಂತ ವಿರಳವಾಗಿ ಕಂಡು ಬರುತ್ತಿದ್ದ ಮದುವೆ. ಈಗ ಇಲ್ಲ. ಬಯಸಿದ ಹೆಣ್ಣನ್ನು ಹೊಂದಲು ಅಗತ್ಯವಾಗಿ ಬೇಕಾದ 'ತೆರ' (ಕನ್ಯಾಶುಲ್ಕ) ಕೊಡಲು ಸಾಧ್ಯವಾಗದಿದ್ದಾಗ ಹುಡುಗಿಯ ಮನೆಯಲ್ಲೇ ಕೆಲಕಾಲ ಇದ್ದು ಜೀತ ಮಾಡಿ ಹೆಣ್ಣನ್ನು ಪಡೆಯುವುದು. ಹುಡುಗನ ಸ್ವಭಾವ, ನಡತೆ ಒಪ್ಪಿಗೆಯಾದರೆ ಮಾತ್ರ ಹುಡುಗಿಯನ್ನು ಮದುವೆ ಮಾಡಿಕೊಡಲು ಒಪ್ಪುತ್ತಿದ್ದರಂತೆ. ಹಿಂದೆ ಸ್ತ್ರೀಯರ ಸಂಖ್ಯೆ ಅತ್ಯಂತ ವಿರಳವಿದ್ದ ಸಂದರ್ಭದಲ್ಲಿ ಕನ್ಯಾಶುಲ್ಕ ಕೊಟ್ಟರೆ ಮಾತ್ರ ವಿವಾಹ ಸಾಧ್ಯವಿತ್ತು ಎನ್ನುತ್ತಾರೆ. ಹೆಣ್ಣನ್ನು ಪಡೆಯಲು ಹೆಣ್ಣಿನ ತಂದೆ ಕೇಳಿದಷ್ಟು ಕನ್ಯಾಶುಲ್ಕ ನೀಡಬೇಕಾಗಿತ್ತು.[3] ಕನ್ಯಾಶುಲ್ಕ ಹೆಚ್ಚಿದಷ್ಟು ಹುಡುಗಿಯ ತಂದೆಯ ಪ್ರತಿಷ್ಠೆಯೂ ಹೆಚ್ಚುತ್ತಿತ್ತು.

4. ನಾದಿನಿ ವಿವಾಹ ಪದ್ಧತಿ:—

ಹೆಂಡತಿ ಬಂಜೆಯಾಗಿದ್ದರೆ ಇಲ್ಲವೆ ಸಾವಿಗೀಡಾದರೆ ಹೆಂಡತಿಯ ತಂಗಿಯನ್ನು ಮದುವೆ ಯಾಗುವುದು, ಹಿಂದೆ ಇದು ಕಡ್ಡಾಯವೆಂಬಂತೆ ನಡೆದು ಬರುತ್ತಿತ್ತು. ಈಗ ಹುಡುಗನಿಗೆ ಹುಡುಗಿ ಒಪ್ಪಿಗೆಯಾದರೆ ಮಾತ್ರ ಮಾಡಿಕೊಳ್ಳಬಹುದು ಇಲ್ಲವಾದರೆ ಹೊಸ ಸಂಬಂಧವನ್ನು ಬೆಳಸಬಹುದು. ಈ ಪದ್ಧತಿ ಇಂದಿಗೂ ಅಲ್ಲಲ್ಲಿ ರೂಢಿಯಲ್ಲಿದೆ.

5. ಬಹುಪತ್ನಿತ್ವ:—

ಒಬ್ಬಳಿಗಿಂತ ಹೆಚ್ಚು ಸ್ತ್ರೀಯರನ್ನು ಮದುವೆ ಯಾಗುವಿಕೆ. ಈ ಪದ್ಧತಿ ಮೊನ್ನೆ ಮೊನ್ನೆಯವರೆಗೂ ರೂಢಿಯಲ್ಲಿತ್ತು. ಒಬ್ಬನೇ ಪುರುಷ ನಾಲ್ಕು ಐದು

ಮದುವೆ ಮಾಡಿಕೊಳ್ಳುತ್ತಿದ್ದ ಉದಾಹರಣೆಗಳು ಕೆಲವಿವೆ. ಇದಕ್ಕೆ ಕಾರಣಗಳು ಇವೆ. ಹಿಂದೆ ಬಾಣಂತನ ಬಹಳ ದೀರ್ಘ ಕಾಲ ನಡೆಯುತ್ತಿತ್ತು. ಆ ಅವಧಿಯಲ್ಲಿ ಗಂಡನು ಕಾಮತೃಷೆಯನ್ನು ಇಂಗಿಸಿಕೊಳ್ಳಲು ಬೇರೊಬ್ಬಳನ್ನು ಸೇರುತ್ತಿದ್ದ. ಇದರಿಂದ ಸಾಮಾಜಿಕ ಅಭದ್ರತೆಯುಂಟಾಗಿ, ತೊಂದರೆಯಾಗಿರುವುದರಿಂದ, ಅದಕ್ಕೆ ಪರಿಹಾರವಾಗಿ ಒಬ್ಬಳು ಬಾಣಂತನಕ್ಕೆ ಹೋದಾಗ ಇನ್ನೊಬ್ಬಳೊಂದಿಗೆ ಜೀವನ ನಡೆಸಲು ಈ ವಿವಾಹ ಪದ್ಧತಿಯನ್ನು ರೂಢಿಗೆ ತಂದಿರಬೇಕು.[4] ಹೆಚ್ಚು ಹೆಂಡತಿಯರನ್ನು ಹೊಂದಿರುವುದು ತಮ್ಮ ಪ್ರತಿಷ್ಠೆಯ ವಿಷಯವೂ ಆಗಿತ್ತು.

6. ಬಾಲ್ಯವಿವಾಹ:-

ಪ್ರಾಚೀನ ಕಾಲದಲ್ಲಿ ಈ ಪದ್ಧತಿ ಹೆಚ್ಚು ಪ್ರಚಲಿತವಿತ್ತು. ಬೇರೆ ಬೇರೆ ಕಾರಣಗಳಿಗಾಗಿ ಮಕ್ಕಳಿಗೆ ಅಪ್ರಾಪ್ತ ವಯಸ್ಸಿನಲ್ಲೇ ಮದುವೆ ಜರುಗಿಸುತ್ತಿದ್ದರು.[5] ತಂದೆ ತಾಯಿಗಳ ಮುಪ್ಪಿನ ಕಾಲವೋ, ರೋಗ ರುಜಿನಗಳ ಕಾರಣವೊ ಹೀಗೆ 'ಏನೋ ಒಂದು ಕಾರಣವಿರುತ್ತಿತ್ತು. ಹೆಣ್ಣು ದೊಡ್ಡವಳಾಗುವುದಕ್ಕಿಂತ ಮೊದಲೇ ಮದುವೆ ಮಾಡಿಕೊಟ್ಟರೆ ತಂದೆ ತಾಯಿಗಳಿಗೆ ಒಳ್ಳೆಯದು ಎಂಬ ನಂದಿಕೆ ಪ್ರಬಲ ಕಾರಣ. ಗಂಡು ಮಕ್ಕಳಿಲ್ಲದ ಮನೆಗಳಲ್ಲಿ ಈ ಪದ್ಧತಿ ಹೆಚ್ಚು ಪ್ರಚಲಿತವಿತ್ತು. ಹುಡುಗ ಮತ್ತು ಹುಡುಗಿ ಇಬ್ಬರು ಅಪ್ರಾಪ್ತರಾಗಿರುತ್ತಿದ್ದರು. ಇಂಥ ಮದುವೆಯನ್ನು 'ಕನ್ಯಧಾರೆ' ಎಂದು ಇದನ್ನು ಎಂಟು ಹತ್ತು ವರ್ಷದವರಿಗೆ ಮಾಡುತ್ತಿದ್ದರು.

7. ತೊಟ್ಟಿಲ ಮದುವೆ:-

ಇದೂ ಬಾಲ್ಯ ವಿವಾಹವೇ. ಆದರೆ ಗಂಡು ಹೆಣ್ಣುಗಳಿಗೆ ಎಂಟು ಹತ್ತು ವರ್ಷಗಳಾದ ಮೇಲೆ ನಡೆಸುವ ವಿವಾಹವಲ್ಲ. ಹೆಣ್ಣು ಹುಟ್ಟಿ, ಹನ್ನೊಂದು ರಾತ್ರಿ ಕಳೆದು ನಾಮಕಾರಣದ ದಿನ. ಈ ಮಗುವನ್ನು. ಸೊಸೆಯಾಗಿ ಬಯಸುವ ಸೋದರತ್ತೆ ತನ್ನ ಮಗನ ಹಸ್ತದಿಂದ(ಅವನೂ ಚಿಕ್ಕವನೇ) ಕೊರಳಿಗೆ ಸರವನ್ನೋ, ಕಡಗವನ್ನೋ ಹಾಕಿದರೆ ತೊಟ್ಟಿಲ ಮದುವೆ ಆದಂತೆ. ಮುಂದೆ ಅನುಕೂಲವಾದಾಗ ಮದುವೆ ಮಾಡಿಕೊಳ್ಳುತ್ತಿದ್ದರು. ಇದು ಸಂಪೂರ್ಣ ಸೋದರತ್ತೆ ಮತ್ತು ಸೋದರಮಾವನ ಹಕ್ಕಾಗಿತ್ತು. ಹೆಣ್ಣು ಗಂಡುಗಳ ಸಂಖ್ಯೆ ಅತಿ ಕಡಿಮೆಯಿದ್ದ ಕಾಲದಲ್ಲಿ ಈ ಪದ್ಧತಿ ತುಂಬ ಜನಪ್ರಿಯವಾಗಿತ್ತು.

8. ಕೂತು ಮದುವೆ:-

ಇದು ಬಹಳ ಸರಳ ವಿವಾಹ ಪದ್ಧತಿ. ಸಾಮಾನ್ಯ ಪದ್ಧತಿ ಎಂದರೆ ಹುಡುಗಿಯ ಜೊತೆಯಲ್ಲಿ ಮದುವೆಯಾಗುವುದು. ಆದರೆ ಇಲ್ಲಿ ಹುಡುಗನ ಮನೆಯಲ್ಲಿ ಮದುವೆ ನಡೆಯುತ್ತದೆ. ಹುಡುಗಿ ಕುಟುಂಬದವರು ತೀರ ಬಡವರಾಗಿದ್ದರೆ, ಇಲ್ಲವೆ ಹುಡುಗ ಕುಂಟನೊ, ಕುರುಡನೊ ಆಗಿದ್ದರೆ ಮಾತ್ರ 'ಕೂತು ಮದುವೆ' ನಡೆಸುತ್ತಿದ್ದರು. ಹೆಣ್ಣು ತನ್ನ ಮನೆಯಿಂದ ಹೊರಟು ಗಂಡಿನವರು ಕೊಟ್ಟ 'ಬಿಡದಿ' ಮನೆಯಲ್ಲಿ ಅಲಂಕರಿಸಿಕೊಂಡು ಮದುವೆ ಮಾಡಿಕೊಳ್ಳುತ್ತಿದ್ದರು.[6]

9. ಸೀರುಡಿಕೆ:-

ಇದು 'ಕೂಡಾವಳಿ' ಎಂಬ ಹೆಸರಿನಲ್ಲಿ ಕರೆಯಲ್ಪಡುತ್ತದೆ. ವಿಧುರ – ವಿಧವೆಯರ ನಡುವೆ ನಡೆಯುವ ಮದುವೆ ಇದು. ಆರ್ಥಿಕವಾಗಿ ಕೆಳವರ್ಗದಲ್ಲಿ ಇರುವ ಕುಟುಂಬಗಳಲ್ಲಿ ಇದಕ್ಕೆ ಹೆಚ್ಚು ಪ್ರಾಶಸ್ತ್ಯ.[7]

ಹಿಂದೆ ಸ್ತ್ರೀಯರು ಗರ್ಭಿಣಿಯರಾಗಿದ್ದಾಗ ರೋಗ, ರುಜಿನ, ಇತ್ಯಾದಿ ನಾನಾ ಕಾರಣಗಳಿಂದ ಅಕಾಲ ಮರಣವನ್ನು ಹೊಂದುತ್ತಿದ್ದರು. ಈ ಕಾರಣಗಳಿಂದ ಪುರುಷರು ಮರು ಮದುವೆ ಮಾಡಿಕೊಳ್ಳುತ್ತಿದ್ದರು.[8] ಹೆಂಡತಿಯನ್ನು ಕಳೆದು ಕೊಂಡವರು ಮಾತ್ರವಲ್ಲದೆ ಹೆಂಡತಿ ಇದ್ದವರೂ 'ಸೀರುಡಿಕೆ' ಮಾಡಿ ಕೊಳ್ಳುತ್ತಿದ್ದರು. ಆದರೆ ಕೂಡಿಕೆಗೊಪ್ಪುವ ವಿಧವೆ ತನ್ನ ಮೊದಲ ಗಂಡನಿಂದಾದ ಮಕ್ಕಳನ್ನು ಮೃತ ಗಂಡನ ಮನೆಯಲ್ಲೇ ಬಿಟ್ಟು ಬರುವುದು ವಾಡಿಕೆ. ಕಾರಣ ಹೊಸದಾಗಿ ಕೂಡಿದವನು ಆ ಮಕ್ಕಳಿಗೆ ತನ್ನ ಆಸ್ತಿಯಲ್ಲಿ ಹಕ್ಕು ಕೊಡಲು ನಿರಾಕರಿಸುತ್ತಿದ್ದನು. ಗಂಡನನ್ನು ಕಳೆದುಕೊಂಡ ಹೆಂಗಸನ್ನು ಸಾಮಾನ್ಯವಾಗಿ ತವರಿಗೆ ಕಳುಹಿಸಿಕೊಡುತ್ತಿದ್ದರು. ವಯಸ್ಸಿನಲ್ಲಿ ಚಿಕ್ಕವಳಾದ ಈ ವಿಧವೆಗೆ ಮದುವೆ ಮಾಡುವ ಉದ್ದೇಶದಿಂದ. ಅವಳು ಗಂಡನ ಮನೆಯಲ್ಲಿ ಇದ್ದರೆ ಮರುಮದುವೆ ಮಾಡಿಕೊಳ್ಳುವ ಹಕ್ಕು ಇರುತ್ತಿರಲಿಲ್ಲ. ಅವಳ ದುಃಖ ಮರೆಯಾದ ನಂತರ ಇನ್ನೊಬ್ಬ ವಿಧುರನ ಜೊತೆ ಮಾಡುತ್ತಿದ್ದರು.

ಮದುವೆ ಮಧ್ಯರಾತ್ರಿ ಊರಿನ ದೇವರ ಮಂದಿರದಲ್ಲಿ ನಡೆಯುತ್ತಿತ್ತು.[9] ವಿಧುರನು ಊರಿನ ಪ್ರಮುಖರೊಡನೆ ಮೊದಲು ಪ್ರಸ್ತಾಪಿಸಿ ಅನಂತರ ವಿಧವೆಯ ಮೃತ ಗಂಡನ ಮನೆಯವರೊಂದಿಗೆ ಮಾತನಾಡಿ ಮದುವೆಯ ದಿನವನ್ನು ಗೊತ್ತು ಪಡಿಸಿ ಕೊಳ್ಳುತ್ತಿದ್ದ.[10]

ಕೂಡಿಕೆ ಬಹಳ ಸರಳವಾದ ರೀತಿಯಲ್ಲಿ ನಡೆಯುತ್ತಿತ್ತು. ಮದುವೆಯಾಗುವ ಸಂಜೆ ಅವಳನ್ನು ತಂದೆಯ ಮನೆಯ ಹಿಂಬಾಗಿಲಿನಿಂದ ಹೊರಡಿಸಿ ಕರೆತಂದು, ಸ್ನಾನ ಮಾಡಿಸಿ ಕೂಡಿಕೊಳ್ಳುವವನಿಂದ ಬಂದ ಹೊಸ ಸೀರೆ ರವಿಕೆ ತೊಡಿಸಿ ಅರಿಶಿನ, ಕುಂಕುಮ ಮೂಗುತಿ, ಬೆಂಡೋಲೆ, ಬಳೆಗಳಿಂದ ಸಿಂಗರಿಸಿ[11] ಮದುವೆ ನಡೆಯುವ ದೇವಸ್ಥಾನಕ್ಕೆ ಕರೆತರುತ್ತಿದ್ದರು.[12] ಗಂಡಿನ ಕೈಯಿಂದ ಎಕ್ಕೆ ಗಿಡಕ್ಕೆ ತಾಳಿಕಟ್ಟಿಸುತ್ತಿದ್ದರು.[13] ನಂತರ ವಿಧವೆಗೆ ತಾಳಿಕಟ್ಟಿ ಸೀರುಡಿಕೆ ಮಾಡಿಕೊಳ್ಳುತ್ತಿದ್ದ.

ಕೂಡಿಕೆ ಮಾಡಿಕೊಂಡ ವಿಧವೆಗೆ ಮತ್ತೆ ಗಂಡ ಸತ್ತು ಹೋದರೆ ಅವಳು ಮತ್ತಷ್ಟು ಅಮಂಗಳೆ ಎಂದು ಜನ ಅವಳನ್ನು ಜರಿಯುತ್ತಿದ್ದರು.

10. ವಿನಿಮಯ ವಿವಾಹ:-

ಹಿಂದಿನ ಕಾಲದಲ್ಲಿ ' ತೆರ' ಪದ್ಧತಿಯಿಂದ ಮದುವೆಯೇ ಕಷ್ಟವಾಗುತ್ತಿತ್ತು. ಈ ಪದ್ಧತಿಯನ್ನು ತಪ್ಪಿಸುವುದಕ್ಕಾಗಿ ವಿನಿಮಯ ವಿವಾಹವನ್ನು ಜಾರಿಗೆ ತಂದಿರಬೇಕು. ' ಹೆಣ್ಣಿಗೆ ಹೆಣ್ಣು' ಎಂಬ ಹೆಸರಿನಲ್ಲಿ ಜನಪ್ರಿಯವಾಗಿದ್ದ ಪದ್ಧತಿ, ಕೊಟ್ಟು ತರುವ ಪದ್ಧತಿ ಇದು.[14] ಈ ವಿವಾಹ ಪದ್ಧತಿ ಈಗಲೂ ಕೆಲವು ಕಡೆ ಪ್ರಚಲಿತವಿದೆ.[15]

ಉಪ್ಪಾರರಲ್ಲಿ ಹಲವು ಬಗೆಯ ಮದುವೆ ಪದ್ಧತಿಗಳು ಹಿಂದೆ ರೂಢಿಯಲ್ಲಿ ಇದ್ದವಾದರೂ ''ಏಕಪತ್ನಿತ್ವ' ಕ್ಕೆ ಹೆಚ್ಚು ಗೌರವವಿತ್ತು. ಹಾಗೂ ಹೆಚ್ಚು ಪ್ರಚಲಿತ ವಿತ್ತು. ಈ ಪದ್ಧತಿಯಲ್ಲಿ ಪ್ರೀತಿ, ವಿಶ್ವಾಸ, ಸಹಬಾಳ್ವೆ, ಲೈಂಗಿಕ ತೃಪ್ತಿ, ಹೊಣೆಗಾರಿಕೆಗಳಿರುವುದರಿಂದ ಅಲ್ಲದೆ ಹಿಂದೆ ಇವರಲ್ಲಿ ' ಒಳಬಾಂಧವ್ಯ ಪದ್ಧತಿ' ಜನಪ್ರಿಯ ವಾಗಿತ್ತು.[16] ನಾಗರಿಕ ಸಂಪರ್ಕ ಬೆಳೆದಂತೆ ಮೊದಲಿನ ಪದ್ಧತಿ ಮರೆಯಾಗಿ ' ಹೊರ ಬಾಂಧವ್ಯ' ಬೆಳಕಿಗೆ ಬಂದಿದೆ. ತಮ್ಮ ಕುಲ, ಮನೆತನದ ಹೊರಗಿನ ಯಾವ

ಗಂಡಿನೊಡನೆಂತೂ ವೈವಾಹಿಕ ಸಂಬಂಧ ನಡೆಸುವುದು ರೂಢಿಯಾಗಿತ್ತು.[17] ತಮ್ಮ ಬದುಕಿನಲ್ಲಿ ಬರಬಹುದಾದ ತೊಂದರೆಗಳನ್ನು ಹೋಗಲಾಡಿಸಿ ಕೊಳ್ಳಲು ಹೊರಗಿನವರ ನೆರವನ್ನು ಪಡೆಯುವ ಉದ್ದೇಶದಿಂದಲೂ, ಈ ವಿವಾಹ ಪದ್ಧತಿಗೆ ಹೆಚ್ಚಿನ ಮಹತ್ವ ದೊರಕಿತು. ಈ ಕಾರಣದಿಂದಾಗಿ ಒಳಬಾಂಧವ್ಯ ಪದ್ಧತಿಗಿಂತ ಹೊರ ಬಾಂಧವ್ಯವೇ ಹೆಚ್ಚು ಜನಪ್ರಿಯತೆ ಗಳಿಸಲು ಸಾಧ್ಯವಾಯಿತು.

ತಮ್ಮ ಮಗಳಿಗೆ ಒಂದು ವರನನ್ನು ನೋಡಿ ಒಪ್ಪಿಗೆ ನೀಡಿ ಮದುವೆಯ 'ಏರ್ಪಾಡು ಮಾಡುತ್ತಿದ್ದರು. ಇಲ್ಲಿ ಹುಡುಗಿಯ ಒಪ್ಪಿಗೆಯನ್ನು ಕೇಳುತ್ತಿರಲಿಲ್ಲ. ಆದರೆ ಈಗ ಇಂತ ಮದುವೆ ಇಲ್ಲವೇ ಇಲ್ಲ. ಎಲ್ಲವೂ ಹೆಣ್ಣು ಕೇಳುವವರ, ಕೊಡುವವರ ಮತ್ತು ಪುರೋಹಿತರ ಕೈಯಲ್ಲಿದೆ.[18]

ಇವರು ನಡೆಸುವ 'ಶಾಸ್ತ್ರೋಕ್ತ' ರೀತಿಯ ವಿವಾಹ ಪದ್ಧತಿಯಲ್ಲಿ ಸಂಪ್ರದಾಯಗಳು, ವಿಧಿಗಳು ವಿಶಿಷ್ಟವಾಗಿವೆ. ಪರಂಪರಾನುಗತವಾಗಿ ಉಳಿದುಕೊಂಡು ಬಂದ ಮದುವೆಯ ವೈಶಿಷ್ಟ್ಯಗಳು ಕಾಣಬಹುದು. ಈ ಪದ್ಧತಿಯಲ್ಲಿ ಮಾತ್ರ, ಹೆಣ್ಣು ನೋಡುವುದರಿಂದ ಆರಂಭಿಸಿ ಅವಳನ್ನು ಮನೆದುಂಬಿಸಿ ಕೊಳ್ಳುವವರೆಗೆ ವಿವಿಧ ನಡಾವಳಿಗಳು ಈ ಜನರ ಸಂಸ್ಕೃತಿಯ ನೆಲೆಯನ್ನು ಸುರುಳಿ ಬಿಚ್ಚಿಸುತ್ತವೆ.

ಅಧ್ಯಾಯ — 4

ಮದುವೆ: ಕ್ರಮ ಮತ್ತು ವಿಶ್ಲೇಷಣೆ

4·1 ಪೂರ್ವಭಾವೀ ಆಚರಣೆಗಳು

4·2 ಮದುವೆಯ ಮೊದಲ ದಿನ

4·3 ಮದುವೆಯ ದಿನ

4·4 ಮದುವೆಯ ನಂತರದ ಆಚರಣೆ

4·5 ಶಕುನಗಳು ಮತ್ತು ನಂಬಿಕೆಗಳು

ಮದುವೆ: ಕ್ರಮ ಮತ್ತು ವಿಶ್ಲೇಷಣೆ

ಉಪ್ಪಾರರ ಬದುಕಿನಲ್ಲಿ ಮದುವೆ ಬಹು ಮುಖ್ಯ ಘಟ್ಟ. ಬಹುಶ: ಬಹಳಷ್ಟು ಜನಾಂಗಗಳಲ್ಲೂ ಕೂಡಾ, ಅದು ಮನೆತನದ ಗೌರವವನ್ನು ಪ್ರತಿನಿಧಿಸುತ್ತದೆ ಎಂದು ಅವರ ನಂಬಿಕೆ. ಕುಟುಂಬ ಮತ್ತು ಸಮಾಜ ವ್ಯಾಪ್ತಿಯನ್ನು ನಿರ್ಧರಿಸುವ ಪ್ರಮುಖ ಮಾನದಂಡವಾಗಿ 'ಮದುವೆ' ಅವರಲ್ಲಿ ಅನುಷ್ಠಾನಕ್ಕೆ ಬರುತ್ತದೆ.

ಉಪ್ಪಾರರ ಮದುವೆ ಮೊದಲ ಹಂತ ಆರಂಭವಾಗುವುದು 'ಬೆಡಗ' ನ ಅಂತ್ಯದಲ್ಲಿ (ಬಳಿ). ಪ್ರಸ್ತುತ ಉಪ್ಪಾರರಲ್ಲಿ 16 ಬೆಡಗುಗಳಿವೆ.

1) ಸಣ್ಣಕ್ಕಿಯವರು
2) ಆದೇಲಿಯವರು
3) 'ಒನಪತ್ಲಾರೆ
4) ಮುಳಿಲಾರ
5) 'ಒನ್ನೇರು
6) ಬಾಗಲೇರು
7) ಮಾದಕ್ಷರರು
8) ರಾಮ ಸ್ವಾಮಿಗಳು
9) ಬೆನ್ನುಲೆಯವರು
10) ಬಲಬೂಜ
11) ಮಂತ್ರಿಗಳು
12) ಒಂದೇಲಿಯವರು
13) ಬಾಧಲೆಯವರು
14) ಸಗರ
15) ಸಕ್ಕರೆ
16) ಸಂಪಿಗೆ.

ವರನು ತನ್ನ ಗೋತ್ರವನ್ನು (ಇವರಲ್ಲಿ '7ವರ, 8 ವರ, 5 ವರ' ಎಂದು ಕರೆಯುತ್ತಾರೆ.) ಬಿಟ್ಟು ತನಗೆ ಸರಿ ಹೊಂದುವ ಬೆಡಗೊಂದನ್ನು ಆಯ್ದು ಕೊಳ್ಳಬೇಕಾಗುತ್ತದೆ. ಇಂಥ ಆಯ್ಕೆಯಲ್ಲಿ ವರನ ತಂದೆ ಮತ್ತು ತಾಯಿಯರ ಬಳಿಯನ್ನೇ ಲಕ್ಷಕ್ಕೆ ತೆಗೆದು ಕೊಳ್ಳುತ್ತಾರೆ. ಆಸ್ತಿಯ ಒಡೆತನ ಹಾಗೆ 'ಬೆಡಗು' ತಂದೆಯಿಂದ ಮಗನಿಗೆ ಇಳಿದು ಬರುವುದರಿಂದ, ತಂದೆಯ 'ಬೆಡಗಿ'ನ ಹೆಣ್ಣನ್ನು ಮದುವೆಯಾಗುವಂತಿಲ್ಲ. ಆದರೆ ತಂದೆಯ ತಂಗಿಯನ್ನು ಬೇರೆ ಕಡೆಗೆ ಕೊಟ್ಟಿರುವುದರಿಂದ ಆಕೆಯಲ್ಲಿ ಹುಟ್ಟಿದ ಹೆಣ್ಣನ್ನು ಮತ್ತೆ ಮನೆಗೆ ಮದುವೆಯ ಮೂಲಕ ತರಬಹುದು. ಮಗಳನ್ನು ಕೊಡಬಹುದು. ಅದೇ ಪ್ರಕಾರ ಮಗಳನ್ನು ತಾಯಿಯ ಸಹೋದರನೇ ಮದುವೆ ಮಾಡಿಕೊಳ್ಳಬಹುದು. ಇಲ್ಲವೇ ಸೋದರ ಮಾವನ ಮಗನಾದರೂ ಮದುವೆ ಆಗಬಹುದು. ಆದರೆ ಒಂದೇ ಬೆಡಗಿನಲ್ಲಿ ಮದುವೆಯಾಗುವಂತಿಲ್ಲ. ಇದು ಮೂಲ ನಿಷೇಧ. ಒಂದೇ ಬೆಡಗಿನವರೆಲ್ಲ ಸಹೋದರ ಸಹೋದರಿಯರ ಸಂಬಂಧವಿರುತ್ತದೆ.

ಹೊಸಪೇಟೆ ತಾಲೂಕ ಉಪ್ಪಾರರಲ್ಲಿ '16' ಬೆಡಗುಗಳು ಮಾತ್ರ ಇವೆ ಎಂದು ಕ್ಷೇತ್ರಕಾರ್ಯದಿಂದ ದೊರಕಿದೆ. ಕರ್ನಾಟಕದ ಉಪ್ಪಾರರಲ್ಲಿ ಅನೇಕ ಬೆಡಗುಗಳಿವೆ.[19]

ಹೆಣ್ಣು

ಗಂಡು

ಬೆಡಗುಗಳು

	ಶಕ್ತಿಕ್ತಿ	ಆದೇಲಿ	ಓಸ್ವತ್ತಾರ್	ಮೊಳಿಲಾರ್	ಓನ್ನೇರು	ಬಾಗಲೇರು	ಮೂದಕ್ಕ್ರರು	ರಾಮಸ್ವಾಮಿ	ಬೆನ್ನಲಿ	ಬಲಬೂಜ	ಮಂತ್ರಿಗಳು	ಒಂದೇಲಿ	ಬಾಧಲಿ	ಸಗರ	ಸಕ್ಕರೆ	ತೆಂಪಿಗೆ
ಶಕ್ತಿಕ್ಕೆಯವರು		•	•	•	•		•		•		•			••	•	•
ಆದೇಲಿಯವರು														••	•	•
ಓಸ್ವತ್ತಾರ್														•	••	•
ಮೊಳಿಲಾರ್	••	••	•		•		•	•						•	•	•••
ಓನ್ನೇರು														••	•	•
ಬಾಗಲೇರು														•	•	•
ಮೂದಕ್ಕ್ರರು														•••	•••	•••
ರಾಮಸ್ವಾಮಿಗಳು	•	•	•											••	••	••
ಬೆನ್ನಲಿಯವರು														••	•	•
ಬಲಬೂಜ														••	•	•
ಮಂತ್ರಿಗಳು	•	•	•	•	•	•	•	•						•••	•	•
ಒಂದೇಲಿಯವರು														••	•	•
ಬಾಧಲಿಯವರು														•	•	•
ಸಗರ	•••	••	•	••	•	•	•	•	•	•	•	•	•		•••	•••
ಸಕ್ಕರೆ	•••••	•••	••	•	•	•	•	•	•	•	•	•	•	•		••••
ತೆಂಪಿಗೆ	••••	•••	••	•	•	•	•	•	•	•	•	••	•	•	••	

ಉಪ್ಪಾರ ಜನಾಂಗದಲ್ಲಿ ಬೆಡಗುಗಳ ಆಯ್ಕೆ

4.1 ಪೂರ್ವಭಾವೀ ಆಚರಣೆಗಳು

ಹೆಣ್ಣಿನ ಆಯ್ಕೆ :—

ಒಳಬಾಂಧವ್ಯವಿದ್ದ ಸಂದರ್ಭದಲ್ಲಿ ಹಳೆಯ ಸಂಬಂಧದಲ್ಲಿ ಹೆಣ್ಣನ್ನು ತರುವುದು ರೂಢಿಯಲ್ಲಿತ್ತು. 'ಹೆಣ್ಣನ್ನು ಕೊಟ್ಟಕಡೆ ಹಳೆಯ ಸಂಬಂಧ ಬೆಳೆದಿರುತ್ತದೆ. ಅಲ್ಲಿ ಮತ್ತೊಂದು ಸಂಬಂಧವನ್ನು ಮಾಡುವುದರಲ್ಲಿ ಅಪಾಯವಿಲ್ಲ. ಕಂಡು — ಕೇಳಿದ ಸ್ಥಳವಾದುದರಿಂದ ಗಂಡು — ಹೆಣ್ಣುಗಳ ಬಗ್ಗೆ ಯಾವುದೇ ರೀತಿಯಲ್ಲಿ ಆತಂಕ, ಭಯ ಗಳನ್ನು ಇಟ್ಟುಕೊಳ್ಳುವ ಅಗತ್ಯವಿರುವುದಿಲ್ಲ.' (ಪರಮಶಿವಯ್ಯ ಜೀ.ಶಂ. 1978:18) ಆದರೆ ಎಲ್ಲ ಸಂಧರ್ಭಗಳಲ್ಲೂ ಹಳೆಯ ಸಂಬಂಧದ ನಂಟಸ್ತಿಕೆ ನಡೆಯುವುದು ಸಾಧ್ಯ ವಿರಲಿಲ್ಲ. ಅಂಥ ಸಂದರ್ಭಗಳಲ್ಲಿ ಹುಡುಗನಿಗೆ(ಹುಡುಗಿಗೆ) ತಕ್ಕುದಾದ ಜೋಡಿಯನ್ನು ನೋಡಲು ಬೇರೆ ಬೇರೆ ಊರುಗಳಿಗೆ ಅಲೆಯುವುದು ತೀರ ಅನಿವಾರ್ಯ. ವಯಸ್ಸಿಗೆ ಬಂದ ಹುಡುಗಿ ಇರುವ ಊರು ತಿಳಿದು ತಮ್ಮ ಆಪ್ತರ ಜೊತೆ ಈ ಬಗ್ಗೆ ಚರ್ಚೆಮಾಡಿ ಅವರ ಮನೆ, ಕುಲ ಇತ್ಯಾದಿಗಳನ್ನು ತಿಳಿದು ಯಾವುದೋ ನೆಪ ಮಾಡಿ ಆ ಊರಿಗೆ ಹೋಗುತ್ತಾರೆ.[20] ಮೊದಲು ಹೆಣ್ಣಿನ ವಿವರಗಳನ್ನು ತಿಳಿಯಬೇಕಾಗುತ್ತಿತ್ತು.[21] ತಮಗೆ ಹಿಡಿಸಿದರೆ ಅನಂತರ ಮದುವೆಗೆ ಪ್ರಯತ್ನ ನಡೆಯುತ್ತಿತ್ತು. ಹೆಣ್ಣನ್ನು ಗೊತ್ತು ಮಾಡುವ ಮೊದಲು ಮಧ್ಯವರ್ತಿಯೊಬ್ಬರ ಸಹಕಾರದಿಂದ ಹೆಣ್ಣಿನ 'ವರ'[22] ವಯಸ್ಸು ಮತ್ತು ವಂಶ ವಿಚಾರಗಳನ್ನು ಔಪಚಾರಿಕವಾಗಿ ತಿಳಿದು[23] ವರಸಾಮ್ಯ ಕೂಡಿಬಂದರೆ ಹಿರಿಯರು ಮಧ್ಯವರ್ತಿಯ ಮೂಲಕ ಹೆಣ್ಣು ನೋಡಲು ಬರುವುದಾಗಿ ತಿಳಿಸುತ್ತಾರೆ. ಹೆಣ್ಣಿನ ಮನೆಯವರು ಒಪ್ಪಿಗೆ ನೀಡುತ್ತಾರೆ.[24]

ಒಂದು ಶುಭ ದಿನ ಗಂಡಿನ ಕಡೆಯಿಂದ ಮೂರು ಅಥವಾ ಐದು ಜನರು ಹಾದಿ ನಿಮಿತ್ತ[25] ನೋಡಿಕೊಂಡು ಹೆಣ್ಣಿನ ಮನೆಗೆ ಬರುತ್ತಾರೆ. ಈ ಸಂದರ್ಭದಲ್ಲಿ ಹೆಣ್ಣಿನ ಮನೆಯವರು ಬಹಳ ಮರ್ಯಾದೆಯಿಂದ ಬರಮಾಡಿಕೊಂಡು ಕೈಕಾಲುಗಳನ್ನು ತೊಳೆದು ಕೊಳ್ಳಲು ನೀರು ಕೊಟ್ಟು ನಂತರ ಒರಸಿಕೊಳ್ಳಲು ಬಟ್ಟೆಯನ್ನು ಕೊಡುತ್ತಾರೆ. ಬಂದ ಅತಿಥಿಗಳನ್ನು ಚಾಪೆಯ ಮೇಲೋ ಕುರ್ಚಿಗಳ ಮೇಲೋ ಕೂರಿಸುತ್ತಾರೆ. ಹೆಣ್ಣು ಸರ್ವಾಲಂಕೃತಳಾಗಿ ಪಾನೀಯ ತುಂಬಿದ ಲೋಟಗಳನ್ನು ಹಿಡಿದುಕೊಂಡು ಬಂದು ಅಥಿತಿಗಳ ಮುಂದಿಡುತ್ತಾಳೆ.[26] ಗಂಡಿನವರು ಸೂಕ್ಷ್ಮವಾಗಿ ಹೆಣ್ಣಿನ ಪರೀಕ್ಷೆಗೆ ತೊಡಗು ತ್ತಾರೆ.[27] ಒಪ್ಪಿಗೆಯಾಗಿದ್ದರೆ ಅವಳ ಹಿರಿಯರಿಂದ ಹುಟ್ಟು ಹೆಸರು, ವಯಸ್ಸು, ವರ

ಬೆಡಗು, ಎಲ್ಲವನ್ನು ತಿಳಿದು 'ಹೇಳಿಕಳುಹಿಸುತ್ತೇವೆ' ಎಂದು ಹೇಳಿ ಹೊರಬರುತ್ತಾರೆ. ಊರಿಗೆ ಬಂದ ಮೇಲೆ ಮನೆಯವರೊಂದಿಗೆ ಹೆಣ್ಣಿನ ಬಗೆಗೆ ತಿಳಿಸಿ ಆಮೇಲೆ 'ಸಾಲಾವಳಿ' ನೋಡಿಸುತ್ತಾರೆ.[28] ಸಾಲಾವಳಿ ಕೂಡಿ ಬಂದರೆ ಹೆಂಗಸರನ್ನು ಕಳುಹಿಸಿ ಹೆಣ್ಣಿನ ಬಗೆಗಿನ ಹೆಚ್ಚಿನ ವಿವರಗಳನ್ನು ತಿಳಿದುಕೊಳ್ಳುತ್ತಿದ್ದರು. ಹೆಣ್ಣಿನ ಕಡೆಯವರು ಈ ಹೆಂಗಸರಿಗೂ, ಗಂಡಸರಿಗೆ ನೀಡಿದ ಆತಿಥ್ಯವನ್ನೇ ನೀಡುತ್ತಿದ್ದರು. ಆ ಹೆಂಗಸರಿಗೆ ಹುಡುಗಿ ಇಷ್ಟವಾದಲ್ಲಿ ಹೆಣ್ಣಿನ ಕಡೆಯವರಿಗೆ ಗಂಡಿನ ಮನೆಗೆ ಒಂದು ದಿನ ಬಂದು ಹೋಗುವಂತೆ ಹೇಳಿ ಬರುತ್ತಾರೆ.

ಕರೆಯನ್ನು ಸ್ವೀಕರಿಸಿ, ಒಂದು ಗೊತ್ತಾದ ದಿನ, ಹೆಣ್ಣಿನ ಕಡೆಯ ಗಂಡಸರು ಗಂಡಿನ ಮನೆಗೆ ಬರುತ್ತಾರೆ.[29] ಬರುವಾಗ ಮಾಮೂಲಿನಂತೆ ಇವರು ಶುಭಾಶುಭ ಶಕುನಗಳನ್ನು ಗಮನಿಸುತ್ತಾರೆ. ಆದರೆ ಗಂಡಿನವರು ಹೆಣ್ಣನ್ನು ಪರೀಕ್ಷಿಸಿ ನೋಡುವಂತೆ ಇವರು ಗಂಡನ್ನು ಪರೀಕ್ಷಿಸಿ ನೋಡುವುದಿಲ್ಲ. ಗಂಡು ಮತ್ತು ಅವನ ಮನೆತನ ಹಿಡಿಸಿದರೆ ಸಾಕು.

ನಿಶ್ಚಿತಾರ್ಥ :–

ಇದನ್ನು ಉಪ್ಪಾರರು ಎರಡು ಬೇರೆ ಬೇರೆ ದಿನಗಳಲ್ಲಿ ನಡೆಸುತ್ತಾರೆ. ಇದನ್ನು 'ಚಿಕ್ಕ ಇಳ್ಯಾ' ಮತ್ತು 'ದೊಡ್ಡ ಇಳ್ಯಾ' ಎಂದು ಕರೆಯುತ್ತಾರೆ.

1. ಚಿಕ್ಕ ಇಳ್ಯಾ :–

ಇದು ಸಾಮಾನ್ಯವಾಗಿ ಹೆಣ್ಣಿನ ಮನೆಯಲ್ಲಿ ನಡೆಯುತ್ತದೆ. ಗಂಡಿನ ಮನೆಯವರು ಹೆಣ್ಣನ್ನು ಒಪ್ಪಿದ ನಂತರ ಒಂದು ಗೊತ್ತಾದ ದಿನ ಹುಡುಗಿಯ ಮನೆಗೆ ಬಂದು ತಾವು ತಂದಿದ್ದ ಹೊಸ ಸೀರೆ, ಕುಪ್ಪಸ, ಹೂ ಹಣ್ಣು ಇತ್ಯಾದಿಗಳಿಂದ ಸಿಂಗರಿಸಿ ಕೊಡುವ ಮತ್ತು ತೆಗೆದುಕೊಳ್ಳುವ ವಿಚಾರ ಮಾತನಾಡಿ ಮುಂದೆ ನಡೆಯುವ ದೊಡ್ಡ ಇಳ್ಯಾದ ದಿನವನ್ನು ತಿಳಿಸುತ್ತಾರೆ. ಈ ದಿನದ ಸಂತೋಷಕ್ಕಾಗಿ ಸಿಹಿ ಅಡಿಗೆ ಊಟವನ್ನು ಮಾಡಿ ಊರಿಗೆ ಬರುತ್ತಾರೆ.

2. ದೊಡ್ಡ ಇಳ್ಯ:-

ಈ ಸಮಾರಂಭದಂದು ಎರಡು ಕಡೆಯ ಕುಲಬಾಂಧವರು ಸೇರುತ್ತಾರೆ. ಸಣ್ಣ ಇಳ್ಯದಲ್ಲಿ ಕೊಡುವ ತೆಗೆದು ಕೊಳ್ಳುವ ಮಾತು ಕತೆ ಮಾತ್ರ ನಡೆದಿರುತ್ತದೆ. ಆದರೆ ಇಲ್ಲಿ ಹಾಗಲ್ಲ. ತಮಗೆ ಬರಬೇಕಾದುದನ್ನು ತೆಗೆದುಕೊಳ್ಳುತ್ತಾರೆ. ಕೊಡುವುದಿದ್ದರೆ ಕೊಡುತ್ತಾರೆ. ಒಂದು ಒಳ್ಳೆಯ ದಿನ ಹೆಣ್ಣಿನ ಮನೆಗೆ ಗಂಡಿನ ಕಡೆಯ ಹಿರಿಯರು, ಮಹಿಳೆಯರು, ಆಪ್ತ ಬಂಧುಗಳು ಬರುತ್ತಾರೆ. ಹಾಗೆಯೆ ಹೆಣ್ಣಿನ ಊರಿನ ಆಪ್ತ ಬಂಧುಗಳು, ಊರಿನವರು ಸೇರಿಕೊಂಡಿರುತ್ತಾರೆ. ಅಂದು ಹೆಣ್ಣಿಗೆ ಹೊಸ ಸೀರೆ, ಒಡವೆ, ಆಭರಣಗಳಿಂದ ಸಿಂಗರಿಸಿರುತ್ತಾರೆ. ಹುಡುಗನು ಹೊಸಬಟ್ಟೆ ಧರಿಸಿರುತ್ತಾನೆ. ತಾನು ತಂದ ಪ್ರಿಯ ಕೊಡುಗೆ (ಉಂಗುರ) ಅವಳಿಗೆ ತೊಡಿಸುತ್ತಾನೆ. ಹಾಗೆ ಹುಡುಗಿಯೂ 'ಏನಾದರೂ(ಸರ) ಕೊಡುತ್ತಾಳೆ. ಈ ಸಂದರ್ಭದಲ್ಲಿ ಹೆಣ್ಣುಮಕ್ಕಳು ಹಾಡು ಹೇಳುತ್ತಾರೆ.

"ಒಪ್ಪಿ ಬಂದೀವಿ ಕಪ್ಪನಾರು ತಂದೀವೆ
ಬಾರೆ ನಾಡುಕುಮಾತ ಜಗಲೀಗೆ: ಚಣ್ಣುಮಕ್ಕನೆ
ಬಣ್ಣಕು ಬೊಂಬಕು ಅಳತೆಯೇ:"

"ಒಪ್ಪಿ ಬಂದೀವಿ ಕಪ್ಪನಾರು ತಂದೀವೆ
ಬಾರೆ ನಾಡುಕುಮಾತ ಜಗಲೀಗೆ: ಚಣ್ಣುಮಕ್ಕನೆ
ಚಿನ್ನಕು ಕೆಂಪುಗು ಅಳತೆಯೇ:"

(ಪೂರ್ಣ ಹಾಡಿಗೆ: ನೋಡಿ ಅನುಬಂಧ
— ಇಳ್ಯ ಮಾಡಿಸುವಾಗ)

ಹೆಣ್ಣಿನ ಮನೆಗೆ ಬಂದ ಗಂಡಿನ ಕಡೆಯ ಹೆಣ್ಣುಮಕ್ಕಳು ಹೆಣ್ಣನ್ನು ಜಗಲಿಗೆ ಕರೆದು ಅವಳಿಗೆ ವಿವಿಧ ಆಭರಣ ಮಾಡಿಸಲು ಅಳತೆ ಕೊಡುವಂತೆ ಈ ಹಾಡಿನ ಉದ್ದಕ್ಕೂ ವ್ಯಕ್ತವಾಗುತ್ತದೆ.

ಅಂದು ಸೇರಿದ ಎಲ್ಲಾ ಬಂಧುಗಳಿಗೂ ಊಟದ ವ್ಯವಸ್ಥೆ ಇರುತ್ತದೆ.

ಲಕ್ಷ್ಮಿ ಮಾಡುವುದು:—

ಮದುವೆಗೆ 5 ದಿನದ ಮೊದಲು ಈ ಶಾಸ್ತ್ರ ನಡೆಯುತ್ತದೆ. ಅಂದಿನ ಸಮಾರಂಭದಲ್ಲಿ ಊರಿನ ಹಿರಿಯರು, ಹತ್ತಿರದ ಬಂಧುಗಳು, ಸೇರಿರುತ್ತಾರೆ. ಎಲ್ಲರಿಗಿಂತ ಮುಖ್ಯವಾಗಿ ಪುರೋಹಿತರು ಬಂದಿರುತ್ತಾರೆ. ಪುರೋಹಿತರು ಲಗ್ನಪತ್ರಿಕೆ ಬರೆದು ಅದನ್ನು ಸಭೆಯ ಮುಂದೆ 'ಓದಿದ ನಂತರ ಅರಿಶಿಣ ಕುಂಕುಮ ಹಚ್ಚಿ ಪೂಜಿಸಲಾಗುವುದು. ಈ ಕಾರ್ಯ ಮುಗಿದ ನಂತರ ಗಂಡಿನವರಾಗಲಿ ಹೆಣ್ಣಿನವರಾಗಲಿ ಆ ಸಂಬಂಧವನ್ನು ಬಿಡುವಂತಿಲ್ಲ.

ಮನೆಯ ಅಂಗಳದಲ್ಲಿ ಹಾಲುಗಂಬ ನೆಡುವ ಕಾರ್ಯಕ್ರಮವಿರುತ್ತದೆ. ಇದು ಯಾವುದೇ ಮರ ಆಗಿರಬಹುದು. ಆದರೆ ಹೆಚ್ಚಾಗಿ ನೊಗವನ್ನು ಹಾಲುಗಂಬವಾಗಿ ಉಪಯೋಗಿಸುತ್ತಾರೆ.[30] ಈ ಕಂಬಕ್ಕೆ ಮಾವಿನ ಎಲೆ, ಕುಂಕುಮ, ಚಂದನಗಳಿಂದ ಶೃಂಗರಿಸಿ ಪೂಜಿಸುತ್ತಾರೆ. ಅಂದೇ ಮನೆಯ ಒಳಗಡೆ ಲಕ್ಷ್ಮಿ ಫೋಟೋ ಇಟ್ಟು ಅದರ ಮುಂದೆ ಎಡೆ ಮಾಡಿ[31] ಹಣ್ಣು ಕಾಯಿಗಳಿಂದ ಪೂಜಿಸುತ್ತಾರೆ. ಲಕ್ಷ್ಮಿ ಪೂಜೆಯ ಎಡೆಯನ್ನು ಊಟಮಾಡಿದ 5 ಜನ ಆ ರಾತ್ರಿ ಮನೆಯ ಹೊರಗಡೆ ಹೋಗುವಂತಿಲ್ಲ.[32] ಈ ದಿನ ಅಲ್ಲಿ ಸೇರಿದ ಎಲ್ಲಾರಿಗೂ ಊಟದ ವ್ಯವಸ್ಥೆ ಇರುತ್ತದೆ.

ಹಿರಿಯರ ಪೂಜೆ:—

ಲಕ್ಷ್ಮಿ ಪೂಜೆ ನಡೆದು ಮೂರನೇ ದಿನ ಈ ಪೂಜೆ ನಡೆಯುತ್ತದೆ. ಅಂದಿನ ವಿಶೇಷ ಎಂದರೆ ನಡುಮನೆಯಲ್ಲಿ ಪಿತೃಗಳಿಗೆ ಎಡೆಮಾಡಿ, ಹೊಸಬಟ್ಟೆಯನ್ನು ಇರಿಸಿ ಹಣ್ಣು ಕಾಯಿಗಳಿಂದ ಪೂಜಿಸುತ್ತಾರೆ. ಈ ದಿನವೂ ಹತ್ತಿರದ ಬಂಧುಗಳು, ಮತ್ತು ದಾಯಾದಿಗಳು ಸೇರಿರುತ್ತಾರೆ. ಊಟದ ವ್ಯವಸ್ಥೆಯೂ ಇರುತ್ತದೆ.

ಮದುವೆಯ ಕರೆ:—

ಲಗ್ನ ಪತ್ರಿಕೆಗಳು ಅಚ್ಚಾದ ಮೇಲೆ ಅವನ್ನು ಕಳುಹಿಸುವುದರ ಜೊತೆಗೆ ಹತ್ತಿರದ ನೆಂಟರನ್ನು ಮನೆಯವರೇ ಸ್ವತಃ ಹೋಗಿ ಕೈ ಜೋಡಿಸಿ ನಿಂತು ಕರೆದು ಬರುವ ಪದ್ಧತಿ ಇದನ್ನು ' ಮದುವೆ ಕರೆ' ಎಂದು ಕರೆಯುತ್ತಾರೆ. ಊರಿನವರಿಗೆ ಲಗ್ನಪತ್ರಿಕೆಗಳನ್ನು ಕೊಡುವುದಲ್ಲದೆ ಚಪ್ಪರದ ದಿನ ಎಲ್ಲರ ಮನೆಗೆವಿಳ್ಯ ಬೀರುವುದರ ಮೂಲಕ ಇನ್ನೂ ಆತ್ಮೀಯವಾಗಿ ಕರೆಯುವುದುಂಟು. ಇದನ್ನು 'ವಿಳ್ಯಬೀರುವುದು' ಎನ್ನುವಲ್ಲಿ ವಿವರಿಸಲಾಗಿದೆ.

4.2 ಮದುವೆಯ ಮೊದಲ ದಿನ:-

ಮದುವೆ ಗೊತ್ತಾದ ದಿನದಿಂದ ಅನೇಕ ಆಚರಣೆ ಸಂಪ್ರದಾಯಗಳು ನಡೆಯುತ್ತಲೆ ಇರುತ್ತವೆ. ಮದುವೆ ದಿನ ಸಮೀಪ ಬರುತ್ತಿರುವಾಗ ಆಚರಣೆ ಮತ್ತು ಸಂಪ್ರದಾಯ ಗಳು ಹೆಚ್ಚು.

ಹಂದರ:-

ಮನೆಯನ್ನು ಸ್ವಚ್ಛಗೊಳಿಸಿ ಸಗಣಿಯಿಂದ ಬಳಿಯುತ್ತಾರೆ. ಇದು ಮನೆಯ ಒಳಗೆ ನಡೆದರೆ ಮನೆಯ ಹೊರಗೆ, ಮುಂದಿನ ಅಂಗಳದಲ್ಲಿ ದೊಡ್ಡ ಚಪ್ಪರವನ್ನು ಹಾಕು ತ್ತಾರೆ. ಈ ಕೆಲಸ ಕಾರ್ಯಗಳಲ್ಲಿ ಊರಿನವರು, ಅಪ್ತಬಂಧುಗಳು ಸೇರಿಕೊಂಡಿರು ತ್ತಾರೆ. ಚಪ್ಪರದ ಕಂಬಗಳಿಗೆ ಮಾವಿನ ಸೊಪ್ಪು, ಹೂ ಕಟ್ಟಿ ಉಳಿದುದನ್ನು ಚಾವಣಿಗೆ ತೂಗಿ ಬಿಡುತ್ತಾರೆ. ಚಪ್ಪರದ ಕೆಳಭಾಗವನ್ನು ಗುಡಿಸಿ ಸಗಣಿಯಿಂದ ಬಳಿದು ಸ್ವಚ್ಛ ಗೊಳಿಸುತ್ತಾರೆ. ಚಪ್ಪರದ ಮೇಲಿನ ಭಾಗಕ್ಕೆ ತಂಗಿನ ಗರಿಗಳನ್ನು ಹೊದಿಸಿರುತ್ತಾರೆ. ಮದುವೆಯ ಅನೇಕ ಶಾಸ್ತ್ರ, ವಿಧಿಗಳು ಇದರ ತಳದಲ್ಲಿ ನಡೆಯುತ್ತವೆ. ಧಾರಾ ಮಂಟಪವನ್ನು ಅಲ್ಲಿಯೇ ಮಾಡಲಾಗುತ್ತದೆ. ನಾಲ್ಕು ಕಂಬಗಳನ್ನು ನೆಟ್ಟು, ಆ ನಾಲ್ಕು ಕಂಬಗಳನ್ನು ಬಣ್ಣದ ಪೇಪರಿನಿಂದ ಸುತ್ತಿ ಮಂಟಪದ ಮೇಲಿನ ಭಾಗದಿಂದ ಹೂ ಮಾಲೆಯನ್ನು ಅಂದಕಾಣುವಂತೆ ಕ್ರಮವಾಗಿ ನೇತುಬಿಡುತ್ತಾರೆ.

ಅಂದು ಈ ಕೆಲಸ ಕಾರ್ಯಗಳಲ್ಲಿ ಸಹಕರಿಸಿದ ಬಂಧುಗಳಿಗೂ, ಊರಿನವರಿಗೂ ಊಟದ ವ್ಯವಸ್ಥೆ ಇರುತ್ತದೆ. ಚಪ್ಪರವನ್ನು ಹಾಕಿದ್ದರಿಂದ ಸಾಮಾನ್ಯವಾದ ಸ್ಥಳ ಅಸಾಮಾನ್ಯ ಸ್ಥಳ ವಾಗುವುದರ ಜೊತೆಗೆ ಶುಭಕಾರ್ಯ ನಡೆಯುತ್ತದೆ ಎನ್ನುವುದನ್ನು ತಿಳಿಸುವ ಮಾಧ್ಯಮವೂ ಹೌದು. ಇವೆರಡನ್ನೂ ತನ್ನ ಗರ್ಭದಲ್ಲಿ ಅಡಗಿಸಿಕೊಂಡು, ಮದುವೆಗೆ ಬಂದ ಜನರಿಗೆ ನೆರಳನ್ನು ಕೊಡುತ್ತದೆ.

ಸೇಶಿಕಟ್ಟು:-

ಸಾಲಾವಳಿ ಬಂದ 5ಜನ ಐದುಗಿತ್ತಿಯರು ಅಂದು ಹುತ್ತಕ್ಕೆ ಹಾಲು, ಕುಂಕುಮ, ಚಂದನ, ಹೂ, ಹಣ್ಣು ಕಾಯಿಗಳಿಂದ ಪೂಜಿಸಿ ನಂತರ ಹುತ್ತದ ಮಣ್ಣನ್ನು ಮನೆಗೆ

ತರುತ್ತಾರೆ. ಈ ಕೆಲಸಗಳಲ್ಲಿ ವಿಧವೆ, ಮತ್ತು ಬಂಜೆಯರು ಭಾಗವಹಿಸುವಂತಿಲ್ಲ. ಬಾವಿಯಿಂದ ತಂದ ಹೊಸ ನೀರಿನಿಂದ ಹುತ್ತದ ಮಣ್ಣನ್ನು ಚೆನ್ನಾಗಿ ಕಲಸಿ ಮನೆಯ ಮುಂದಿನ ಗೋಡೆಗೆ ತಾಗಿದಂತೆ 1 ಅಡಿ ಎತ್ತರದ 4 ಜನ ಕುಳಿತುಕೊಳ್ಳಲು ಸಾಧ್ಯವಾಗುವಂತೆ ಒಂದು ಮಣ್ಣಿನ ವೇದಿಕೆಯನ್ನು ನಿರ್ಮಿಸುತ್ತಾರೆ. ಈ ವೇದಿಕೆಯ ಹಿಂಭಾಗದ ಗೋಡೆಯ ಮೇಲೆ ಎರಡು ಚಿತ್ರಗಳನ್ನು ಬರೆದಿರುತ್ತಾರೆ. ಒಂದು ಚಿತ್ರದ ಕೆಳಗೆ 'ವರ' ಕುಳಿತುಕೊಳ್ಳುವ ಸ್ಥಳ ಇನ್ನೊಂದು 'ವಧು' ಕುಳಿತುಕೊಳ್ಳುವ ಸ್ಥಳ.

ಬಿಡದಿ ಮನೆ:—

ಹೆಣ್ಣಿನ ಕಡೆಯವರು ಗಂಡಿನ ಮನೆಗೆ ಒಂದು ದಿನ ಮೊದಲೇ ಬರುತ್ತಾರೆ. ಹೆಣ್ಣಿನ ಮನೆಯಿಂದ ಹೊರಡುವಾಗ ಶಕುನ ನೋಡಿ ಬರುತ್ತಾರೆ. ಅಲ್ಲಿಯು ಚಪ್ಪರವನ್ನು ಹಾಕಲಾಗಿರುತ್ತದೆ. ಧಾರೆ ಗಂಡಿನ ಮನೆಯಲ್ಲಿ ನಡೆಯುವುದರಿಂದ ಹೆಣ್ಣಿನ ಮನೆಯಲ್ಲಿ ಯಾವುದೇ ಶಾಸ್ತ್ರಗಳು ಧಾರೆಗೆ ಮೊದಲು ಇರುವುದಿಲ್ಲ. ಧಾರೆ ಮುಗಿದು 5 ದಿನದ ನಂತರ ಅಲ್ಲಿ ಶಾಸ್ತ್ರಗಳಿರುತ್ತವೆ. ಅದರಲ್ಲಿ ಮುಖ್ಯವಾದುದು ನಾಗೋಲಿ ಶಾಸ್ತ್ರವಾಗಿದೆ. ಇದನ್ನು ಮುಂದೆ ವಿವರಿಸಲಾಗುತ್ತದೆ.

ಧಾರೆಗೆ ಮೊದಲೆ ಹೆಣ್ಣು ಗಂಡಿನ ಮನೆಯನ್ನು ಪ್ರವೇಶ ಮಾಡುವಂತಿಲ್ಲ. ಈ ಕಾರಣದಿಂದ ಅವರಿಗಾಗಿ ತಮ್ಮ ಮನೆಯ ಹೊರಗಿನ ಕೊಠಡಿಯನ್ನು ಬಿಟ್ಟು ಕೊಡುತ್ತಾರೆ. ಇದನ್ನು 'ಬಿಡದಿಮನೆ' ಎಂದು ಕರೆಯಲಾಗುತ್ತದೆ. ಗಂಡಿನ ಕಡೆಯವರು ಹೀಗೆ ಬರಮಾಡಿ ಕೊಳ್ಳುತ್ತಾರೆ.

''ಬಣ್ಣದ್ಪರವೀಗೆ ಚಿನ್ನದ ಚೆಂಬಿಟ್ಟು
ನಾರಿಯ್ಕೇರಿ ಪಾದಾ ತೊಳದೇ ಬನ್ನಿ ನೆಂಟರ ಮನಿಯಾ
ಬಣ್ಣದ ಹರುಜಗುಲಿ ಕೆಸಾರೆದಿಂ''

ಬಂದ ಅಥಿತಿಗಳನ್ನು ಸ್ವಾಗತ ಮಾಡುವ ಮೊದಲು ಅವರಿಗೆ ಕಾಲು ತೊಳೆಯಲು ನೀರನ್ನು ಕೊಡುತ್ತಿದ್ದಾರೆ. ಆ ನೀರು ಬಣ್ಣದ ಹರಿವಿಯಲ್ಲಿದೆ. ಅದನ್ನು ತೆಗೆದು

ಕೊಳ್ಳಲು ಚಿನ್ನದ ಚೆಂಬನ್ನು ಇಟ್ಟಿದ್ದಾರೆ. ಅದರಿಂದ ಕಾಲು ತೊಳೆದು ನಮ್ಮ ಬಣ್ಣದ ಜಗಂಗೆ ಬನ್ನಿ ಎಂದು ಅರ್ಥವಿದೆ.

ಬಿಡದಿ ಮನೆಯಲ್ಲಿರುವವರಿಗೆ ರಾತ್ರಿ ಊಟದ ವ್ಯವಸ್ಥೆ ಇರುತ್ತದೆ. ಈ ಊಟಕ್ಕೆ 'ಮಣೆಊಟ' ಎಂದು ಕರೆಯುತ್ತಾರೆ. ಅಂದು ಅವರಿಗೆ ಅನ್ನ, ಕರಿಗಡುಬು, ಸಾರು, ಬದನೆಕಾಯಿ ಪಲ್ಯ ಊಟಕ್ಕೆ ನೀಡುತ್ತಾರೆ.

ಎಣ್ಣೆ ಬೀರುವುದು:–

ಚಪ್ಪರ ದಿನ ರಾತ್ರಿ 'ಓಲಗ ಸಮೇತ ಐದುಗಿತ್ತಿಯರು, ಮತ್ತು ಆಪ್ತ ಬಂಧುಗಳು ಊರಿನ ದೇವಸ್ಥಾನಗಳ ಕಡೆ ಮೆರವಣಿಗೆ ಹೊರಡುತ್ತಾರೆ. ಐದುಗಿತ್ತಿಯರು ಎಣ್ಣೆಯನ್ನು, ಮಣ್ಣಿನ ಹಣತೆ ಮತ್ತು ಹತ್ತಿಯಿಂದ ತಯಾರಿಸಿದ ಬತ್ತಿಗಳನ್ನು ಹಿಡಿದು ಊರಿನ ಎಲ್ಲಾ ದೇವಸ್ಥಾನಗಳಿಗೆ ಮಣ್ಣಿನ ಹಣತೆಗೆ ಎಣ್ಣೆ ಹಾಕಿ ದೀಪ ಹಚ್ಚಿ ಬರುತ್ತಾರೆ. ಬರುವಾಗ ಊರಿನ ಪ್ರತಿ ಮನೆಗೂ ದೇವರ ದೀಪವನ್ನು ಕೊಟ್ಟು, ಅವರ ಹಣತೆಗೆ ಎಣ್ಣೆಯನ್ನು ಹಾಕಿ, 'ಮದುವೆಗೆ ಬನ್ನಿ' ಎಂದು ಕರೆಯುತ್ತಾರೆ. ಇದಕ್ಕೆ 'ಎಣ್ಣೆ ಬೀರುವ ಶಾಸ್ತ್ರ' ಎಂದು ಕರೆಯುತ್ತಾರೆ. ಇಲ್ಲಿಯು ಹಾಡು ಹೇಳುತ್ತಾರೆ.

> '' ನಿಂಬೀ ಹಣ್ಣಾದೋ ಅಂಬಾರ ಕೆಂಪಾದೋ
> ಯಿನ್ನೇ ಮೂರಾಯ್ತು, ಬೆಳಗಾದೋ ನೀವಕೊಟ್ಟ
> ಸಂಪೂಗಿ ಬನಕೇ ಬೆಸಲಾದೋ''

ರಾತ್ರಿಯಾಗುತ್ತಿದೆ, ಆಕಾಶ ಕೆಂಪಾಗಿದೆ ಎಂಬ ವರ್ಣನೆ ಇಲ್ಲಿದೆ. ಮುಂದಿನ ಹಾಡಿನಲ್ಲಿ ಅವಸರದಲ್ಲಿ ಯಾರಿಗೆ ಕಾಗದ ಕಳಿಸಲಿ ಎಂಬ ಆತಂಕವೂ ಇದೆ.

> '' ಹೊತ್ತರ ಮುಂಜೆದಿಂ ಕಾಲು ಮೋರೆಯು ತೊಳದೇ
> ತಾಯಿ ಸಿರಿಪದಕೆ ಶರಣಂದೇ 'ಎನಂದನೇ
> ಎಲ್ಲಿಂಗೋಲೇ ಬರೀಯಲಿ''

ನಾಳೆಯ ಮದುವೆ ಬನ್ನಿ ಎನ್ನುವ ಭಾವವನ್ನು ಹೊತ್ತ ಹಾಡು ಈ ಕೆಳಗಿನಂತಿದೆ.

'' ಹರಿಯ ಮಾಲಕ್ಷ್ಮಿ ಹರನ ಪಾರ್ವತಿ
ಗಿಳಿಯು ಮಂಗಳಕೆ ಸರಗೆಯ್ಯ ಮದಿಮನ್ನೆ
ಸಿರಿವನ ಬಾಗಲ್ಲಿ ಬೆಳಗಾದೆಯಾ''


ಹೀಗೆ ಪ್ರತಿ ಮನೆಯ ಬಾಗಿಲಲ್ಲೂ ಹಾಡುವವರು ಹಾಡುತ್ತಾರೆ. ಐದುಗಿತ್ತಿಯರು ಎಣ್ಣೆಯನ್ನು ಎರೆದು ಮದುವೆಗೆ ಕರೆಯುತ್ತಾರೆ. ಇಲ್ಲಿಗೆ ಮದುವೆಯ ಕರೆ ಮುಗಿಯುತ್ತದೆ. ಎಲ್ಲರೂ ಮೆರವಣಿಗೆಯಲ್ಲಿ ಮನೆಗೆ ಬರುತ್ತಾರೆ.

ಕೋರಾಟ:—

ಅಪ್ತರು, ಬಂಧುಗಳು ಪ್ರೀತಿಯಿಂದ ಮದುಮಗ — ಳನ್ನು ಊಟೋಪಚಾರದಿಂದ ಸತ್ಕರಿಸುವುದು. ಇದು ಮದುವೆ ನಿಶ್ಚಿತವಾದ ದಿನದಿಂದ ಚಪ್ಪರದ ದಿನದ ವರೆಗೆ ನಡೆಯುತ್ತದೆ. ಆ ದಿನಗಳಲ್ಲಿ ಅವರಿಗೆ ಮಾಂಸದ ಊಟ ಹಾಕುತ್ತಾರೆ. ಒಳ್ಳೆಯ ಗೌರವದಿಂದ ನಡೆದು ಕೊಳ್ಳುತ್ತಾರೆ. ನಿಶ್ಚಯದಿಂದಲೇ ಆ ವ್ಯಕ್ತಿ 'ಸಾಮಾನ್ಯ' ನಿಂದ 'ಅ — ಸಾಮಾನ್ಯ' ವ್ಯಕ್ತಿಯಾಗಿರುತ್ತಾನೆ. ಈ ಕಾರಣದಿಂದ ಗೌರವ ಕೊಡುತ್ತಾರೆ. ಮದುವೆ ವ್ಯಕ್ತಿಗೆ ಗೌರವವನ್ನು ತಂದು ಕೊಡುತ್ತದೆ. ಮತ್ತು ಅಂತವನ ಬದುಕು ಸಾರ್ಥಕವಾಗುತ್ತದೆ ಎನ್ನುವುದು ಬಲವಾದ ಕಾರಣವಾಗಿದೆ. ಮದುಮಗ — ಳ ನಿಗೆ ಊಟವಾದ ನಂತರ ಅವರನ್ನು ಜೋಪಾನವಾಗಿ ಅಂದೆ ಅವರ ಮನೆಗೆ ತಲುಪಿಸುತ್ತಾರೆ. ಈ ದಿನಗಳಲ್ಲಿ ಮದುವೆಯಾಗುವವನಿಗೆ ವಿಶೇಷ ರಾಜಮರ್ಯಾದೆ ಲಭಿಸುತ್ತದೆ.

ಹಸೆಕಟ್ಟೆ:—

ಮನೆಯ ನಡುಮನೆಯಲ್ಲಿ ಎರಡು ಚಿತ್ರಗಳನ್ನು ಬರೆಯಲಾಗುತ್ತದೆ. ಇದನ್ನು ಊರಿನ ಗಂಡಸರು ಯಾರಾದರೂ ಬರೆಯುತ್ತಾರೆ. ಮೊದಲು ಮದುಮಗ ಆ ಚಿತ್ರವನ್ನು ಗೆರೆ ಎಳೆಯುವುದರಿಂದ ಅರಂಭವಾಗುತ್ತದೆ. ನಂತರ ಪೂರ್ಣ ಚಿತ್ರವನ್ನು ಬರೆಯುವವನು ಬರೆದು ಮುಗಿಸುತ್ತಾನೆ. ಈ ಎರಡು ಚಿತ್ರಗಳು ಗಂಡು — ಹೆಣ್ಣು



ಮದಲಿಂಗ (ಗಂಡಿಗೆ)



ಮದಲಗಿತ್ತಿ (ಹೆಣ್ಣಿಗೆ)

ಸ್ಥಳದ ಬೇರ್ಪಡಿಸುವಿಕೆ— ಹಸೆಕಟ್ಟೆ

ಚಿತ್ರ: DSN



[illegible]



ಚಿತ್ರ : DSN

[illegible]

[illegible]

ಗಳನ್ನು ಪ್ರತೀಕಿಸುವ ಚಿತ್ರಗಳಾಗಿರುತ್ತವೆ. ಗಂಡಿನ ಕಡೆಯ ಚಿತ್ರಗಳಲ್ಲಿ ಸೂರ್ಯ, ಶಿವಲಿಂಗ, ಬಸವ, ಬಾಸಿಂಗ, ನಕ್ಷತ್ರಗಳನ್ನು ಕಾಣಬಹುದು. ಹೆಣ್ಣಿನ ಕಡೆಯ ಚಿತ್ರದಲ್ಲಿ ನೀರನ್ನು ಹೊತ್ತ ಮಹಿಳೆಯರು, ಚಂದ್ರ, ಪಕ್ಷಿಗಳನ್ನು ಕಾಣಬಹುದಾಗಿದೆ. ಇಲ್ಲೂ ಕೆಲವು ಹಾಡುಗಳನ್ನು ಹೇಳುತ್ತಾರೆ.

'' ಹದಲ ಹೇಳುವೆ ಹೊಳೆಯಲ್ಲ ಕೆರೆಯಲ್ಲ
ಅಪ್ಪಯ್ಯ ಕಟ್ಟಿಸಿದ ಅರಮನೆ ಮಾಳಗಿಯೊಳಗೆ
ಬಲಗಾಲ ಮುಂದಿಕ್ಕಿ ಬರಬೇಕು''

ಮೇಲಿನ ಸಾಲುಗಳಲ್ಲಿ, ಮನೆಯನ್ನು ಯಾರು ಕಟ್ಟಿಸಿದರು ಎನ್ನುವುದನ್ನು ವಿವರಿಸಿದರೆ, ಈ ಕೆಳಗಿನ ಹಾಡಿನಲ್ಲಿ ಮದುಮಗನ ಅಂದದ ಬಗೆಗೆ ಹೇಳುತ್ತಾರೆ.

'' ದೊಡ್ಡ ಗೋಡೆಯ ಮನೆ ದೊಡ್ಡ ದೀಪಂನಿಟ್ಟು
ದೊಡ್ಡತ್ತೀ ನೋಡೇ ಅಳಿಯನ ಮುಖಾನ
ದೊಡ್ಡರಾಜನಿಗಿಂತ ಚಲುವನೆ''

ಇಲ್ಲಿಗೆ ಮದುವೆಯ ಮೊದಲದಿನದ ಶಾಸ್ತ್ರ ಇತ್ಯಾದಿಗಳೆಲ್ಲ ಮುಗಿಯುತ್ತವೆ. ಮರುದಿನ ಧಾರೆಗಿಂತ ಮೊದಲ ಕೆಲವು ಶಾಸ್ತ್ರಗಳು ನಡೆಯುತ್ತವೆ.

4.3 ಮದುವೆಯ ದಿನ:-

ಮದುವೆಯ ಅನೇಕ ಶಾಸ್ತ್ರಗಳು ಧಾರೆಯ ದಿನವೇ ನಡೆಯುವುದರಿಂದಾಗಿ, ಜನಪದರು ಅಂದಿನ ದಿನವನ್ನೇ ಮದುವೆಯ ದಿನವೆನ್ನುತ್ತಾರೆ. ಅಂದು ಹೆಚ್ಚಿನ ಕಾರ್ಯಕ್ರಮಗಳೆಲ್ಲಾ ಗಂಡಿನ ಮನೆಯಲ್ಲಿ ನಡೆಯುವುದರಿಂದ, ಮದುವೆಯ ತಯಾರಿಯ ಭರ ಭರಾಟೆ ಹೆಣ್ಣಿನ ಮನೆಗಿಂತ ಗಂಡಿನ ಮನೆಯಲ್ಲಿ ಹೆಚ್ಚಿಗೆ. ಆ ದಿನ ಮುಂಜಾನೆಯಿಂದಲೇ ಊರಿನ ಜನರೆಲ್ಲ, ಮದುವೆಯ ಕಾರ್ಯಗಳಲ್ಲಿ ನೆರವು ನೀಡಲು ಸೇರಿರುತ್ತಾರೆ. ಹಾಡು ಗಾರ್ತಿಯರ ಹಾಡಿನ ಮಧುರ ರಾಗಾಲಾಪ ಮುಂಜಾನೆಯಿಂದಲೇ ಕೇಳಿ ಬರುತ್ತದೆ. ಮದುವೆಗೆ ಬೇಕಾದ ಹೂ, ತೆಂಗಿನ ಕಾಯಿ, ವೀಳ್ಯದೆಲೆ, ಅಡಿಕೆ, ಬಾಳೆಯೆಲೆಯೆಲ್ಲಾ ಅಲ್ಲಲ್ಲಿ ತುಂಬಿಕೊಂಡಿರುತ್ತವೆ. ಅರಶಿನೆಣ್ಣೆ ಸಿದ್ಧತೆ ಒಂದು ಬದಿಯಲ್ಲಿ ನಡೆಯುತ್ತದೆ. ಚಪ್ಪರ ಸಿಂಗರಿಸುವುದು, ಆಸನಾದಿಗಳ ಸಿದ್ಧತೆ ಮಾಡುವುದು, ಅಡಿಗೆ ಸಿದ್ಧಗೊಳಿಸುವುದು, ಸಾರಣೆ ಕಾರಣೆಗಳ ಕೆಲಸ ಮುಂತಾದವುಗಳು ಭರದಿಂದ ನಡೆಯುತ್ತಿರುತ್ತವೆ. ನಸುಕಿ ನಲ್ಲಿಯೇ ಕುಂಬಾರ, ಕುಂಭಗಳನ್ನು ತರುತ್ತಾನೆ. ಬಾಸಿಂಗದವನು, ಬಾಸಿಂಗ ತಂದಿರು ತ್ತಾನೆ. ಚಮ್ಮಾರ, ಚಪ್ಪಲಿ ತಂದಿರುತ್ತಾನೆ. ಇವುಗಳನ್ನೆಲ್ಲಾ ಶಾಸ್ತ್ರದಂತೆ ತೆಗೆದು ಕೊಳ್ಳುತ್ತಾರೆ. ಈ ಎಲ್ಲಾ ಕಾರ್ಯದಲ್ಲಿ ಅಯ್ಯರು ಮುತ್ತೈದೆಯರು ಕೆಲಸ ನಿರ್ವಹಿಸುತ್ತಾರೆ. ಇವರು ನಡೆಸುವ ಶಾಸ್ತ್ರಕಾರ್ಯಗಳನ್ನು ಕ್ರಮವಾಗಿ ಮುಂದೆ ವಿವರಿಸಲಾಗಿದೆ.

ಐರಣಿ ಶಾಸ್ತ್ರ:-

ಕುಂಬಾರನಿಂದ ಹೊಸ ಮಡಕೆಗಳನ್ನು ಕೊಂಡುಕೊಳ್ಳುವಿಕೆ; ಮೊದಲೆ ತೀರ್ಮಾನಿಸಿದಂತೆ ಕುಂಬಾರ ಆ ಊರಿನ ದೇವರ ಗುಡಿ ಹತ್ತಿರ ತನ್ನ ಮಡಕೆಗಳ ಜೊತೆ ಕಾದಿರುತ್ತಿದ್ದ. ಊರಿನ ಹಿರಿಯರು, ಬಂಧು ಗಳು, ಮುತ್ತೈದೆಯರು 'ಒಲಗದವ ರೊಡನೆ ಅಲ್ಲಿಗೆ ಹೋಗಿ ಅವನು ಇರಿಸಿದ್ದ ಮಡಕೆಗಳನ್ನು ಪೂಜಿಸಿ ನಂತರ ಅವನಿಗೆ ಕೊಡ ಬೇಕಾದುದನ್ನು ಶಾಸ್ತ್ರದಂತೆ ಕೊಟ್ಟು ಮಡಕೆಗಳನ್ನು ತರುತ್ತಿದ್ದರು. ಹೀಗೆಯೆ ಚಮ್ಮಾರನಿಂದ ಹೊಸ ಚಪ್ಪಲಿಯನ್ನು, ಬಾಸಿಂಗದವನಿಂದ ಬಾಸಿಂಗವನ್ನು ತೆಗೆದು ಕೊಳ್ಳುತ್ತಾರೆ. ಈ ಕಾರ್ಯದಲ್ಲಿ ಐದು ಜನ ಸಲಾವಳಿ ಬಂದ ಮುತ್ತೈದೆಯರು ಇರುತ್ತಾರೆ. ಇವರೇ ಇಲ್ಲಿ ಮುಖ್ಯರಾಗಿರುತ್ತಾರೆ. ಈ ಸಂದರ್ಭದಲ್ಲಿ ಈ ಹಾಡನ್ನು ಹೇಳುತ್ತಾರೆ.

'' ಮಗಳು ಮದುವೆಗೆ ನೆರ್ದಾಳೆಂದೇಳಿ
ಮಾದಿದೋರ್ಗೆ ಈಳ್ಯಾ ಕೊಡುವಾನೋ
ಮಾದಿದೋರ್ಗೆ ಈಳ್ಯಾ 'ಎನಂದಿ ಕೊಡುವಾನೋ
ನೀಬಿಲ್ಲ ಮದ್ವಿ ಚನ್ನಿಲ್ಲಾ''

(ನೋಡಿ ಅನುಭಂದ—ಈಳ್ಯಾ)

ಮೇಲಿನ ಹಾಡಿನಲ್ಲಿ ಹೆಣ್ಣಿಗೆ ಸಂಬಂಧಿಸಿದ ವಿವರಗಳಿದ್ದರೆ ಕೆಳಗಿನ ಹಾಡಿನಲ್ಲಿ ಗಂಡಿಗೆ ಸಂಬಂಧಿಸಿದ ವಿವರಗಳಿರುತ್ತವೆ.

'' ಮಗ ಮದುವೆಗೆ ಬಂದಾನೆಂದೇಳಿ
ಕುಂಬಾರ್ಗೆ ಈಳ್ಯಾ ಕೊಡುವನೆ
ಕುಂಬಾರ್ಗೆ ಈಳ್ಯಾ 'ಎನಂದಿ ಕೊಡುವನೇ
ನೀ ಬಂದೂರ್ತಲ್ ಮದ್ವಿ ಚಂದಿಲ್ಲಾ''

(ನೋಡಿ ಅನುಬಂಧ)

ಈ ಹಾಡಿನಲ್ಲಿ ಕುಂಬಾರ, ಬಾಸಿಂಗದವನು ಇತ್ಯಾದಿಯವರ ಅಗತ್ಯ ಮತ್ತು ಅವರಿಲ್ಲದೆ ಮದುವೆ ಆಗುವುದಿಲ್ಲ ಅನ್ನುವ ಸೂಚನೆಯೂ ಅಡಗಿದೆ.

ಗಂಗೆಪೂಜೆ:—

ಅಂದು ಮುಂಜಾನೆ ಅಯ್ವರು ಐದುಗಿತ್ತಿಯರು ಕುಂಬಾರನಿಂದ ಮಡಕೆಗಳನ್ನು ತೆಗೆದುಕೊಂಡು ಬಾವಿಗೆ ಬರುತ್ತಾರೆ. ಇವರೊಂದಿಗೆ 'ಒಲಗದವರು, 'ಒಲಗ ನುಡಿಸುತ್ತಿರುತ್ತಾರೆ. ಮೆರವಣಿಗೆಯಲ್ಲಿ ಊರಿನವರು ಬಂಧುಗಳು, ಹೆಂಗಸರು, ಮಕ್ಕಳು ಇರುತ್ತಾರೆ. ಮೊದಲು ಬಾವಿಗೆ ಹಣ್ಣು, ಹೂ, ಗಂಧ, ಚಂಧನಗಳಿಂದ ಪೂಜಿಸುತ್ತಾರೆ. ಒಂದು ಬಾಳೆಯ ಎಲೆಯ ಮೇಲೆ ಬಾಳೆ ಹಣ್ಣು ಇಟ್ಟು, ಆ ಐದು ಜನ ಮಹಿಳೆಯರು ಕೈಯಲ್ಲಿ ಹಿಡಿದು ಎಲೆಯನ್ನು ಬಾವಿಗೆ ಹಾಕುತ್ತಾರೆ. ಕುಂಬಾರನಿಂದ ಪಡೆದ ಐದು ಕೊಡಗಳಿಗೆ ಪೂಜೆ ಸಲ್ಲಿಸಿ, ಅವುಗಳಿಗೆ ನೀರನ್ನು ತುಂಬಿಸುತ್ತಾರೆ. ನಂತರ ತುಂಬಿದ ಮಡಕೆಗಳನ್ನು ತಲೆ ಮೇಲೆ ಹೊತ್ತು ಮೆರವಣಿಗೆಯಲ್ಲಿ ಮನೆಗೆ ಬರುತ್ತಾರೆ. ಅಂಗಳದಲ್ಲಿ ಆಗಲೆ ಗೊತ್ತು ಮಾಡಿದ ' ಸುರುಗಿ' ಸ್ಥಳದಲ್ಲಿ ಇಳಿಸುತ್ತಾರೆ. ಇಲ್ಲೂ ಹಾಡುಗಾರ್ತಿಯರು ಹಾಡುತ್ತಾರೆ.


'' ಹಳ್ಳದ ತಡಿಯಲಿ ಹುಟ್ಟೀ ತಾಂೀ ಸೆಸಿ
ಕಂಡೆ ಬನ್ನಿ ಮೂರಾಯೆಲ್ರೀ ನನಸೇಬನ್ನಿ ಅದಕೊಪ್ಪು
ಸಾರೀನಾಗಲೊಂದ ತೊಡನೇಬನ್ನಿ''

'' ಹಾಂೀ ಸಸಿ ಬಂದೋ ಹೀರಿ ಸತ್ತಿಗಿ ಬಂದೊ
ಅಂಥಾ ಬೋಗದಲೇ ಹರಿ ಬಂದೊ ಹಾಂಸಸಿಂಥಾ
ಬಾವಾದೀರೋಗೇ ಕಡತಂದೇ ಹಾಂಸಸಿಂಥಾ
ಮುತ್ತಿನ ಮುಂಬಪಲೇ ನೆಡವಾರೇ''

'' ಹಕ್ಕೀ ಕೆಟ್ಟದ ನೀರು ಪಕ್ಕೀ ಕಿಟ್ಟದ ನೀರು
ದೇವರ್ಮಣಿಗ್ಗರಿಂಥಾ ಹಣೀನೀರು ಮೊಗತಂದೇ
ತುಂಬರಿಯೋ ಸುರಗಿ ಕಳಸಕೆ''

ಸುರಗಿ ಸುತ್ತುವುದು:—


ಐದುಗಿತ್ತಿಯರು ಗಂಗೆಯನ್ನು ಪೂಜಿಸಿ ಕೊಡಗಳನ್ನು ತುಂಬಿಸಿಕೊಂಡು ಮೆರವಣಿಗೆಯಲ್ಲಿ ಬರುತ್ತಾರೆ. ವಾಲಗದವರು, ಊರಿನ ಪ್ರಮುಖರು, ಗುರುಹಿರಿಯರು ಈ ಮೆರವಣಿಗೆಯಲ್ಲಿ ಭಾಗವಹಿಸಿರುತ್ತಾರೆ. ನೀರು ತುಂಬಿದ ಕೊಡಗಳನ್ನು ಮನೆ ಮುಂದೆ ಆಗಲೇ ನಿರ್ಮಿಸಿದ ಹಂದರದ ಕೆಳಗೆ ಕ್ರಮವಾಗಿ ಇಡುತ್ತಾರೆ. ಅವುಗಳನ್ನು ಒಂದು ವೃತ್ತಾಕಾರದಲ್ಲಿ ಇಟ್ಟು ಆ ಕೊಡಗಳ ಕಂಠಕ್ಕೆ ಅರಸಿನ ಲೇಪಿತ ದಾರವನ್ನು ಐದು ಸುತ್ತು ಸುತ್ತುತ್ತಾರೆ. ವೃತ್ತಾಕಾರವು ದೊಡ್ಡದಾಗಿರುತ್ತದೆ. ಹೀಗೆ ಮಾಡುವುದರ ಮೂಲಕ ಸಾಮಾನ್ಯವಾದ ಸ್ಥಳವನ್ನು ಅ — ಸಾಮಾನ್ಯ ಗೊಳಿಸಲಾಯಿತು. ಅಂದರೆ ಈ ಸ್ಥಳಕ್ಕೆ 'ಪ್ರತ್ಯೇಕ ಅಸ್ತಿತ್ವ' ಪೊಂದು ಸಿದ್ಧವಾಗುತ್ತದೆ. ಸಾಮಾನ್ಯವಾಗಿ ಮದುವೆಯ ದಿನ ನಡೆಯುವ ಎಲ್ಲಾ ಆಚರಣೆಗಳೂ ಇಲ್ಲಿಯೇ ನಡೆಯುತ್ತವೆ. ಅರಸಿನ ತಿಕ್ಕುತ್ತಾರೆ, ಸ್ನಾನ ಮಾಡಿಸುತ್ತಾರೆ, ಅಲಂಕಾರಮಾಡುತ್ತಾರೆ, ಈ ಎಲ್ಲಾ ನಡೆದ ನಂತರ ಅಲ್ಲಿಂದ ಧಾರೆ ಮುಹೂರ್ತ ಬರುವವರೆಗೆ ಮದುಮಗ — ಳು ಅಲ್ಲಿಂದ ಹೊರಗೆ ಹೋಗಬಾರದೆಂದು ನಿಷೇಧವಿದೆ. ಅರಸಿನ ತಿಕ್ಕಿದ ಮೇಲೆ ಅವರು ಹಸಿಮೈಯ ವ್ಯಕ್ತಿಗಳಾಗುತ್ತಾರೆ. ಹೀಗೆಲ್ಲ ಮಾಡುವುದರಿಂದ ಮದುಮಗ — ಳನ್ನು ಸಾಮಾನ್ಯ ಜೀವನ ಕ್ರಮದಿಂದ ಪ್ರತ್ಯೇಕಿಸುತ್ತದೆ. ಮತ್ತು ಹಾಗೆ ಪ್ರತ್ಯೇಕಿಸುವುದರಿಂದಾಗಿ ಮಾತ್ರ ಸಾಮಾನ್ಯ ಜೀವನ ಕ್ರಮದಲ್ಲಿ ಅವರು 'ಅಸಾಮಾನ್ಯ' ರಾಗಿ ಪ್ರತ್ಯೇಕ ಸ್ಥಾನವನ್ನು ಗಳಿಸಿಕೊಳ್ಳುತ್ತಾರೆ. ಇದು ಸ್ಪಷ್ಟ ವಾಗಲು ಅವರಿಗೆ ಸ್ನಾನ ಮಾಡಿಸುತ್ತಾರೆ, ಅಲಂಕಾರ ಮಾಡುತ್ತಾರೆ. ಆಗಾಗ ಹಾಡು



ಮದುಗಿತ್ತಿಯರು ಸುತ್ತಿದ ಸುರಗಿ

ಚಿತ್ರ: DSN





ಪ್ರಚೋದಿತರು ಹೊತ್ತಿದ ಸುರಗಿ ಚಿತ್ರ: DSN

ಗಳನ್ನು ಹಾಡಿ ಅವರನ್ನು ಪುರಾಣಗಳ ಎತ್ತರಕ್ಕೆ ಕರೆದ್ಯೊಯುತ್ತಾರೆ.

'' ಅತ್ತೀಯಾ ಮನೆಗ್ಹೋಗಿ ಹತ್ತೆಂಟು ದಿನವಾದೊ
ಅತ್ತೀ ಮನೆಯಾಕೆ ಬರಲಿಲ್ಲಾ ಬೆಡಗಿನ ಮನೆಯಾ
ಹತ್ತೆಣ್ಣೆ ಕೊಡವಾ ತೆಗತನ್ನಿ ''

(ಅನುಬಂಧ – ನುರಗಿಸ್ನಾನ)

ಮದುಮಕ್ಕಳು ಸ್ನಾನಕ್ಕೆ ಅತ್ತಿಮನೆ ತರಲು ಹೇಳಿದ್ದಾರೆ. ಆದರೆ ಇನ್ನೂ 'ಏಕೆ ಬಂದಿಲ್ಲ? ಅದರೂ ಸ್ನಾನ ಮಾಡಿಸಲೇಬೇಕು. ಆದ್ದರಿಂದ ಮುಂದಿನ ಕ್ರಮಕ್ಕೆ ಸಿದ್ಧತೆ ನಡೆಸುವ ಸೂಚನೆ ಇಲ್ಲಿ ಅಡಗಿರುವುದನ್ನು ಕಾಣಬಹುದಾಗಿದೆ. ಸ್ನಾನಕ್ಕೆ ಸಿದ್ಧತೆ ನಡೆದಿದೆ. ಆಗಲೇ ತೋಡಿಸಿದ ಬಾವಿಯಲ್ಲಿ ನೀರು ಕಣಕ್ಕಾಗಿ ರಭಸದಿಂದ ಹರಿದಿದೆ. ಎನ್ನುವ ಭಾವವನ್ನು ಅಡಗಿಸಿಕೊಂಡ ಈ ಕೆಳಗಿನ ಹಾಡನ್ನು ನೋಡಬಹುದು.

'' ಯಾಗ ತೋಡಿದ ಬಾವಿಯಾಗ ನೀರಿದ್ದಾವೋ
ನೀರಿನಾ ಕಣುಕೇ ಹರಿದಾವೊ ಬಿಕ್ಕಾನೀರು
ಬಿತ್ರೀ ನಿನ್ನಗನಾ ಜಳಕಕ್ಕೆ ''

(ಅನುಬಂಧ – ನುರಗಿಸ್ನಾನ)

ಸ್ನಾನದ ನಂತರ ಮದುಮಗ – ಳನ್ನು ಅಲಂಕಾರಕ್ಕೆ ತೊಡಗುತ್ತಾರೆ. ಇಲ್ಲಿಯೂ ಕೂಡ ಹಾಡನ್ನು ಹೇಳುತ್ತಾರೆ.

'' ಬಾಸಿಂಗದ ಮೇಲೇವೇ ಅರವತ್ತಯ್ಯ ಗಿಳಿಕುಳತೊ
ಚಂದ್ರ ಮಾಣಕದ ರವೆಬಾದೊ ಜೋ
ಚಂದ್ರ ಮಾಣಕದ ರವೆ ಬಂದಾ ಬಾಸಿಂಗದ
ತಂದೇ ಬಣ್ಣಳಕೋ ಮಗನೀಗೆ ಜೋ ''

(ಅನುಬಂಧ – ಸುರಗಿ)

ಹಾಡುಗಾರ್ತಿಯರು ಬಾಸಿಂಗದ ವರ್ಣನೆ ಮಾಡುತ್ತಾ ಮುಂದೆ ಇದನ್ನು ಧರಿಸಿದ ಮದುಮಗ ಮುಖ್ಯವಾಗಿ ಮಾಡಬೇಕಾದ ಕಾರ್ಯದ ಬಗೆಗೆ ಸೂಚನೆ ನೀಡುತ್ತಾರೆ.

ಕಟ್ಟೇದ ಬಾಸಿಂಗ ಉಟ್ಟೇದ ಜೋತರವಸ್ತ್ರ
ಯಾರ್ಯಾರಿಗೆ ಕಯ್ಯಾ ಮುಗದೇನೋ ಬಾಲೆ ಮಗನೆ
ಗಾಳವ್ವಗೆ ಕಯ್ಯ ಮುಗದೆನೋ
ಹುಲಿಗವ್ವಗೆ ಕಯ್ಯ ಮುಗದೆನೋ
ಕುಲದೇವರಿಗೆ ಕಯ್ಯಾ ಮುಗದೆನೋ

(ಅನುಬಂಧ — ಮದುಮಗನ ಅಲಂಕಾರ)

ಇಷ್ಟೆಲ್ಲಾ ಆದನಂತರ ಮದುಮಗಳನ್ನು ಬಿಡದಿ ಮನೆಗೆ ಕರೆದೊಯ್ಯುತ್ತಾರೆ. ಇಲ್ಲಿ ಮದುಮಗಳ ಅಲಂಕಾರ ಮಾಡುತ್ತಾ ಇಲ್ಲಿಯು ಹಾಡನ್ನು ಹಾಡಲಾಗುತ್ತದೆ. ಇಲ್ಲಿ ಹೆಂಗಸರದೆ ಮೇಲುಗೈ. ಇತ್ತ ಅಲಂಕಾರ ಮಾಡಿಕೊಂಡ ಗಂಡನ್ನು ಧಾರೆ ಎತ್ತಿನ ಮೇಲೆ ಏರಿಸಿ ಮೆರವಣಿಗೆ ಹೊರಡುತ್ತಾರೆ ಇದರ ವಿವರವನ್ನು 'ಧಾರೆ ಎತ್ತು' ಎನ್ನುವಲ್ಲಿ ವಿವರಿಸಲಾಗಿದೆ.

ಚಪ್ಪರದ ಕೆಳಗೆ ನಿರ್ಮಿತಗೊಂಡ ಮಂಟಪದಲ್ಲಿ ಪುರೋಹಿತರು(ಅಥವಾ ಬಿನೋರು) ಅಕ್ಕಿಯ ಅಥವಾ ಜೋಳದ ರಾಶಿಯನ್ನು ಚೌಕಾಕಾರದಲ್ಲಿ ಸರಿಪಡಿಸಿ ಆದರ ಮೇಲೆ ಕಂಚಿನ 5 ಸಣ್ಣ ಕಳಸಗಳನ್ನು ಇಟ್ಟು ಅವುಗಳಿಗೆ ನೀರು ತುಂಬಿ ಕಳಸದ ಬಾಯಿಗೆ ವೀಳ್ಯದೆಲೆಯನ್ನು ಸುರುಳಿ ಮಾಡಿ ಇಡುತ್ತಾರೆ. ಕಳಸಗಳ ಕಂಠಕ್ಕೆ ಅರಿಸಿಣ ಲೇಪಿತ ದಾರವನ್ನು ಐದೈದು ಸುತ್ತು ಸುತ್ತುತ್ತಾರೆ. ಇದರ ಪಕ್ಕದಲ್ಲಿ ಧಾರೆ ನಡೆಯುವ ಸ್ಥಳವು ಆಗಿರುತ್ತದೆ. ಪುರೋಹಿತರು ಮಾಡುವ ಈ ಕೆಲಸಕ್ಕೆ ಸುರಗಿ ಸುತ್ತುವಿಕೆ ಎಂದು ಕರೆಯಲಾಗುತ್ತದೆ. ವ್ಯಕ್ತಿಗಳನ್ನು ಪ್ರತ್ಯೇಕಿಸಿದ ಹಾಗೆ ಸಮಯವನ್ನು ಪ್ರತ್ಯೇಕಿಸಿ 'ಮುಹೂರ್ತ' ವನ್ನು ನಿರ್ಧರಿಸುತ್ತಾರೆ. ಸ್ಥಳವನ್ನು ಪ್ರತ್ಯೇಕಿಸಿದ ಧಾರಾಮಂಟಪವೂ, ಪುರೋಹಿತರು ಸುತ್ತಿದ ಸುರುಗಿ ಪವಿತ್ರವೆನಿಸುತ್ತವೆ. 'ವ್ಯಕ್ತಿ' 'ಮುಹೂರ್ತ' ಮತ್ತು 'ಸ್ಥಳ' ಒಂದು ನಿರ್ದಿಷ್ಟ ಉದ್ದೇಶಕ್ಕೆ ಬದ್ಧವಾಗಿಯೇ ಸಮಾನವಾದ ಮಹತ್ವವನ್ನು ಪಡೆದು ಬಿಟ್ಟು ಮದುವೆಯಲ್ಲಿ ಪಾವಿತ್ರವನ್ನು ಪಡೆದಿರುತ್ತವೆ.

ಧಾರೆ ಎತ್ತು:—

ಗಂಡಿಗೆ ಮದುವೆಯ ವಸ್ತ್ರ ಆಭರಣಗಳನ್ನು ತೊಡಿಸಲಾಗುವುದು. ಅಂಗಳದಲ್ಲಿ ಹಾಸಿದ ಚಾಪೆಯ ಮೇಲೆ ನಿಲ್ಲಿಸಿ ಕಚ್ಚೆಪಂಚೆ, ತುಂಬುತೋಳಿನ ಅಂಗಿ, ಅಂಗಿಯ ಮೇಲೆ

ಕೋಟು, ಕೋಟಿನ ಮೇಲೆ ವಸ್ತ್ರ, ತಲೆಗೆ ಜರಿಪೇಟ ಸುತ್ತಿ, ಕೈಗೆ ವೀಳೆಯದ ಪಟ್ಟಿ ಕಟ್ಟಿ, ಬಾಸಿಂಗ ಕಟ್ಟಿ, ಆಮೇಲೆ ಕಾಲಿಗೆ ಕಾಲ್ಕಂಡು, ಕೈಗೆ ಉಂಗುರ, ಕೊರಳಿಗೆ ಚಿನ್ನದ ಸರಗಳನ್ನು ತೊಡಿಸಿ ಹಣೆಗೆ ಕುಂಕುಮದ ಬೊಟ್ಟನ್ನಿಡುತ್ತಾರೆ.

ಹೀಗೆ ಸರ್ವಾಲಂಕೃತನಾದ ಮದುಮಗನನ್ನು ಬಸವಣ್ಣನ(ಎತ್ತಿನ) ಮೇಲೆ ಕೂರಿಸಿ 'ಓಲಗ ಸಮೇತ ಮೆರವಣಿಗೆ ಹೊರಡುತ್ತಾರೆ. ಊರಿನ ದೇವರ ಗುಡಿಯನ್ನು ತಲುಪಿ ದೇವರ ಮೂರ್ತಿಗೆ ಅರಿಸಿಣ, ಕುಂಕುಮ, ಗಂಧ, ಚಂದನಗಳಿಂದ ಸಿಂಗರಿಸಿ ಹೂವು ಹಣ್ಣು ಕಾಯಿಗಳಿಂದ ಪೂಜಿಸಿ ದೇವರಿಂದ ಆಶೀರ್ವಾದ ಪಡೆದು ಮೊದಲಿನಂತೆಯೇ ಎತ್ತಿನ ಮೇಲೆ ಮೆರಣಿಗೆ ಬರುತ್ತಾರೆ.

ಧಾರೆ:—

ಚಪ್ಪರದಲ್ಲಿ ಧಾರೆ ಮಾಡಿಕೊಡುವುದು ಗಂಡಿನ ಮನೆಯಲ್ಲಿಯೆ ಹೆಚ್ಚು. ಹೆಣ್ಣಿನವರಿಗಾಗಿ ಗಂಡಿನಮನೆಯಲ್ಲಿ ಬಿಟ್ಟುಕೊಡಲಾದ ' ಬಿಡದಿ' ಮನೆಯಲ್ಲಿ ಹೆಣ್ಣಿನ ಅಲಂಕಾರ ನಡೆಯುತ್ತದೆ. ಧಾರೆಗೆಂದೇ ತಂದ ಸೀರೆಯನ್ನು ತೊಡಿಸುತ್ತಾರೆ. ಗುರು ಹಿರಿಯರ ಅನುಮತಿ ಪಡೆದು ವಿವಿಧ ಒಡವೆಗಳಿಂದ ಅವಳನ್ನು ಶೃಂಗರಿಸುತ್ತಾರೆ. (ಕಾಲಿನ ಚೈನು, ಗೆಜ್ಜೆ ಕಾಲುಂಗರ, ಕೊರಳ ಹಾರಗಳು, ಜಡೆಗೆ ಬಂಗಾರ ನಾನಾತರಹದ 'ಓಲೆಗಳು) ವಸ್ತ್ರವನ್ನು ಅವಳ ಒಡಲಿಗೆ ಕಟ್ಟಿ ವೀಳೆಯದೆಲೆ, ಅಡಕೆ, ಅಕ್ಕಿ, ಜೋಳ, ಫಲಪುಷ್ಪ ಉತ್ತುತ್ತಿ, ದ್ರಾಕ್ಷಿ ಇವುಗಳನೆಲ್ಲ ಹಾಕಿ ಮಡಿಲು ತುಂಬುತ್ತಾರೆ. ಇಲ್ಲೂ ಹಾಡನ್ನು ಹಾಡುತ್ತಾರೆ.

" ಮೂಳೂಗಿ ಬಳಗೆ ಹೋಗಿ ನೋಡುವ ಬನ್ನಿ
ಈಗಿನರು ಬರೆದ ಹಸಗಾರ ಬುಡದಲ್ಲಿ
ಸಿಸುವಾ ಸಿಂಗರಿಸಿದಾ ಹದಲವ"

(ಅನುಬಾಧ — ಮಡಿಲು ತುಂಬುವಾಗ)

ಮೇಲಿನ ಹಾಡಿನಲ್ಲಿ ಮನೆಯ ಒಳಗೆ ಬರೆದ ಹಸೆ ಗೋಡೆಯ ಹತ್ತಿರದಲ್ಲಿ ಇದ್ದ ಮದುಮಗಳ ಚಿತ್ರಣವನ್ನು ಚಿತ್ರಿಸಿದರೆ, ಕೆಳಗಿನ ಸಾಲುಗಳು ಅವಳ ಮಡಿಲಲ್ಲಿ ತುಂಬಿದ ವಸ್ತುಗಳ ವಿವರವನ್ನು ಕೊಡುತ್ತವೆ.

''ಅಚ್ಚಕ್ಕೆ ಮುಚ್ಚಕೆ ಮುಚ್ಚು ತೆಂಗಿನಕಾಯಿ
ಪಕ್ಕನ ಅಕ್ಕಿ ಮಲಗಾಯಿ ನಾವೆ ತಂದೆವ್ರು
ಮೂರಾಯ್ರು ಮಗಳ ಮಡುಲೀಗೆ''

(ಅನುಬಂಧ – ಮಡಿಲು ತುಂಬುವಾಗ)

ಹೀಗೆ ಶೃಂಗರಿಸಿದ ಹೆಣ್ಣನ್ನು ಮನೆಯ ಒಳಗಿನಿಂದ ಧಾರಾಮಂಟಪಕ್ಕೆ ಕರೆತರುತ್ತಾರೆ. ಗಂಡು ಆಗಲೇ ಮೆರವಣಿಗೆಯಿಂದ ಮರಳಿರುತ್ತಾನೆ. ಗಂಡು ಚಪ್ಪರದ ಹೊರಗಿನಿಂದ ಒಳಗೆ ಬಂದು ಮಂಟಪದಲ್ಲಿ ಅಕ್ಕಿಯ ಮೇಲೆ ನಿಂತಿರುತ್ತಾನೆ. ಪುರೋಹಿತರು ಮಂತ್ರ ಜಪಿಸುತ್ತಿರುತ್ತಾರೆ. ಹೆಣ್ಣಿನ ತಂದೆ ತಾಯಿ ಧಾರೆ ಎರೆದು ಕೊಡಲು ಸಿದ್ಧರಾಗಿರುತ್ತಾರೆ. ಗಂಡಿನ ಎರಡು ಹಸ್ತಗಳ ಮೇಲೆ ಹೆಣ್ಣಿನ ಹಸ್ತವನ್ನು ಇರಿಸಿ ಅದರ ಮೇಲೆ ವೀಳೆದೆಲೆ, ತೆಂಗಿನಕಾಯಿ ಇಡುತ್ತಾರೆ. ಪುರೋಹಿತರು ಹೆಣ್ಣಿನ ತಂದೆ – ತಾಯಿಗೆ ಹಾಲು – ನೀರು, ಬಿಡುವಂತೆ ಸೂಚಿಸುತ್ತಾರೆ. ನಿಗದಿತ ವೇಳೆ ಬಂದಾಗ ಗಂಡಿನಿಂದ ಹೆಣ್ಣಿನ ಕೊರಳಿಗೆ ಮಾಂಗಲ್ಯವನ್ನು ಕಟ್ಟಿಸಿ ವಧೂವರರು ತೊಟ್ಟ ಉಡುಗೆಗೆ ಗಂಟು ಹಾಕಿ ಅವರನ್ನು ಒಂದು ಮಾಡುತ್ತಾರೆ. ಇಲ್ಲಿ ಎಲ್ಲರೂ ಗಂಡು ಹೆಣ್ಣಿನ ಮೇಲೆ ಅಕ್ಕಿಯನ್ನು ಬೀರುತ್ತಾರೆ. ಅನಂತರ ವಧೂವರರಿಗೆ ಸೂರ್ಯ ನಮಸ್ಕಾರ ಮಾಡಿಸಿ, ಮತ್ತೆ ಮಂಟಪದ ಒಳಗೆ ಕರೆತಂದು ಕುರ್ಚಿಯ ಮೇಲೆ ಕೂರಿಸಿರುತ್ತಾರೆ. ಈ ಸಮಯದಲ್ಲಿ ಮದುವೆಗೆ ಬಂದ ಎಲ್ಲರು ಅಕ್ಕಿಯನ್ನು ಅವರ ಮೇಲೆ ಚಲ್ಲಿ, ತಮ್ಮ ಕೈಯಿಂದ ಹಣವನ್ನು ಕೊಟ್ಟು ಅದಕ್ಕೆಂದೆ ಕುಳಿತ ಒಬ್ಬನಲ್ಲಿ ತಮ್ಮ ಹೆಸರು ಮತ್ತು ಹಣವನ್ನು ಬರೆಸುತ್ತಾರೆ. ಇದಕ್ಕೆ ಮುಯ್ಯಿ ಎಂದು ಕರೆಯಲಾಗುತ್ತದೆ.

ಮುಯ್ಯಿ ಮುಗಿದ ನಂತರ ಮದುಮಕ್ಕಳು ಧಾರೆ ಮಂಟಪದಿಂದ ಹೊರಗೆ ಬರುತ್ತಾರೆ. ಈ ಪ್ರತ್ಯೇಕಿಸಲಾದ ಸ್ಥಳ, ಕಾಲ, ಮತ್ತು ಗಂಡು – ಹೆಣ್ಣುಗಳು ಒಂದು ಹಂತದಲ್ಲಿ ಐಕ್ಯರಾಗುವುದಕ್ಕೆ ಮುಖ್ಯವಾದ ಎರಡು ಉದ್ದೇಶಗಳಿರಬಹುದು.

1) ದಂಪತಿಗಳ ಭವಿಷ್ಯದಲ್ಲಿ ಒಳಿತಾಗಲಿ ಎಂಬ 'ಮಂಗಳದ ಕಲ್ಪನೆ' ಇದು ಅಲೌಕಿಕ ಸ್ವರೂಪದಲ್ಲಿ. ಮುಂದಿನ ದಾಂಪತ್ಯದಲ್ಲಿ ಕೆಡಕಾಗದೆ ಇರಲಿ ಎಂಬ ಸದಾಶಯವು ಹೊಸ ತಲೆಮಾರಿನ ಜೀವನ ಕ್ರಮಕ್ಕೆ ಸಂಬಂಧಿಸಿದೆ.

2) ತಾಳಿ ಕಟ್ಟಿದ ನಂತರ ವಧೂವರರು ಹೆಂಡತಿ ಮತ್ತು ಗಂಡರಾಗಿ ಮಾರ್ಪಡುವುದರಿಂದ ವಂಶಾಭಿವೃದ್ಧಿಗೆ ಅನುಮತಿ ದೊರೆಯುತ್ತದೆ. ಪರೋಕ್ಷವಾಗಿ ಆಸ್ತಿಗೆ ಉತ್ತರಾಧಿಕಾರಿಯ ನೇಮಕಾತಿ ನಡೆಯುತ್ತದೆ. ಅಂದು ಅಲ್ಲಿ ನೆರೆದವರೆಲ್ಲಾ ಇದಕ್ಕೆ ಸಾಕ್ಷಿಗಳಾಗುತ್ತಾರೆ. ಇದು ಮುಹೂರ್ತಕ್ಕೆ ಇರುವ ಆರ್ಥಿಕ ಮತ್ತು ಸಾಮಾಜಿಕ ಆಯಾಮವಾಗಿದೆ.

ಅಂದು ಮದುವೆಗೆ ಬಂದವರಿಗೆ ಸಿಹಿ ಊಟವಿರುತ್ತದೆ. ಇದಾದ ನಂತರ ಮದುಮಗ ಮತ್ತು ಮದುಮಗಳನ್ನು ಊರಿನ ಬೀದಿಗಳಲ್ಲಿ ಮೆರವಣಿಗೆ ಮಾಡುತ್ತಾರೆ. ಈ ಮೆರವಣಿಗೆಯಲ್ಲಿ ಮದುವೆಗೆ ಬಂದ ಅಥಿತಿಗಳು ಹಿರಿಯರು ಮತ್ತು ಊರಿನವರು ಇರುತ್ತಾರೆ. ಇಲ್ಲಿಗೆ ಆ ದಿನದ ಕಾರ್ಯಕ್ರಮ ಮುಗಿದಂತೆ. ಬೇರೆ ಬೇರೆ ಊರಿನಿಂದ ಬಂದ ಅಥಿತಿಗಳೆಲ್ಲಾ ಅವರವರ ಊರಿಗೆ ಹಿಂತಿರುಗುತ್ತಾರೆ. ವಧೂವರರು ತೊಟ್ಟ ಉಡುಗೆಯನ್ನು ನಾಗೋಲಿ ಶಾಸ್ತ್ರದ ದಿನದ ವರೆಗೆ ಬಿಚ್ಚುವ ಹಾದೆ ಇಲ್ಲ. ಈ ಶಾಸ್ತ್ರ ಮದುವೆಯಾದ ಐದು ದಿನದ ನಂತರ ನಡೆಯುತ್ತದೆ.

ಪಾದಪೂಜೆ:-

ತಾಳಿ ಆದ ನಂತರ ವಧೂವರರ ಕೈ ಹಿಡಿಸಿ, ಹುಡುಗನ ಶ್ಯಾಲ್ಯಕ್ಕೂ ಹುಡುಗಿಯ ಸೆರಗಿಗೂ ಗಂಟು ಹಾಕುತ್ತಾರೆ. ಅನಂತರ ಮನೆಯ ಹೊಸಿಲು ಧಾಟಬೇಕಾದರೆ ಮೊದಲು ವಧೂವರರ ಪಾದ ತೊಳೆದು ಪೂಜೆ ಮಾಡುವ ಶಾಸ್ತ್ರ ನಡೆಯುತ್ತದೆ. ಇದನ್ನು ವರನ ತಂಗಿ ಅಥವ ಅಕ್ಕ ಮಾಡುತ್ತಾಳೆ. ವಧೂವರರ ಪಾದಗಳನ್ನು ನೀರಿನಿಂದ ತೊಳೆದು, ಕುಂಕುಮ,ಚಂದನ, ಅರಿಸಿಣ, ಹೂವುಗಳಿಂದ ಸಿಂಗರಿಸಿ ಹಣ್ಣು ಕಾಯಿಗಳಿಂದ ಪೂಜಿಸಿ ಕಾಲನ್ನು ಮುಟ್ಟಿ ನಮಸ್ಕರಿಸುತ್ತಾಳೆ. ಹೀಗೆ ಮಾಡುವಾಗ ಅವನ ಪಾದವನ್ನು ಹಿಡಿದು, 'ನಿನ್ನ ಮಗಳನ್ನು ನನ್ನ ಮಗನಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತಾಳೆ' ಇದಕ್ಕೆ ಒಪ್ಪಿಗೆ ಪಡೆದ ಮೇಲೆ ಹಿಡಿದ ಪಾದವನ್ನು ಬಿಡುತ್ತಾಳೆ. ಇಲ್ಲಿ ಹಾಡುಗಾರ್ತಿಯರು ಈ ಕೆಳಗಿನಂತೆ ಹಾಡುತ್ತಾರೆ.

"ದೊಡ್ಡಾಂಲೇ ಅಕ್ಕಗೇ ದೊಡ್ಡ ಕಾಲುಂಗೀಲ
ಶಾಮಂತ್ರಿಗಿ ದಂಡೇ ಕೆಂಯದುಂಬೇ ಮುಡ್ಡೀಕಂಡೇ
ದೊಡ್ಡಕ್ಕ ಬಾಗೀಲ ತಡಿದಾಳೆ"

(ನೋಡಿ ಅನುಬಂಧ —
ಬಾಗಿಲು ತಡೆಯುವುದು)

ಬಾಗೀಲ ತಡಿದ ಅಕ್ಕನ ಅಲಂಕಾರವನ್ನು ಮೇಲಿನ ಹಾಡು ತಿಳಿಸಿದರೆ, ಕೆಳಗಿನ ಹಾಡು, ಅವಳು ಕಾಲನ್ನು ತೊಳೆಯುವ ಉದ್ದೇಶವನ್ನು ಸ್ಪಷ್ಟಪಡಿಸುತ್ತದೆ.

"ಬಾಗೀಲ ತಡದಕ್ಕ ಬಾಗಿ ಬಳ್ಳಿ ಕೊಡುವೆ
ಹಳೆಯೋರುಂಬಳಿ ಬರಕೊಡುವೆ
ಉಂಬಳಿ ಬೂಮಿ ನಿನ ರಂಬೆಗೆ ಉಳಿಯಲೋ
ಹೆಣ್ಣಲೇ ಕೊಡೊ ತಮ್ಮ ಮಗರಾಯಗೆ"

(ನೋಡಿ ಅನುಬಂಧ — ಬಾಗಿಲು
ತಡೆಯುವುದು)

ಗೃಹಪ್ರವೇಶ:—

ಧಾರೆಯ ನಂತರ ವಧುವನ್ನು 'ವರ' ನು ತನ್ನ ಮನೆಗೆ ಕರೆದುಕೊಂಡು ಬರುವ ಪದ್ಧತಿ. ಇದನ್ನು ಕೆಲವರು ಆರನೆಯ ಅಥವಾ ಹತ್ತನೆ ದಿನ ಜರಗಿಸುತ್ತಾರೆ. ಈ ಪದ್ಧತಿ ಹೆಚ್ಚು ಪ್ರಚಲಿತ ವಿರುವುದು ಧಾರೆಯ ನಂತರವೇ. ಮದುಮಗ ದಿಬ್ಬಣ ಸಮೇತ, ಕೈ ಹಿಡಿದ ಮಡದಿಯನ್ನು ಮನೆ ತುಂಬಿಸಿಕೊಳ್ಳಲು ಬರುತ್ತಿರುತ್ತಾನೆ. ಇದನ್ನು ಗಮನಿಸಿದ ಗಂಡಿನ ಮನೆಯವರು ಬಾಗಿಲ ಪಕ್ಕಕ್ಕೆ ದೀಪ ಹಚ್ಚಿಟ್ಟು, ಪ್ರಧಾನ ಬಾಗಿಲ ಮಧ್ಯದಲ್ಲಿ ಒಂದು ಸಿದಂಕ್ಕಿ ತುಂಬಿಟ್ಟು, ಬಾಗಿಲ ಎರಡು ಬದಿಗೆ ಎಲೆ ಅಡಿಕೆ ಇಟ್ಟಿರುತ್ತಾರೆ. ವಧೂವರರು ಬಂದ ಕೂಡಲೇ ಅವರಿಗೆ ದೃಷ್ಟಿ ತೆಗೆದು ಚಲ್ಲುತ್ತಾರೆ. ಹೆಣ್ಣು ಮನೆಯನ್ನು ಪ್ರವೇಶ ಮಾಡುವಾಗ ಬಲಗಾಲ ಮುಂದಿಟ್ಟು ಒಳಗೆ ಪ್ರವೇಶಿಸಬೇಕು ಮತ್ತು ಪ್ರಧಾನ ಬಾಗಿಲಲ್ಲಿ ತುಂಬಿಟ್ಟ ಅಕ್ಕಿಯನ್ನು ಕಾಲಿನಿಂದ ತೂರಿ ಒಳಗೆ ಹೋಗಬೇಕು. ಇದೇ ರೀತಿ ಮೂರು ಸಾರಿ ನಡೆಯುತ್ತದೆ. ಹಸೆ ಚಿತ್ರದ ಹತ್ತಿರದ ವರೆಗೆ ಹೋಗಬೇಕು. ಹೆಣ್ಣು — ಗಂಡನ್ನು ಬೇರೆ ಬೇರೆ ಮಾಡುವ ಸ್ಥಳದಲ್ಲಿ ಅಂದರೆ ಹೆಣ್ಣು ಹೆಣ್ಣಿಗೆಂದೇ ಬರೆದ ಚಿತ್ರದ ಕೆಳಗೆ ಕುಳಿತರೆ ಗಂಡು ಕೂಡ ಅವನಿಗಾಗಿಯೇ ಬರೆದ ಚಿತ್ರದ ಕೆಳಗೆ ಕೂರುತ್ತಾನೆ.

ಆಗ ಗಂಡು ಹೆಣ್ಣಿನ ಸಂಬಂಧಿಕರೆಲ್ಲ ಮುಯ್ಯಿ ಮಾಡುತ್ತಾರೆ. ಹೀಗೆ ಉಡುಗೊರೆಗಳನ್ನು ಕೊಟ್ಟವರ ಹೆಸರುಗಳನ್ನು ಬರೆದು ಕೊಳ್ಳುತ್ತಾರೆ. ಕೆಲವರು ಹಣವನ್ನು ಕೊಟ್ಟರೆ ಇನ್ನು ಕೆಲವರು ಪಾತ್ರೆಗಳನ್ನು, ವಿಗ್ರಹಗಳನ್ನು, ದೇವರ ಚಿತ್ರಗಳನ್ನು ಇತ್ಯಾದಿಗಳನ್ನು ಮುಯ್ಯಿ ಮಾಡುತ್ತಾರೆ.

ಹೆಣ್ಣು ಗೃಹ ಪ್ರವೇಶ ಮಾಡುವಾಗ ಹಾಡು ಗಾರ್ತಿಯರು ಹಾಡನ್ನು ಹೇಳುತ್ತಿರುತ್ತಾರೆ. ಅವರು ಹೇಳುವ ಹಾಡುಗಳಲ್ಲಿ ಬಾಗಿಲಿನ ವರ್ಣನೆ, ಸೊಸೆಯ ಬಗೆಗೆ ವಿವರಗಳು ಇರುತ್ತವೆ.

'' ಹೆಬ್ಬಾಗಿಲಲ್ಲಿ ಹಬ್ಬದವೇ ರತಿಬಳ್ಳಿ
ಗಿಜ್ಜೇಯ ಕಾಲಾ ಸೊಸಬಂದು ಹೊಕ್ಕುವಂಗೆ
ಅಬ್ಬರದಲ್ಲಿ ಕಾಳೀ ನುಡಿದಾವೆ''

'' ಬಾಗಲ ಪೂಜ್ಯನ ಮಾಡೀ ಬಾಲನ ಪಡದೀದೆ
ಬಾಗಗೇ ಒಪ್ಪು ಮಡದೀಯ ತಂದಾನೇ
ಬಂದೀ ನೋಡೆ ನಿನ್ನ ಸೊಸೆ ಮುದ್ದು''
(ಅನುಬಂಧ — ಗೃಹಪ್ರವೇಶ)

ಹೊಸಂಗೆ ಮುಳೆ ಹೊಡೆಯುವುದು:—

ಪಾದಪೂಜೆ ಶಾಸ್ತ್ರ ಮುಗಿದ ನಂತರ ಪ್ರಪ್ರಥಮವಾಗಿ ಮನೆಯನ್ನು ಪ್ರವೇಶ ಮಾಡಬೇಕು. ಆ ವೇಳೆಯಲ್ಲಿ ತನ್ನ ಬಲಗಾಲನ್ನು ಇಟ್ಟು ಮನೆಯನ್ನು ಪ್ರವೇಶ ಮಾಡಬೇಕಾಗುತ್ತದೆ. ಹಾಗೆ ಮಾಡುವಾಗ ಅವಳ ಬಲಭಾಗದ ಪಾದದ ಹೆಬ್ಬೆರಳಿನ ಸಂದಿಯಲ್ಲಿ ಹೊಸಂಗೆ ಮುಳೆಯನ್ನು ತನ್ನ ಗಂಡ ಹೊಡೆಯುತ್ತಾನೆ. ಅಂದಿನಿಂದ ಆ ಹೆಣ್ಣಿಗೆ ಮನೆಯಲ್ಲಿ ಅಧಿಕಾರ ಸಿಕ್ಕಿತು. ಕೆಲವು ಸಂದರ್ಭದಲ್ಲಿ ಅತ್ತೆ, ಸೊಸೆಯಲ್ಲಿ ಜಗಳ ಕಾದರೆ, ಸೊಸೆ ಹೀಗೆ ಹೇಳುತ್ತಾಳೆ. '' ನಾನೇನು ನಿನ್ನ ಮಗನ ಜೊತೆ 'ಓಡಿ ಬಂದಿಲ್ಲ, ಹೊಸಂಗೆ ಮುಳೆ ಬಡಿಸಿ ಕೊಂಡು ಬಂದೀನಿ''

ಜೂಜಾಡುವುದು:-

ಹಾಲು ತುಂಬಿದ ಪಾತ್ರೆಯಲ್ಲಿ ಮೂಗುತಿಯನ್ನು ಪುರೋಹಿತರು ಹಾಕುತ್ತಾರೆ. ಅದನ್ನು ಯಾರು ಬೇಗ ತೆಗೆಯುತ್ತಾರೋ ಅವರು ಜಯಶೀಲರಾದಂತೆ.

ಬೆಲ್ಲದ ಅಚ್ಚಿಗೆ ದಾರ ಕಟ್ಟಿ ಒಂದು ತುದಿಯನ್ನು ಹಿಡಿದುಕೊಂಡಿರುತ್ತಾರೆ. ಅದನ್ನು ಯಾರು ಮೊದಲು ಬಾಯಿಯಲ್ಲಿ ಕಚ್ಚುತ್ತಾರೊ ಅವರು ಜಯಶೀಲರಾದಂತೆ.

ನಾಲ್ಕು ಕವಡೆ, ಅಥವಾ ಅಡಕೆ ಹೋಳುಗಳನ್ನು ಕೈಯಲ್ಲಿ ಹಿಡಿದು ಹೆಣ್ಣು ಗಂಡಿಗೆ '' ಸರಿನಾ ಬಸನಾ'' ಎಂದು ಕೇಳುತ್ತಾಳೆ ಅದಕ್ಕೆ ಗಂಡು ಸರಿಯಾದ ಉತ್ತರ ಹೇಳಬೇಕು ಇಲ್ಲವಾದರೆ ಸೋಲನ್ನು ಒಪ್ಪಿಕೊಳ್ಳಬೇಕು. ಇಲ್ಲಿ ಹೆಣ್ಣಿನ ಕಡೆಗೆ ಹಲವರು ಗಂಡಿನ ಕಡೆಗೆ ಒಂದಷ್ಟು ಜನರು ಇರುತ್ತಾರೆ. ಅಂದರೆ ಬಲವಾದ ಎರಡು ಗುಂಪುಗಳಿದ್ದು ಅವರ ಗುಂಪನ್ನು 'ಗಂಡಿನಕಡೆ ಗುಂಪು' 'ಹೆಣ್ಣಿನ ಕಡೆ ಗುಂಪು' ಎಂದು ಕರೆಯುತ್ತಾರೆ. ಇನ್ನೂ ಅನೇಕ ಜೂಜು, ಆಟಗಳು ಇಲ್ಲಿ ನಡೆಯುತ್ತವೆ. ಇಲ್ಲಿಯೂ ಹಾಡನ್ನು ಹಾಡುವವರು ಹಾಡುತ್ತಾರೆ.

'' ಸಾಣಾಗಲ್ಲಿನ ಮೇಲೆ ಜಾಣಾರು ಪಗುಡಿ ಹೂಡಿ
ಸಾಣಾಗಲ್ಲುಡವೀ ಸಿಗುರೆಡ್ಡಿ ಈವಾರ
ಜಾಣಾರೊಡವ್ಯೆ ಪಗುಡೇಯು''
(ಅನುಬಂಧ – ಆಟ ಆಡಿಸುವಾಗ)

ಈ ಆಟ ಆಡುವವರು ಜಾಣಾರು.ಅವರೆಲ್ಲ ಈ ಊರಿನ ಜಾಣಾರು ಎಂದು ಹೆಮ್ಮೆಯಿಂದ ಹೇಳಿದರೆ ಕೆಳಗಿನ ಹಾಡಿನಲ್ಲಿ ಹೆಣ್ಣು ಹೇಗೆ ಜಾಣರೊಂದಿಗೆ ಪಗಡೆ ಆಡಲಿ ಎನ್ನುವ ಆತಂಕ ವ್ಯಕ್ತಪಡಿಸುವುದನ್ನು ಹಾಡುಗಾರ್ತಿಯರು ವರ್ಣಿಸುತ್ತಾರೆ.

'' ಮಾವನ ಮನೆಯು ಮುಗುಳು ಮಂಟಪದಲ್ಲಿ
ಜನರು ಕುಳ್ಳಲ್ಲಿ ತಳವೆಲ್ಲಾ ತಾಯವ್ವ
ಹ್ಯಾಂಗಾಡಲೆ ತಾಯೇ ಪಗೊಡಿಯು''
(ಅನುಬಂಧ – ಆಟ ಆಡಿಸುವಾಗ)

4.4 ಮದುವೆಯ ನಂತರದ ಆದರಣೆ:–

ಮದುವೆಗೆ ಬಂದು ನೆಂಟರೆಲ್ಲರೂ ಧಾರೆಯನ್ನು ಮುಗಿಸಿಕೊಂಡು ಊಟಮಾಡಿ ಅವರವರ ಮನೆಗಳಿಗೆ ಹೊರಡುತ್ತಾರೆ. ಮದಲಗಿತ್ತಿಯ ಜೊತೆಗೆ ಕೆಲವು ಹೆಣ್ಣುಮಕ್ಕಳು ಇರುತ್ತಾರೆ. ಮದುವೆಯಲ್ಲಿ ಪ್ರಮುಖ ಪಾತ್ರ ವಹಿಸಿಕೊಂಡ ಐದುಗಿತ್ತಿಯರು ಅಂದು ವರನ ಮನೆಯಲ್ಲಿಯೆ ಉಳಿದುಕೊಂಡಿರುತ್ತಾರೆ. ಮರುದಿನ ಮುಂಜಾನೆ ಹೆಣ್ಣು ನಾಲ್ಕಾರು ಪಾತ್ರೆಗಳನ್ನು ತೊಳೆದು, ಹಸೆ ಗೋಡೆಯನ್ನು ಸ್ವಚ್ಛ ಮಾಡುತ್ತಾಳೆ. ಅನಂತರ ಅವಳಿಂದ ಮಜ್ಜಿಗೆ ಕಡೆಯುವಂತೆ ಐದುಗಿತ್ತಿಯರು ಸೂಚಿಸುತ್ತಾರೆ. ಅದರಂತೆ ಅವಳು ಮಜ್ಜಿಗೆ ಕಡೆದು ಬೆಣ್ಣೆಯನ್ನು ತೆಗೆಯುತ್ತಾಳೆ.

ಧಾರೆಯ ದಿನ ಬಾವಿ ಪೂಜೆ ಮಾಡಿದಾಗ ವಧೂ ವರರು ಇರುವುದಿಲ್ಲ. ಆದರೆ ಇಲ್ಲಿ ವಧೂವರರೆ ಮುಖ್ಯರಾಗಿರುತ್ತಾರೆ. ಬಾವಿಯನ್ನು ಕ್ರಮದಂತೆ ಪೂಜೆಮಾಡಿ ಭಕ್ತಿಯಿಂದ ನಮಸ್ಕರಿಸುತ್ತಾರೆ. ಗಂಡು ಅಲ್ಲಿಯೇ ಪಕ್ಕದಲ್ಲಿ ಮಣ್ಣಿನ 'ಏರಿಯನ್ನು ನಿರ್ಮಿಸುತ್ತಾನೆ. ಹೆಣ್ಣು ಅದಕ್ಕೆ ಬೀಜ ಹಾಕಿ, ನೀರು ಹುಯ್ಯುತ್ತಾಳೆ. ಇದಾದ ನಂತರ ಹೆಣ್ಣಿನ ತಲೆಯ ಮೇಲೆ ತುಂಬಿದ ಕೊಡವನ್ನು ಹೊರಿಸಿಕೊಂಡು ಮನೆಗೆ ಬರುತ್ತಾರೆ. ಅವಳು ಹೊತ್ತುತಂದ ಕೊಡವನ್ನು ದೇವರ ಕಟ್ಟೆಯ ಮೇಲೆ ಇರಿಸಿ ಮತ್ತೆ ಕೈ ಮುಗಿದು ಕೊಳ್ಳುತ್ತಾಳೆ.

ಧಾರೆಯ ದಿನ ಧರಿಸಿದ ಬಟ್ಟೆಗಳನ್ನು ಯಾವುದೇ ಕಾರಣಕ್ಕೂ ಬದಲಿಸುವಂತಿಲ್ಲ. ಇದು ಪ್ರಬಲವಾದ ನಿಷೇಧವಾಗಿದೆ. ಐದನೇ ದಿನ ಹೆಣ್ಣಿನ ಮನೆಯಲ್ಲಿ ಅವುಗಳನ್ನು ಬಿಚ್ಚುತ್ತಾರೆ. ಪವಿತ್ರವಾದ ಜಲವನ್ನು ದೇವರ ಮುಂದೆ ಇಳಿಸಿದ ಹೆಣ್ಣು ತನ್ನ ಗಂಡನ ಪಾದಗಳನ್ನು ತೊಳೆದು ಪೂಜೆ ಮಾಡಬೇಕು. ಇದು ಹಂದರದ ಕೆಳಗೆ ಇಟ್ಟ ಮಣೆಯ ಮೇಲೆ ನಡೆಯುತ್ತದೆ. ಮಣೆಯ ಮೇಲೆ ನಿಂತ ಗಂಡನ ಪಾದಗಳನ್ನು ನೀರಿನಿಂದ ಚೆನ್ನಾಗಿ ತೊಳೆದು, ನಂತರ ಪಾದಗಳಿಗೆ ಕುಂಕುಮ, ಹಳದಿ, ಗಂಧ, ಹೂ, ಇತ್ಯಾದಿಗಳನ್ನು ಇಟ್ಟು ಪಾದ ಮುಟ್ಟಿ ನಮಸ್ಕಾರ ಮಾಡಿಕೊಳ್ಳುತ್ತಾಳೆ. ಹೀಗೆ ಮೂರು ಬಾರಿ ಆದಮೇಲೆ ಗಂಡಿನ ಪಾದಗಳ ಮೇಲೆ ಹಾಲನ್ನು ಬಿಡುತ್ತಾರೆ, ಅದನ್ನು ಹೆಣ್ಣು ಭಕ್ತಿಯಿಂದ ಕುಡಿಯುತ್ತಾಳೆ.

ಇದಾದ ನಂತರ ಹೆಣ್ಣಿನ ಕಡೆಯ ಹುಡುಗಿಯರು ಮತ್ತು ಐದುಗಿತ್ತಿಯರು, ಸ್ನಾನದ ಮನೆಗೆ ಬರುತ್ತಾರೆ. ಹೆಣ್ಣು ಗಂಡನನ್ನು ಸ್ನಾನಮಾಡಿಸುವ ಶಾಸ್ತ್ರವನ್ನು ಮಾಡಿಸುತ್ತಾರೆ. ಮೊದಲು ಹೆಣ್ಣು – ಗಂಡಿನ ಮೇಲೆ ನೀರನ್ನು ಹಾಕುತ್ತಾಳೆ. ಅನಂತರ ಅರಿಶಿಣವನ್ನು ಲೇಪಿಸಿ ಮತ್ತೆ ನೀರನ್ನು ಹಾಕಿ, ಬೆನ್ನು, ಕೈಗಳನ್ನು ಉಜ್ಜುತ್ತಾಳೆ.

ಇಲ್ಲಿಗೆ ಗಂಡಿನ ಮನೆಯಲ್ಲಿ ನಡೆಯುವ ಎಲ್ಲಾ ಶಾಸ್ತ್ರಗಳೂ ಮುಗಿದಂತೆ. ಐದು ದಿನಗಳು ಹೆಣ್ಣು ಮತ್ತು ಅವಳ ಜೊತೆಗೆ ಬಂದ ಹುಡುಗಿಯರು ಗಂಡಿನ ಮನೆಯಲ್ಲಿಯೇ ಇರುತ್ತಾರೆ. ಐದುಗಿತ್ತಿಯರು ಕೆಲವರು ತಮ್ಮ ಮನೆಗೆ ಹೋಗಿರುತ್ತಾರೆ. ಉಳಿದವರು ಹೆಣ್ಣಿನ ಮನೆಯಲ್ಲಿ ನಡೆಯುವ ಶಾಸ್ತ್ರಗಳನ್ನು ಮಾಡಲು ಇರುತ್ತಾರೆ. ಐದು ದಿನದ ನಂತರ ಹೆಣ್ಣಿನ ಮನೆಗೆ ಗಂಡು, ಐದುಗಿತ್ತಿಯರಲ್ಲಿ ಉಳಿದು ಕೊಂಡವರು, ಹೆಣ್ಣಿನ ಕಡೆಯ ಹುಡುಗಿಯರು, ಮತ್ತು ಹುಡುಗನ ಕೆಲವು ಸ್ನೇಹಿತರು ಸೇರಿ ಹೋಗುತ್ತಾರೆ.

ದೂರದಿಂದಲೇ ಅಳಿಯ, ಮಗಳು, ಮತ್ತು ಪರಿವಾರದವರನ್ನು ಹೆಣ್ಣಿನ ತಂದೆ, ತಾಯಿ, ಅಣ್ಣ, ತಮ್ಮ, ಅತ್ತಿಗೆ ಇತರರು ಸೇರಿ ಆದರದಿಂದ ಸ್ವಾಗತಿಸಿ,ಅವರಿಗೆ ಕೈಕಾಲು ತೊಳೆದು ಕೊಳ್ಳುವಂತೆ ಹೇಳಿ ಒರಸಿಕೊಳ್ಳಲು ವಸ್ತ್ರಗಳನ್ನು ಕೊಟ್ಟು, ಅನಂತರ ಅವರುಗಳನ್ನು ಮನೆಯ ಒಳಗೆ ಬರಮಾಡಿಕೊಳ್ಳುತ್ತಾರೆ. ಹೀಗೆ ಬರಮಾಡಿ ಕೊಳ್ಳುವಾಗ ಗಂಡು – ಹೆಣ್ಣಿಗೆ ಆರತಿ ಬೆಳಗಿ, ಹಳದಿಯ ನೀರನ್ನು ದೂರಕ್ಕೆ ಚೆಲ್ಲುತ್ತಾರೆ . ಇಲ್ಲಿಗೆ ದಾರಿಯಲ್ಲಿ ಗಂಡು ಹೆಣ್ಣಿಗೆ ತಗುಲಿದ ದೃಷ್ಟಿ ತೊಲಗಿಸಲು ಇದನ್ನು ಮಾಡುತ್ತಾರೆ. ಗಂಡು ತನ್ನ ಮಾವನ ಮನೆಗೆ ಮೊದಲು ಪ್ರವೇಶ ಮಾಡುತ್ತಿರುವುದಾಗಿದೆ. ಬಂದ ನೆಂಟರೆಲ್ಲರೂ ಚಾಪೆಯ ಮೇಲೆ ಕುಳಿತು ಕೊಳ್ಳುತ್ತಾರೆ. ಅವರಿಗೆಲ್ಲಾ ತಂಪಾದ ಪಾನಿಯಗಳನ್ನು ಕೊಟ್ಟು ಸತ್ಕರಿಸುತ್ತಾರೆ.

ನಾಗೋಲಿಶಾಸ್ತ್ರ:-

ಮದಲಿಂಗ ಹಾಗೂ ಮದಲಗಿತ್ತಿಯರು ಧಾರೆ ದಿನದಿಂದ ತೊಟ್ಟುಕೊಂಡ ಬಟ್ಟೆಗಳನ್ನು ತೆಗೆಯುವ ಶಾಸ್ತ್ರ ನಡೆಯುತ್ತದೆ. ಇದನ್ನು ' ನಾಗೋಲಿ ಶಾಸ್ತ್ರ'

ಎಂದು ಕರೆಯುತ್ತಾರೆ. ವಧೂವರರನ್ನು ಸ್ನಾನದ ಮನೆಗೆ ಕರೆದೊಯ್ದು ಅವರು ತೊಟ್ಟ ಬಟ್ಟೆಗಳನ್ನು ಬಿಚ್ಚಿಸಿ, ಅವರಿಗೆ ಸ್ನಾನಮಾಡಿಸಿ, ಹೊಸಬಟ್ಟೆಗಳನ್ನು ಕೊಡುತ್ತಾರೆ. ಇಲ್ಲಿಗೆ ನಾಗೋಲಿ ಶಾಸ್ತ್ರವಾ ಮುಗಿದಂತೆ. ಇಷ್ಟು ದಿನ 'ಹಸಿ' ಮೈಯನ್ನು ಇಟ್ಟು ಕೊಂಡದ್ದನ್ನು ಕಳೆದು ಕೊಳ್ಳುತ್ತಾರೆ. ಆದರೆ ಪೂರ್ಣ ಪ್ರಮಾಣದಲ್ಲಿ ಅಲ್ಲ. ಮುಂದೆ ನಡೆಯುವ ಎಲ್ಲಾ ಕಾರ್ಯ ಮುಗಿಯುವವರೆಗೆ ಈ 'ಹಸಿ' ಮೈ ಮುಂದುವರಿದುಕೊಂಡು ಹೋಗುತ್ತದೆ. ನಾಗೋಲಿ ಶಾಸ್ತ್ರ ಮುಗಿದ ನಂತರ ಹೊಸ ಬಟ್ಟೆಗಳನ್ನು ತೊಟ್ಟ ಹೆಣ್ಣು – ಗಂಡುಗಳನ್ನು ಹಸೆ ಗೋಡೆಯ ಹತ್ತಿರ ಹಾಸಿದ ಜಮಖಾನದ ಮೇಲೆ ಕೂರುವಂತೆ ಹೇಳಿ, ಅವರಿಗೆ ಅಕ್ಕಿಯನ್ನು ಮುತ್ತೈದೆಯರು ನವದಂಪತಿಗಳ ಕೈ, ಮೊಳಕಾಲು, ತಲೆಗೆ ತಾಗಿಸಿ ಹಿಂದೆ ಹಾಕುತ್ತಾರೆ. ಹೀಗೆ ಮಾಡಿದ ಹಿರಿಯರ ಕಾಲಿಗೆ ಗಂಡು, ಹೆಣ್ಣುಗಳು ನಮಸ್ಕರಿಸುತ್ತಾರೆ. ಕಿರಿಯವರು ದೊಡ್ಡವರು ಮಾಡಿದಂತೆ ಮಾಡಿ, ಗಂಡು, ಹೆಣ್ಣಿನ ಕಾಲಿಗೆ ನಮಸ್ಕಾರ ಮಾಡುತ್ತಾರೆ. ಹೀಗೆ ಹಿರಿಯರು, ಕಿರಿಯರು ಶಾಸ್ತ್ರವನ್ನು ಮುಗಿಸಿದ ನಂತರ ಗಂಡು ಹೆಣ್ಣನ್ನು ಅಲ್ಲಿಂದ 'ಏಳಿಸುತ್ತಾರೆ.

ಹಸೆಶಾಸ್ತ್ರ ಮುಗಿದ ನಂತರ 'ವಧೂವರ' ರನ್ನು ಹಂದರದ ಕೆಳಗೆ ನಿಲ್ಲಿಸಿ ಆರತಿ ಬೆಳಗುತ್ತಾರೆ. ಇಲ್ಲಿ ಹೆಣ್ಣಿನ ತಂಗಿ ಭಾಗವಹಿಸಿರುತ್ತಾಳೆ. ಈ ಸಮಯದಲ್ಲಿ ಹಾಡನ್ನು ಹೇಳುತ್ತಾರೆ.

" ಹಸರು ಮೋಗತಿಯವಳ ಕುಸುನೆಗಿಯಾಡುವಳ
ಲಸರು ಲೋಗತೀನೇ ಮೋಕದವಳೆ ಬಾಲಯ್ಯಗೆ
ಕುಸಲದಾರುತಿಯ ಬಳಗೂರೆ"

" ಹತ್ತು ಮುತ್ತೈದೇರೆ ಛತ್ರದ ದೀಪಗೊಂಡಿ
ಹತ್ತೂ ಅವತರದ ಹರೀವಾಣ ಆರತಿ ಮಾಡಿ
ತೋರಿಸಿ ದೊಡ್ಡವನ ಮಗನೀಗೆ"

" ಚಿನ್ನ ಹೊದ್ದನು ರಾಯ ಚಿನ್ನ ತೊಟ್ಟನು ರಾಯ
ಚಿನ್ನವ 'ಏರಿ ರತುವೇರಿ ಬಾಲಯ್ಯಗ
ಚಿನ್ನದ ಆರುತಿಯ ಬಳಗೂರೇ"

ಅಂದು ಸೇರಿದವರಿಗೆಲ್ಲ ಸಿಹಿ ಊಟವಿರುತ್ತದೆ. ಊಟದ ಕಾರ್ಯ ಮುಗಿದ ನಂತರ ಆ ದಿನದ ಎಲ್ಲಾ ಶಾಸ್ತ್ರಗಳು ಮುಗಿಯುತ್ತವೆ.

ಕಾರ್ಯ :-

ಮರುದಿನ ಬೆಳಿಗ್ಗೆ ಗಂಡು, ಹೆಣ್ಣುಗಳು ಸ್ನಾನಮುಗಿಸಿ ಊರಿನ ದೇವರ ಗುಡಿಗೆ ಹೋಗಿ ಪೂಜೆ ಸಲ್ಲಿಸುತ್ತಾರೆ. ಅದೇ ದಿನ ಸಂಜೆ ಹುಡುಗಿಯ ಅಕ್ಕ ಕೋಣೆಯಲ್ಲಿ ಹಾಸಿಗೆ ಸಿದ್ಧ ಪಡಿಸಿ ಬರುತ್ತಾಳೆ. ಅಲ್ಲಿ ಕುಡಿಯಲು ನೀರು ಇಟ್ಟಿರುತ್ತಾರೆ. ಊಟ ವಾದ ಬಳಿಕ ಗಂಡು ಕೋಣೆಗೆ ಹೋಗಿ ಮಲಗಿಕೊಳ್ಳುತ್ತಾನೆ. ಇದಾದ ನಂತರ ಹುಡುಗಿಯನ್ನು ಜೊತೆಗಿದ್ದವರು ಕೋಣೆಗೆ ಹೋಗುವಂತೆ ಸೂಚಿಸುತ್ತಾರೆ. ಹೆಣ್ಣು ನಾಚುತ್ತಾಳೆ. ಅವಳ ಕೈ ಹಿಡಿದು ಗಂಡು ಇರುವ ಕೋಣೆಗೆ ತಳ್ಳಿ ಬಾಗಿಲು ಹಾಕಿ ಕೊಳ್ಳುತ್ತಾರೆ. ಈ ಕಾರ್ಯ ಹೆಣ್ಣಿನ ಮನೆಯಲ್ಲಿಯೆ ನಡೆಯಬೇಕು ಎನ್ನುವ ನಿರ್ಬಂಧವಿಲ್ಲ. ಕೆಲವರು ಇದನ್ನು ಗಂಡಿನ ಮನೆಯಲ್ಲಿ ಮಾಡುತ್ತಾರೆ. ಇಲ್ಲಿ ಹಾಸಿ ಕೊಡುವವಳು ಗಂಡನ ಅಕ್ಕ ಆಗಿರುತ್ತಾಳೆ. ಹೆಣ್ಣು ಕೋಣೆಗೆ ಹೋಗುವಾಗ ಅವಳು ಒಂದು ಲೋಟ ಹಾಲು ಹಿಡಿದಿರುತ್ತಾಳೆ. ಹಿಂದೆ ಇವರಲ್ಲಿ ಈ ರೀತಿ ಇರಲಿಲ್ಲ. ಆ ದಿನವೇ ಗಂಡು ಹೆಣ್ಣನ್ನು ಕೂಡುವ ದಿನವಾಗಿರುತ್ತದೆ. ಅಂದಿನಿಂದ ಒಬ್ಬರನೊಬ್ಬರು ಅರಿತು ಕೊಂಡು ಜೀವನ ಸಾಗಿಸುತ್ತಾರೆ.

ಗಂಡು ಕೆಲವು ದಿನಗಳು ಹೆಣ್ಣಿನ ಮನೆಯಲ್ಲಿಯೇ ಇದ್ದು, ತನ್ನ ಮನೆಗೆ ಹೆಂಡತಿಯನ್ನು ಕರೆದುಕೊಂಡು ಬರುತ್ತಾನೆ. ಹೆಂಡತಿ ಮನೆಯಿಂದ ಬಂದ, ಹೊಸ ಜೋಡಿಗಳನ್ನು ತಾಯಿ, ತಂದೆಯರು ಬರಮಾಡಿಕೊಂಡು, ಪ್ರೀತಿಯಿಂದ ಕಾಣು ತ್ತಾರೆ. ಅಂದು ಮಾಂಸದ ಊಟವಿರುತ್ತದೆ. ಊಟ ಮಾಡುವ ಮೊದಲು ಎಡೆಮಾಡಿ, ಆನಂತರ ಊಟ ಮಾಡುತ್ತಾರೆ. ಹೆಣ್ಣು ಅತ್ತೆ, ಮಾವನ ಪಾದಗಳಿಗೆ ನಮಸ್ಕರಿಸಿ, ತನ್ನ ಗಂಡನ ಕೊಠಡಿಗೆ ಹೋಗುತ್ತಾಳೆ. ಅಂದಿನಿಂದ ಅವರು ಒಂದಾಗಿ ಬಾಳುತ್ತಾರೆ.

4.5 ಶಕುನ ಮತ್ತು ನಂಬಿಕೆಗಳು

ಶಕುನಗಳು:

ಉಪ್ಪಾರರು ಹಿಂದೆ ತಮ್ಮ ನಿತ್ಯ ಜೀವನದಲ್ಲಿ ಹೆಜ್ಜೆ ಹೆಜ್ಜೆಗೂ ಶಕುನ ನೋಡಿ ಕೆಲಸ ಮಾಡುತ್ತಿದ್ದರೆಂಬುದು ಕ್ಷೇತ್ರಕಾರ್ಯದಿಂದ ತಿಳಿದು ಬಂದಿದೆ. ಇತ್ತೀಚೆಗೆ ಶಕುನ ನೋಡುವುದನ್ನು ಮಂಗಲ ಕಾರ್ಯದಲ್ಲಿ ಮಾತ್ರ ಸೀಮಿತ ಗೊಳಿಸಿಕೊಂಡಿದ್ದಾರೆ. ಮಂಗಲ ಕಾರ್ಯಕ್ಕೆ ಸಂಬಂಧಿಸಿದ ಶಕುನಗಳನ್ನು ನೋಡಿದರೆ ಬಹುಪಾಲು ಶಕುನಗಳು 'ಮದುವೆ' ಸಂದರ್ಭಕ್ಕೇ ಮೀಸಲಿದ್ದಂತಿವೆ. ಇವರು ಹೆಣ್ಣು ನೋಡುವ ಸಂದರ್ಭದಿಂದ ಹಿಡಿದು ಮದುವೆ ಮುಗಿದು ಗಂಡು ಹೆಣ್ಣು ಹಳಬರಾಗುವವರೆಗೂ ಶಕುನಗಳನ್ನು ಗಮನಿಸುತ್ತಾರೆ. ಇಲ್ಲಿ ಕೆಲವು ಶಕುನಗಳನ್ನು ಪಟ್ಟಿ ಮಾಡಲಾಗಿದೆ.

ಶುಭ ಶಕುನಗಳು:

1. ನರಿ, ಮುಂಗುಸಿ ಮುಖ ತೋರಿಸಿದರೆ ಒಳ್ಳೆಯದು.
2. ಕೆಳಜಾತಿಯವನು ಅಡ್ಡಬಂದರೆ ಒಳ್ಳೆಯದು.
3. ಹಣ್ಣು, ಹೂ, ಅಡ್ಡಬಂದರೆ ಒಳ್ಳೆಯದು.
4. ಮುತ್ತೈದೆಯರು, ತುಂಬಿದಕೊಡ, ಹೆಣ, ಎದುರಾದರೆ ಶುಭ.
5. ಸೂಳೆಯರು ಅಡ್ಡ ಬಂದರೆ ಶುಭ.

ಅಶುಭ ಶಕುನಗಳು:

1. ನಾಗರ ಹಾವು, ಬೆಕ್ಕು, ಅಡ್ಡಬಂದರೆ ಅಪಶಕುನ.
2. ವಿಧವೆ, ಒಂಟಿ ಬ್ರಾಹ್ಮಣ, ಅಡ್ಡಬಂದರೆ ಅಪಶಕುನ
3. ಆಂಗ(ಒಂದು ಜಾತಿಯ ಹಕ್ಕಿ) ಬಲದಿಂದ ಎಡಕ್ಕೆ ಹೋದರೆ.

4. ಕಾಗೆ ಎಡದಿಂದ ಬಲಕ್ಕೆ ಹೋದರೆ.

5. ಹೆಣ್ಣಿನ ಮನೆಗೆ ಹೊರಡಬೇಕು ಎನ್ನುವಾಗ ಹಲ್ಲಿ ಲೊಚಗುಟ್ಟಿದರೆ ಅಶುಭ.

6. ಕಟ್ಟಿಗೆ ಹೊರೆ ಅಡ್ಡ ಬರಬಾರದು.

7. ಹೊಸ ಮಡಕೆ ಹೊತ್ತವನು ಅಡ್ಡಬರಬಾರದು.

8. ಹೆಣ್ಣು ಕೆದರಿದ ತಲೆ ಬಿಟ್ಟುಕೊಂಡು ಬಾಗಿಲಲ್ಲಿ ನಿಂತಿರಬಾರದು.

9. ಗುದ್ದಲಿ ಸಲಿಕೆ ಎದುರಾಗಬಾರದು.

10. ಹೆಣ್ಣಿನ ಮನೆಗೆ ಹೋದಾಗ ಹೆಣ್ಣು ಕಸಬರಿಕೆ ಹಿಡಿದಿರಬಾರದು.

ಮೇಲಿನ ಪಟ್ಟಿಯನ್ನು ಗಮನಿಸಿದರೆ ಮುಖ್ಯವಾಗಿ ಪ್ರಾಣಿ, ಮನುಷ್ಯ, ಸಸ್ಯ ಮತ್ತು ಇತರ ವಸ್ತುಗಳು ಶಕುನ ಸೂಚಕಗಳಾಗಿರುವುದು ಕಂಡುಬರುತ್ತದೆ. ಮೃಗ ಪಕ್ಷಿ ಜಂತುಗಳಾದಿಗಳ ದೈಹಿಕ ಕ್ರಿಯೆ ಪ್ರತಿಕ್ರಿಯೆಗಳಲ್ಲಿ ಶಕುನ ಫಲ ಕಂಡುಕೊಳ್ಳುವುದು ವಿಲಕ್ಷಣವಾಗಿ ತೋರುತ್ತದೆ. ಹಕ್ಕಿಗಳು ಹಾರುವುದು, ಹಲ್ಲಿ ಲೊಚಗುಟ್ಟುವುದು, ನರಿ ಬೆಕ್ಕು, ಹಾವು ಇತ್ಯಾದಿಗಳು ದಾರಿಯನ್ನು ಆಚೆ ಈಚೆ ದಾಟುವುದು ಆಯಾಯ ಪ್ರಾಣಿಗಳ ಸ್ವಭಾವ ಸಿದ್ಧವಾದ ನಡವಳಿಗಳು. ಈ ಪ್ರಾಣಿ, ಪಕ್ಷಿ ಸ್ವಭಾವವನ್ನೇ ಶುಭ ಅಶುಭ ಎಂದು ತಿಳಿಯುವುದು ತೀರ ವಿಚಿತ್ರವಾಗಿ ಕಾಣುತ್ತದೆ. ಇನ್ನೊಂದು ಗಮನಿಸಬೇಕಾದ ಅಂಶ ಎಂದರೆ ವಾಸ್ತವಿಕ ಬದುಕಿನಲ್ಲಿ ಯಾವ ವಸ್ತು ಮತ್ತು ವ್ಯಕ್ತಿಗಳನ್ನು ಗೌರವ ಭಾವನೆಯಿಂದ ಕಾಣುವುದಿಲ್ಲವೋ ಅವು ಇಲ್ಲಿ ಶುಭ ಶಕುನಗಳಾಗಿ ಕಾಣುತ್ತವೆ. ಉದಾ: ವೇಶ್ಯೆ, ಕೆಳಜಾತಿಯವನು, ತುಂಬಿದ ಕೊಡ ಇತ್ಯಾದಿ. ದೇವದಾಸಿ ಎಂಬ ಕಾರಣಕ್ಕಾಗಿ ವೇಶ್ಯೆಯಲ್ಲಿ ಮಂಗಲವನ್ನು ಕಾಣುತ್ತಾರೆ, ಇವಳು ನಿತ್ಯ ಸುಮಂಗಲಿ. ದೇವರ ಸೇವೆಗಾಗಿಯೇ ಇರುವವಳು ಎಂಬ ಕಲ್ಪನೆಗಳು ಇವರಲ್ಲಿರುವುದರಿಂದಲೂ, ಊರಿನ ಹೆಣ್ಣು ಮಕ್ಕಳ ಶೀಲವನ್ನು ಕಾಪಾಡುವವಳೂ ಆಗಿರುವುದರಿಂದಲೂ ಇವಳು ಶುಭ ಶಕುನವಾಗಿರುತ್ತಾಳೆ. ಕೆಳಜಾತಿಯವನು ಎಲ್ಲಾ ಕಾಲದಲ್ಲೂ ಅಂದರೆ ಹುಟ್ಟಿನಿಂದ ಸಾವಿನವರೆಗೆ ನಡೆಯುವ ಆಚರಣೆ ಸಂಪ್ರದಾಯಗಳಲ್ಲಿ ಭಾಗವಹಿಸುವುದರಿಂದ, ಹೇಳಿದಂತೆ ಕೇಳುವ

ಗುಣವನ್ನು ಹೊಂದಿದ್ದರಿಂದ ವ್ಯವಸಾಯ ಇತ್ಯಾದಿ ಕೆಲಸಗಳಲ್ಲಿ ಶ್ರದ್ಧೆಯಿಂದ ದುಡಿಯುವುದರಿಂದಲೂ ಶುಭ ಶಕುನವಾಗುತ್ತಾನೆ. ತುಂಬಿದ ಕೊಡದ ಮೇಲುನೋಟದ ಅರ್ಥಮಯು ತೀರ ಸಾಮಾನ್ಯವಾಗಿ ಕಂಡರೂ ಜನಪದರು ಅದನ್ನು ಹಗುರವಾಗಿ ಕಾಣುವುದಿಲ್ಲ. ಅದರ ಒಳ ಅರ್ಥ ಸದಾ ದವಸ ಧಾನ್ಯ, ಹಣ, ಸಂಪತ್ತಿನಿಂದ ಮನೆ, ಮನ, ತುಂಬಿರಲಿ ಎನ್ನುವುದೇ ಆಗಿರುತ್ತದೆ. ಇದು ನಿಜಕ್ಕೂ ಅರ್ಥಪೂರ್ಣವಾಗಿ ಕಂಡು ಬರುತ್ತದೆ.

ನಂಬಿಕೆಗಳು:

1. ಮೂಲುಗಣ್ಣಿನ ಹುಡುಗಿಯರು ಅದೃಷ್ಟವಂತರು.
2. ಹೆಣ್ಣು ನೋಡಲು ಹೊರಟಾಗ ದಾರಿಯುದ್ದಕ್ಕೂ ಶುಭ ಸೂಚನೆಗಳೇ ಕಂಡು ಬಂದರೆ ಆ ಸಂಬಂಧದಿಂದ ಒಳ್ಳೆಯದುಂಟು.
3. ಹುಡುಗನಿಗೆ ತಲೆಯಲ್ಲಿ ಎರಡು ಸುಳಿ ಇದ್ದರೆ ಎರಡು ಮಂದಿ ಹೆಂಡಂದಿರು ಆಗುತ್ತಾರೆ.
4. ಹೆಣ್ಣು ನೋಡಲು ಹೋದಾಗ ಹೆಣ್ಣಿನ ಮನೆಬಾಗಿಲು ಹಾಕಿರಬಾರದು.
5. ಮದುವೆ ಚಪ್ಪರದಲ್ಲಿ ತೂಗಿ ಹಾಕಿದ ತಳಿರು ತೋರಣಗಳು ಅವಿವಾಹಿತರ ತಲೆಗೆ ತಾಗಿದರೆ ಅವರಿಗೂ ಬೇಗನೆ ಮದುವೆ ಯೋಗ ಕೂಡಿಬರುತ್ತದೆ.
6. ಮದುವೆಯಾಗದೆ ಸತ್ತ ಯುವಕ ಅಥವಾ ಯುವತಿ ದೆವ್ವ ಅಥವಾ ಮೋಹಿನಿಯರಾಗಿ ಉಳಿದವರನ್ನು ಕಾಡುತ್ತಾರೆ.
7. ಮದುವೆ ದಿನ ಹೊತ್ತಿಸಿದ ಹಸೆ ದೀಪ, ಶಾಸ್ತ್ರಗಳು ಮುಗಿಯುವ ಮುನ್ನವೇ ಆರಬಾರದು.

ನಂಬಿಕೆಗಳ ಹಿಂದೆ ಸದುದ್ದೇಶಗಳಿರುತ್ತವೆ. ಉದಾ: 'ಮೂಲಗಣ್ಣನ ಹುಡುಗಿ ಅದೃಷ್ಟವಂತೆ' ಸುಂದರವಾಗಿರುವ ಹೆಣ್ಣೊಬ್ಬಳನ್ನು ಮದುವೆ ಮಾಡುವಾಗ ಅಂತಹ ಕಷ್ಟ ಆಗಲಾರದು. ಅದೇ ಎಲ್ಲಾ ಅಂಗಾಂಗಗಳು ಸರಿ ಇದ್ದು ಕೆಲವು ಅಂಗಗಳು ವಕ್ರವಾಗಿದ್ದರೆ ಅಂತಹ ಹೆಣ್ಣನ್ನು ಮದುವೆ ಮಾಡಿಕೊಳ್ಳಲು ಜನ ಮುಂದೆ ಬರುವುದಿಲ್ಲ, ಈ ಕಾರಣಕ್ಕಾಗಿ ಒಂದು ಹುಡುಗಿಯ ಮದುವೆ ನಡೆಯದೆ ಹೋಗಬಹುದು ಎಂಬ ಕಾರಣಕ್ಕಾಗಿ ಈ ನಂಬಿಕೆ ರೂಪು ಗೊಂಡಿರಬೇಕೆಂದು ತಿಳಿಯಬಹುದು. ಜನಪದರ ಎಲ್ಲಾ ನಂಬಿಕೆಗಳ ಹಿಂದೆಯೂ ಒಂದು ಮಹತ್ವದ ಅಂಶ ಅಡಗಿರುತ್ತದೆ. ಮೇಲು ನೋಟಕ್ಕೆ ನಂಬಿಕೆಗಳು ಹುರುಳಿಲ್ಲದಂತೆ ತೋರಿದರೂ ಆ ನಂಬಿಕೆಗಳು ಹೊರಗೆಡಹುವ ಒಂದು ವಾಸ್ತವ ಸತ್ಯವನ್ನು ಯಾರೂ ಅಲ್ಲಗಳೆಯುವಂತಿಲ್ಲ. ಮೇಲಿನ ಮಾತನ್ನು ಈ ಉದಾಹರಣೆಯೊಂದಿಗೆ ಸ್ಪಷ್ಟಪಡಿಸಿ ಕೊಳ್ಳಬಹುದು. ಹೆಣ್ಣಿನ ಕಡೆಯವರಿಗೆ ಯಾವುದೇ ಒಂದು ಕುಟುಂಬದೊಡನೆ ಬಾಂಧವ್ಯ ಬೆಳೆಸಲು ಇಷ್ಟ ವಿಲ್ಲದಿದ್ದಾಂಗ ಅವರು ತಮ್ಮ ಮನೆ ಬಾಗಿಲು ಮುಚ್ಚುವ ರೂಪದಲ್ಲಿ ಪ್ರಕಟಿಸಿರಬಹುದು. ಮುಯ್ಯಾ ಮುಯ್ಯಿಯಾಗಿ ಈ ಸಂಬಂಧ ಇಷ್ಟ ಇಲ್ಲ ಎಂದು ಹೇಳಿ ವಾತಾವರಣವನ್ನು ಕಹಿ ಗೊಳಿಸಿಕೊಳ್ಳುವುದರ ಬದಲು ಮೌನವಾಗಿಯೆ ಪ್ರತಿಕ್ರಿಯೆ ಅರ್ಥಪೂರ್ಣವಾಗಿ ತೋರುತ್ತದೆ.

ತಳಿರು ತೋರಣಗಳನ್ನು ಮಂಗಲ ಕಾರ್ಯಗಳಲ್ಲಿ ಸಾಮಾನ್ಯವಾಗಿ ಕಾಣುವ ದೃಶ್ಯವಾಗಿದೆ. ಹದಿ ಹರೆಯದವರ ಜೀವನ ಚಿಗುರಿನಂತೆ ದಟ್ಟವಾಗಿ ಚಿಗುರಲಿ ಎನ್ನುವ ಸತ್ಯ ಇಲ್ಲಿ ಅಡಗಿದೆ. ಮದುವೆಯಾಗದ ಗಂಡು ಹೆಣ್ಣುಗಳ ತಲೆಯಮೇಲೆ ಇಂತಹ ತಳಿರು ತೋರಣಗಳು ತಾಗುವುದರಿಂದ ಅವರಿಗೂ ಕಂಕಣ ಬಲ ಕೂಡಿ ಬರುತ್ತದೆ ಎಂದು ನಂಬುವುದು ಅವಾಸ್ತವಿಕವಾಗಿ ಕಂಡರೂ, ಸದಾ ಮಂಗಲ ಕಾರ್ಯಗಳು ನಡೆಯಲಿ ಎನ್ನುವ ಸದುದ್ದೇಶ ಅವರಲ್ಲಿ ಅಡಗಿರಬಹುದು.

ಹಸೆ ದೀಪವನ್ನು ಉರಿಸುವುದರಲ್ಲಿ ಗಂಡು ಹೆಣ್ಣುಗಳ ಮುಂದಿನ ಬದುಕು ಉಜ್ವಲವಾಗಿರಲಿ ಎಂಬ ಹಾರೈಕೆ ಅಡಗಿದೆ. ದೀಪ ಜ್ಞಾನದ ಸಂಕೇತ. ದೀಪ ಉರಿಯುವ ಕ್ರಿಯೆ ಮುಂದಿನ ಬದುಕಿನ ಪ್ರಜ್ವಲತೆಯನ್ನು ಸೂಚಿಸುತ್ತದೆ.

ಅಧ್ಯಾಯ – 5

ಸಮಾರೋಪ

ಸಮಾರೋಪ

ಪ್ರಸ್ತುತ ಅಧ್ಯಯನದಲ್ಲಿ ಹೊಸಪೇಟೆ ಪರಿಸರದಲ್ಲಿ ವಾಸಿಸುವ ಉಪ್ಪಾರರ ಮದುವೆ ಸಂಪ್ರದಾಯಗಳನ್ನು ಸಂಗ್ರಹಿಸಿ ಅವರು ಹೆಣ್ಣು ಆಯ್ಕೆ ಮಾಡಿ ಮದುವೆ ಮುಗಿಯುವವರೆಗೆ ಅನುಸರಿಸುವ ಎಲ್ಲ ವಿಧಿ ವಿಧಾನಗಳು, ಆಚರಣೆಗಳು, ಸಂಪ್ರದಾಯಗಳನ್ನು ಒಂದು ಕ್ರಮದಲ್ಲಿ ಜೋಡಿಸಿ ವಿವರಿಸಲಾಗಿದೆ. 'ಮದುವೆ' ಬದುಕಿನ ಅವಿಭಾಜ್ಯ ಅಂಗ ಎಂದು ಅಧ್ಯಯನದಲ್ಲಿ ಹಿಂದೆ ಅವರಲ್ಲಿ ಪ್ರಚಲಿತವಿದ್ದ ಮದುವೆಯ ಬಗೆಗಳನ್ನು ಪರಿಚಯಿಸಲಾಗಿದೆ. ಇವರು ಮದುವೆಯಲ್ಲಿ ಅನುಸರಿಸುವ ನಂಬಿಕೆ ಮತ್ತು ಶಕುನಗಳ ಮಾಹಿತಿಕೊಟ್ಟು ಅಗತ್ಯವೆನಿಸುವಲ್ಲಿ ವಿವರಿಸಲಾಗಿದೆ. ಅಧ್ಯಯನದ ಹಿನ್ನೆಲೆಯಾಗಿ ಉಪ್ಪಾರ ಜನಾಂಗದ ಭೌಗೋಳಿಕ ಪರಿಸರ, ಉಪ್ಪಾರ ಶಬ್ದದ ಪ್ರಾಚೀನತೆ ಮತ್ತು ಅರ್ಥ, ಪೌರಾಣಿಕ ಹಿನ್ನೆಲೆ, ಉಪ್ಪಾರರ ಪೂರ್ವ ಪರಿಚಯ, ಮತ್ತು ಅವರ ಕುಟುಂಬ ಪದ್ಧತಿ ಇವುಗಳನ್ನು ಪರಿಚಯಿಸಲಾಗಿದೆ.

ಪ್ರಸ್ತುತ ಉಪ್ಪಾರರ ಮದುವೆ ಸಂಪ್ರದಾಯಗಳನ್ನು ಒಂದು ಸೀಮಿತ ಅವಧಿಯಲ್ಲಿ ಅಧ್ಯಯನ ಮಾಡಬೇಕಾದ್ದರಿಂದ, ಮದುವೆಯಲ್ಲಿ ನಡೆಸುವ ಕೆಲವು ಆಚರಣೆಗಳು ಕೈ ಬಿಟ್ಟಿರಬಹುದು. ಉಳಿದಂತೆ ಎಲ್ಲಾ ಸಂಪ್ರದಾಯಗಳನ್ನು ಅವರ ಮದುವೆಯಲ್ಲಿ ಭಾಗವಹಿಸಿ ಸಾಕ್ಷ್ಯವಾಗಿ ನೋಡಿ ಸಂಗ್ರಹಿಸಲಾಗಿದೆ. ಈ ಸಂದರ್ಭದಲ್ಲಿ ಹಾಡುವ ಹಾಡುಗಳನ್ನು ಸಂಗ್ರಹಿಸಲು ಸಾಕಷ್ಟು ಕಾಲವನ್ನು ತೆಗೆದುಕೊಂಡಿತು.

ಮದುವೆಯಲ್ಲಿ ನೋಡಿದ ಮತ್ತು ಅಲ್ಲಿ ಸಂಗ್ರಹಿಸಿದ ವಿವರಗಳನ್ನು ಲಿಖಿತ ರೂಪದಲ್ಲಿ ತರಲು ತುಂಬ ಸಮಯ ಬೇಕಾಯಿತು. ಅನಂತರ ಅದನ್ನು ಒಂದು ಕ್ರಮದಲ್ಲಿ ಜೋಡಿಸಿ ಅಗತ್ಯವಿದ್ದಲ್ಲಿ ವಿಶ್ಲೇಷಣೆ ಮಾಡಲಾಯಿತು.

ಉಪ್ಪಾರರ ಮದುವೆ ವಿಧಾನವು ಆ ಜನಾಂಗದ ಸಾಂಸ್ಕೃತಿಕ ದೃಷ್ಟಿಕೋನವನ್ನು ಸಾಂಕೇತಿಕವಾಗಿ, ಸಮರ್ಥವಾಗಿ ಅಭಿವ್ಯಕ್ತಿಸುತ್ತದೆ. ಅವುಗಳನ್ನು ಈ ಕೆಳಗಿನಂತೆ ಸಂಗ್ರಹಿಸಬಹುದು.

1. ಪುನರಾವರ್ತನೆಗೊಳ್ಳುವ ಮದುವೆ ಸಂಬಂಧಗಳೇ ಉಪ್ಪಾರರ ಇತಿಹಾಸದ ಪ್ರಾಮುಖ್ಯ ಅಂಶವನ್ನು ನಿರ್ಧರಿಸಿದೆ.

2. ಮದುವೆ ಆಚರಣೆಗಳೂ ಅಕ್ಕಿ, ಜೋಳಕ್ಕೂ ಗಾಢವಾದ ಸಂಬಂಧ ಇದ್ದು, ಉತ್ಪಾದನಾ ವಿಧಾನಗಳು ಮದುವೆಯ ಒಟ್ಟು ರಚನೆಯನ್ನು ನಿಯಂತ್ರಿಸಿದೆ, ಹೀಗೆಯೆ ಸಂಸ್ಕೃತಿಯ ಇತರ ಅಂಶಗಳನ್ನು ಕೂಡ.

3. ತಂದೆ ಮತ್ತು ತಾಯಿಯ ಬೆಡಗುಗಳೇ(ಬಳಿ) ಆದರ್ಶವಾಗಿರುವ ಹಿನ್ನೆಲೆಯಲ್ಲಿ ಬೆಡಗೇ ಉಪ್ಪಾರರ ಪ್ರಧಾನ ಮಾನದಂಡ. ಇದರ ವ್ಯಾಪ್ತಿ ಜಾತಿಗಿಂತ ಬೇರೆಯದಾಗಿದೆ.

4. ಅಣ್ಣ ತಂಗಿಯರ ನಡುವೆ ಮದುವೆ ನಡೆಯಬಾರದು, ಪ್ರಧಾನ ನಿಷೇಧ ಇವರಲ್ಲಿದೆ.

5. ಹುಟ್ಟಿನಿಂದ ಸಾಯುವವರೆಗೆ ಮತ್ತು ವರ್ಷದಿಂದ ವರ್ಷಕ್ಕೆ ಜರುಗುವ ಅನೇಕ ಆಚರಣೆಗಳಲ್ಲಿ ಅಕ್ಕಿ ಮತ್ತು ಅರಸಿನಕ್ಕೆ ಪ್ರಧಾನ ಸ್ಥಾನವಿದೆ. ಅವೆರಡೂ ಮದುವೆಯಲ್ಲಿ ಅತ್ಯಂತ ಅಗತ್ಯವಾದವು. ಹಸಿವು ಮತ್ತು ಕಾಮದ ಪೂರೈಕೆಯೇ ಈ ಸಂಸ್ಕೃತಿಯ ನಿರ್ಮಾತೃಶಕ್ತಿಗಳಾಗಿರುವುದು, ಇದರಿಂದ ಸ್ಪಷ್ಟ.

6. ಉಪ್ಪಾರರ ಜನಪದ ಸಾಹಿತ್ಯದಲ್ಲಿ ಹೆಚ್ಚು ಒತ್ತು ಬಿದ್ದಿರುವ ಕೌಟುಂಬಿಕ ಭಾವಗಳು ಮತ್ತು ಸಂಬಂಧಗಳನ್ನು ಅಧಿಕೃತವಾಗಿ ಮದುವೆಯೇ ನಿರ್ಧರಿಸುತ್ತದೆ.

ಅನ್ನ ಮತ್ತು ಸಂತಾನ ಹಲವಷ್ಟು ಸಂಸ್ಕೃತಿಯನ್ನು ಬೆಳೆಸಿದಂತೆ ಉಪ್ಪಾರರ ಸಂಸ್ಕೃತಿಯನ್ನು ಬೆಳೆಸಿದೆ.

ಕೊನೆ ಟಿಪ್ಪಣಿ

1. ಹೊಲೆಯರು, ಇತ್ಯಾದಿ ಕೆಳಜಾತಿ, ಬುಡಕಟ್ಟು ಜನಾಂಗ ಈ ಪದ್ಧತಿಯನ್ನು ಗೌರವಿಸುತ್ತಿದ್ದರು.

2. ಇದನ್ನು ಕೆಲವು ಪ್ರದೇಶಗಳಲ್ಲಿ ಮನೆಯಳಿತನವೆಂದು ಕರೆಯುತ್ತಾರೆ. ಈ ಪದ್ಧತಿ ಇನ್ನೂ ಪ್ರಚಲಿತವಿದೆ.

3. ಕನ್ಯಾಶುಲ್ಕ ನೀಡಲು ಸಾಧ್ಯವಾಗದಿದ್ದಾಗ ಹುಡುಗಿಯ ಮನೆಯಲ್ಲೇ ಕೆಲ ಕಾಲ ಇದ್ದು ಆಮೇಲೆ ಮದುವೆ ಮಾಡಿಕೊಳ್ಳುತ್ತಿದ್ದ.

4. ಸ್ತ್ರೀ ಆಹಾರ ಸಂಗ್ರಹಣೆಯಲ್ಲಿ ಮನೆಯ ಕೆಲಸಗಳಲ್ಲಿ ತೊಡಗಿಕೊಂಡು ಅದಾಯವನ್ನು ಹೆಚ್ಚಿಸುತ್ತಾಳೆಂಬ ಕಾರಣದಿಂದ, ರೋಗಗಳಿಂದ ಮರಣ ಹೊಂದುತ್ತಿದ್ದರಿಂದ ಹೆಚ್ಚು ಹೆಣ್ಣುಗಳನ್ನು ಹೊಂದಿರುತ್ತಿದ್ದರು.

5. ವಯಸ್ಸಿಗೆ ಬಂದ ಹೆಣ್ಣು ಮನೆಯಿಂದ 'ಒಡಿ ಹೋದರೆ ಊರಿನ ಜನ ಬಹಿಷ್ಕಾರ ಹಾಕುತ್ತಿದ್ದರು. ಇದು ಹೆಣ್ಣಿನ ತಂದೆ ತಾಯಿಯರಿಗೆ ಅವಮಾನ. ಈ ಭಯಕ್ಕಾಗಿ ಬಾಲ್ಯವಿವಾಹ ಪದ್ಧತಿ ಹೆಚ್ಚು ಪ್ರಚಲಿತವಿತ್ತು.

6. ಈ ಕ್ರಮವನ್ನು ಗಂಡಿನವರು ಅನುಸರಿಸುತ್ತಿದ್ದರು. ಹುಡುಗ ಕಡು ಬಡವನಾಗಿದ್ದು ಮದುವೆಯ ಖರ್ಚು ವೆಚ್ಚಗಳನ್ನು ಭರಿಸಲಾಗದವನಾಗಿದ್ದರೆ ಮಾತ್ರ ಈ ಮದುವೆ ಜರಗುತ್ತಿತ್ತು. ಖರ್ಚುವೆಚ್ಚವೆಲ್ಲ ಹೆಣ್ಣಿನ ಕಡೆಯವರದೇ. ಗಂಡು ಹಿಂದಿನ ರಾತ್ರಿಯೇ ತನ್ನ ಅಪ್ತರೊಂದಿಗೆ ಬಂದಿರುತ್ತಾನೆ. ಹುಡುಗನ ಕಡೆಯಿಂದ ಯಾವ ಅಡಂಬರವೂ ಇರುತ್ತಿರಲಿಲ್ಲ. ಶಾಸ್ತ್ರ ವಗೈರೆ ಮುಗಿಸಿ ಸಂಗಾತಿಯೊಂದಿಗೆ ಊರಿಗೆ ತೆರಳುತ್ತಿದ್ದ.

7. ಕೆಲವು ಸಂದರ್ಭದಲ್ಲಿ ಮಧ್ಯಮ ವರ್ಗದ ಪುರುಷರು ಲೈಂಗಿಕ ಸಂಪರ್ಕ ಹೊಂದಲು ವಿಧವೆಯರನ್ನು ಇಟ್ಟುಕೊಳ್ಳುತ್ತಿದ್ದರೇ ಹೊರತು ಶಾಸ್ತ್ರೋಕ್ತವಾಗಿ ಅವರನ್ನು ಮರುವಿವಾಹ ಮಾಡಿಕೊಳ್ಳುತ್ತಿರಲಿಲ್ಲ. ಇದು ಅವರ ಅಂತಸ್ತಿಗೆ ಕೀಳು ಎಂಬ ಭಾವನೆ ಅವರಲ್ಲಿತ್ತು.

8. ಹೆಂಡತಿಯನ್ನು ಕಳೆದುಕೊಂಡವನು ತನ್ನ ಗೌರವವನ್ನು ಕಾಪಾಡಿಕೊಳ್ಳುವ ದೃಷ್ಟಿಯಿಂದ ಕೆಲವೊಮ್ಮೆ ಇಷ್ಟವಾದ ಕನ್ಯೆಯನ್ನೇ ಮದುವೆಯಾಗುತ್ತಿದ್ದ. ತೀರ ಕಡು ಬಡತನದ ಕುಟುಂಬದ ಹೆಣ್ಣು ಮಕ್ಕಳು ಮಾತ್ರ ಇಂಥ ವಿಧುರರ ವಿವಾಹಕ್ಕೆ ಒಪ್ಪಿಕೊಳ್ಳುತ್ತಿದ್ದರು. ಆದರೆ ಗಂಡ ಸತ್ತ ಹೆಂಗಸನ್ನು ಹುಡುಗರು ಮರು ಮದುವೆ ಮಾಡಿಕೊಳ್ಳುವ ಪದ್ಧತಿ ತೀರ ಕಡಿಮೆ.

9. ವಿಧವೆ – ವಿಧುರರ ಮುಖಾವಲೋಕನ ಒಳ್ಳೆಯದಲ್ಲ ಎಂಬ ನಂಬಿಕೆ ಇವರಲ್ಲಿದೆ. ಈ ಕಾರಣದಿಂದ ಊರಿನಲ್ಲಿ ಯಾರಿಗೂ ತಿಳಿಯದ ರೀತಿಯಲ್ಲಿ ಮದುವೆ ನಡೆದು ಹೋಗುತ್ತದೆ. ಮುತ್ತೈದೆಯರು, ಮಕ್ಕಳು ಈ ಮದುವೆಯಲ್ಲಿ ಭಾಗವಹಿಸುವುದಿಲ್ಲ.

10. ವಿಧವೆಯು ಬಳಿ ಗತಿಸಿದ ಗಂಡಕೊಟ್ಟಿದ್ದ, ಆಭರಣಗಳಿದ್ದರೆ ಅವುಗಳನ್ನು ಅವನ ಮನೆಯವರಿಗೆ ಹಿಂತಿರುಗಿಸುತ್ತಿದ್ದರು.

11. ಕಾಲಿಗೆ ಕಾಲುಂಗರ ಹಾಕುವುದಿಲ್ಲ. ಬಾಸಿಂಗ ಕಟ್ಟುವುದಿಲ್ಲ.

12. ಮರು ಮದುವೆ ಮಾಡಿಕೊಂಡವರು, ವಿಧವೆಯರು, ಎರಡು ಕಡೆಯ ಪ್ರಮುಖರು ನೆರೆದಿರುತ್ತಿದ್ದರು.

13. ತಾಳಿ ಕಟ್ಟಿದ ಹಾಗೂ ಕಟ್ಟಿಸಿಕೊಂಡ ಗಂಡ ಹೆಂಡರಿಗೆ ಯಾವುದೇ ತೊಂದರೆ ಯಾಗದಿರಲಿ ಎಂದು ಜನಪದರು '2' ಸಂಖ್ಯೆಗಿಂತ '3' ರನ್ನೇ 'ಶುಭ' ಎಂದು ತಿಳಿಯುತ್ತಾರೆ. ಮೊದಲ ಹೆಂಡತಿಯು ಹಾಗೆ ಈಗಿನವಳು ಸತ್ತು ಹೋಗ ದಿರಲಿ ಎಂಬ ಒಳ್ಳೆಯ ಉದ್ದೇಶದಿಂದ; ಎಕ್ಕೆಗಿಡಕ್ಕೇ ಶಾಸ್ತ್ರ ಮಾಡುತ್ತಿದ್ದರು.

14. ಒಂದು ಮನೆಯ ಅಣ್ಣ ತಂಗಿಯರು ಇನ್ನೊಂದು ಮನೆಯ ಅಣ್ಣ ತಂಗಿಯರ ಮಧ್ಯೆ ನಡೆಯುವ ಅದಲುಬದಲು ವಿವಾಹ. ಅಂದರೆ ಅಣ್ಣನಿಗೆ ಇನ್ನೊಂದು ಮನೆಯ ತಂಗಿಯನ್ನು ತಂದುಕೊಂಡು ಅವಳ ಅಣ್ಣನಿಗೆ ತನ್ನ ತಂಗಿಯನ್ನು ಕೊಟ್ಟು ಮದುವೆ ಮಾಡುವ ಪದ್ಧತಿ. ಈ ಪದ್ಧತಿ ಈಗಲೂ ಪ್ರಚಲಿತವಿದೆ.

15. ವರದಕ್ಷಿಣೆ ಪದ್ಧತಿಯೆ ಇದಕ್ಕೆ ಕಾರಣ.

16. ಸಂಗಾತಿಗಳನ್ನು ತಮ್ಮ ರಕ್ತ ಸಂಬಂಧಿಗಳ ಗುಂಪಿನಲ್ಲೇ ಆಯ್ಕೆ ಮಾಡಿಕೊಳ್ಳುವ ವಿಧಾನ. ಕುಟುಂಬದ ಆಸ್ತಿ ಅನ್ಯರ ವಶವಾಗುವುದನ್ನು ತಡೆಗಟ್ಟಲು, ರಕ್ತ ಶುದ್ಧತೆಯನ್ನು ಕಾಪಾಡಿಕೊಳ್ಳಲು, ಹೊಂದಾಣಿಕೆ ಜೀವನ ನಡೆಸಲು ಈ ಬಾಂಧವ್ಯ ನೆರವಾಗುತ್ತಿತ್ತು.

17. ಇಲ್ಲಿ ಹೆಣ್ಣಿನ ಆಯ್ಕೆ ಮುಕ್ತವಾಗಿರುತ್ತಿತ್ತು.

18. ಮುಖ್ಯವಾಗಿ ಹುಡುಗ ಹುಡುಗಿಯರ ಒಪ್ಪಿಗೆ ಪಡೆದು ನಂತರ ಮದುವೆಯು 'ಏರ್ಪಾಡು ಮಾಡುತ್ತಾರೆ. ಮಕ್ಕಳ ಯೋಗಕ್ಷೇಮ ಮುಖ್ಯವೆಂದು ತಂದೆ ತಾಯಿಗಳು ಮಕ್ಕಳ ಭವಿಷ್ಯಕ್ಕೆ ಭಂಗ ಉಂಟಾಗುವಂಥ ಮದುವೆ ನಿಶ್ಚಯಿಸುತ್ತಿರಲಿಲ್ಲ.

19. ಅಲ್ಲದ, ಅಡವೆ, ಅರಗಿ, ಅಡಕೆ, ಅಟಪಡೆ, ಅಮ್ಮನ, ಅಗಿಲು, ಅಂದಳ, ಅರಸಿನ, ಅರಸು, ಆಕಳೆ, ಅಲೆ, ಆನೆ, ಉಗ್ನೆ, ಉಡುತಿ, ಉಪ್ಪಿನೋರು, ಎಮ್ಮೆ, ಎತ್ತಿನ ಎಣ್ಣೆ, 'ಎಳುಮೂಳೆ, ಒಳಕಲು, 'ಒಲೆನ, ಕಗಲ, ಕಸ್ತೂರಿ, ಕಗ್ಗಲ್ಲು, ಕಲಗ, ಕರಗ, ಕಳಾರಿ, ಕಲಬುರ್ಗಿ, ಕರೆನಾಂಗಿ, ಕರಂಡಿ, ಕಳಸ, ಕಲ್ಲುಮುಡಿ, ಕರಬಾನ, ಕಗ್ಗದ, ಕಡಗರ, ಕರಾಡೆ, ಕತ್ತೆ, ಕರಡೆ, ಕುದುರೆ, ಕುಮಟೆ, ಕಕ್ಕರಿ, ಕುಳ್ಳೆ, ಕುಬಾರೆ, ಕಿಲ್ಲೆದ, ಕಿಕರೆ, ಕಲಾರೆ, ಕೆಂಡ, ಕೊತ್ತಂಬರಿ, ಕೊಸರಿನ, ಕೊಡ್ಲೆ, ಕೊಂಡ್ಲಿ, ಕೊಪ್ಲ, ಕೋರಾವರ್ಕೆ, ಕೋಟೆಲೋರು, ಕೊಳಗದ, ಕೋಣ, ಕಾಲೆದ, ಕಾನೆಯು, ಕೈದಿಗೆ, ಕಾರ್ಣೆ ಕಾಂಡಿಕರ, ಕನ್ನತೆ, ಕಾಸ್ಯಪ, ಕಾಮಲೆ, ಕಾಸೈ, ಕಳಾರಿತಾವರೆ, ಗರುಡಸ್ತಂಭ, ಗಂಗಾ, ಗೆರಿನಿ, ಗೋನಿಕೆರೆ, ಗಾದಿ ಲೋರು, ಗಂಗನಮಲೆ, ಗಡಿಗೆ, ಗಂತ್ಲನ, ಗಂಟೆ, ಗರ್ಗಪ್ರಾಯು, ಗರ್ಲೇರು, ಗಂಟಲ, ಗದಂಗೆ, ಗನಸ್ಲಿ, ಗುಡತಿ, ಗುಂತುಕರ್ಲ, ಗುಗರೆ, ಗಾಡೆವಾಟ, ಗಾಡ, ಗಾಡಲ, ಗತ್ತೆ, ಗಲ್ಲರೆ, ಗೋಣ, ಗೋಡಸೇ, ಗೋಡನವರ್ನ, ಗೊಂಡಿ, ಗೊಪ್ಪೆ, ಗೆರಸ, ಗೊಲ್ಲ, ಗೋಡೆ, ಚಂದ್ರ, ಚಪ್ಪರ, ತಾವರೆ, ಚೈಮುಡಿ, ಚೈವಡಿ, ಚಾಪೆ, ಚಾರೆಕರೆ, ಚಾರೆ, ಚಿಲ್ಮೇರ, ಚಿಲುಮೆ, ಚೇಳಿನ, ಚೆಂಡುಹೂವು,

ಘಲೆ, ಜಗತಾಪ ಜಾನಕಲ್ಲು, ಜೋಗುಳ, ಜೋಗಿತಾವರೆ, ಟೋಣೆಣ್ಣ,
ಡನ್ವಾನ, ಡುಕರೆ, ತೋಳನ, ತಲಗ, ತುಪ್ಪ, ತುಂಬೊಳ್ಳೇರು ತಾಳಿದ,
ತುಂಗಲ, ತಾಗಡೇ, ದಡಗಲೋರು, ದುರ್ಗದ, ದೊಡ್ಡಮೀಸೆ, ದ್ಯಾವನ,
ದೊಡ್ಡಿ, ದೊಳೆಯು, ದಿದ್ದೆಲ, ದತಕಾಳೆ, ದಬ್ಬಳಸಾರೆ, ದಳವಾಯಿ, ನರಿ,
ನಾಕ್ಷೆ, ನಾಗ ನಾಗರ, ನೇರಳೆ, ನಾಡಲ, ನಕ್ಕಲು, ನೀತೆಲ, ನಿಳುವೆ, ನರಳೆ
ನೊಲ್ಕೆ, ಪವಾರ, ಪಾಂಡರೇ, ಪಾಂಡೆ, ಪಲ್ಲಗಿಂ, ಬಣ,ಬವನಾಣ, ಬಾಂಡ್ರೇಕರ,
ಬಾಜಬಳ್ಕರ, ಬೀಗ, ಬಿಡಿಯಾ, ಬೇಲದ, ಬಾಳೆಲ, ಬಳ್ಳಾರಿ, ಬ್ಯಾಡಗಿ, ಬಟ್ಟದ,
ಬಲದ್ದಲ, ಬ್ರಹ್ಮ ದಂಡಿ, ಬೆಣ್ಣೆ, ಬಳಿಯು, ಬಾರಿನ, ಬೀಸಕಲ್ಲು, ಬಳ್ಳಾರಿ ತಾವರೆ,
ಬುದ್ದರು, ಭಂಡಾರೆ, ಭಾವಿಕಿ, ಭೂದಾಳ, ಭಂಡಿ, ವಜ್ಜನ, ಮೋದದೆ,
ಮುತ್ತುಮುಚ್ಚಳ, ಮಹಾದೆಸೆ, ಮತ್ಸಗಾಂಧಿ, ಮೊಳಸೆಟ್ಟಿ, ಮೇಳದಾಸೆ,
ಮೋಸಳೀನ, ಮೀಸಾಳೀನ, ಮುಂಜಿ, ಮನುಕ, ಮಲ್ಲೂರು, ಮದರಸ,
ಮಲ್ಲಿಗೆ, ಯಲಪ, ಯಕರಿಯಾಸದ, ಯಸಗಿ, ರತ್ನ ರಾಜಣ, ರಾಣಗಂಜಿ,
ರಂಗಡೇ, ಲಾನಿಯಾ, ಲಾವಣ್ಯನ, ಲಾಭದ, ಪಟ್ಟಲ, ವಾಳ್ವೇಕರ, ವಾಳ್ಬಂಡ,
ವಾಲೆನ್ನ, ಸಕ್ಕರೆ, ಸಣ್ಣರಿಕ್ಕಿ, ಸಣ್ಣತಟ್ಟಿ, ಸಂಪತ್ತು, ಸರ್ವೆ, ಸಸಣ್ಣ, ಸರಗಳ್ಳ
ಸಂಪಿಗೆ, ಸಗರ, ಸರಗಂಬೆ, ಸಣ್ಣಬುದ್ದಿ, ಸಂಥಲ, ಸಬ್ಬರದ, ಸಮೋಸೆ, ಸಾಂಗೋ
ಲ್ಕರ, ಸುರ್ವೇಸೆ, ಸರಡೇ, ಸಾರೆ, ಸಿಮ್ಲಾ, ಸಾವಂತಿಗೆ, ಸೋಮೆಲ, ಸರ್ಲ್ಕೆ,
ಸೀರಣಗೆ, ಸಾಕೆಲ, ಸುಂಕದವರು, ಸೆಟ್ಟಿ, ಸಾಲಂಕೆ, ಸೇಜಿ, ಶೀಲವಂತರು,
ಶೆಳ್ಕೇಕರ, ಹರಿವಾಣ, ಹಾಲಿದ, ಹುಳಿಸೊಪ್ಪು, ಹಾವಿನ, ಹೊನ್ನೆಲ, ಹಾಸಾದಿ,
ಹಿವರೇ, ಹಳವೆ, ಹೋಳ್ಕರ, ಹಾಲು, ಹೊತಿ, ಹೊಂಗೆ, ಹೊನ್ನು, ಹುಲಿ
ವಾನ, ಹೊನ್ನಗೊಂಗೆ,ಶಿಂಗು, ನ್ಯಾಯಥೇಲದ್ದ, ಭಾದುಡಿ, ಬೆಳ್ಳಿ.

20. ಬೇರೊಬ್ಬರ ಮನೆ ವಿಳಾಸ ಕೇಳಿ ಅಥವಾ ಇನ್ನು ಬೇರೆ ನೆಪ ಮಾಡಿಕೊಂಡು ಅವರ ಮನೆ ಇತ್ಯಾದಿಗಳನ್ನು ನೋಡಿ ಬರುತ್ತಿದ್ದರು.

21. ಹೆಣ್ಣನ್ನು ನೋಡಿ, ಅವಳ ಗುಣ ಸ್ವಭಾವಗಳನ್ನು ತಿಳಿಯುತ್ತಿದ್ದರು.

22. ಗಂಡು ಹೆಣ್ಣುಗಳ 'ಬೆಡಗು' ಒಂದೇಯಾಗಿರಬಾರದು. ಉಪ್ಪಾರರಲ್ಲಿ 'ಬೆಡಗು' ಎಂದರೆ ಬಳಿ ಎಂದು ಅರ್ಥ.

23. ಸಿಡಿಗಾಲು, ಆನೆಗಾಲು, ಕಾಲುಜೊಟ್ಟು, ಕೈಜೊಟ್ಟು, ಉರಿಮೋಗೆ, ದೊಡ್ಡಗಿವಿ, ಈರುಜಡೆ, ಎರಡು ಸುಳಿ, ಈ ಎಲ್ಲಾ ಸಮಸ್ಯೆಗಳಿಂದ ಮುಕ್ತವಾದ ಹೆಣ್ಣನ್ನು ಮಾತ್ರ ಆಯ್ಕೆ ಮಾಡುತ್ತಾರೆ.

24. ಹೆಣ್ಣಿನವರು ಸಹ ಗಂಡಿನವರ ಪೂರ್ವ ವಿಚಾರಗಳನ್ನೆಲ್ಲ ವಿಚಾರಿಸಿ ತಮಗೆ ಇಷ್ಟವಾದರೆ ಮಾತ್ರ ಒಪ್ಪಿಕೊಳ್ಳುತ್ತಾರೆ.

25. ಹಾದಿನಿಮಿತ್ತ — ದಾರಿಶಕುನ. ಹುಡುಗನ ಮನೆ ಬಿಟ್ಟು ಹುಡುಗಿಯ ಮನೆ ಸೇರುವವರೆಗೂ ದಾರಿಶಕುನ ಗಮನಿಸುತ್ತಾರೆ. ಶುಭ ಸೂಚನೆಗಳು ಕಾಣಿಸಿಕೊಂಡರೆ ಮಾತ್ರ ಪ್ರಯಾಣ ಮುಂದುವರೆಸುತ್ತಾರೆ.

26. ಊಟ ಉಪಚಾರಗಳೂ ನಡೆಯುತ್ತವೆ. ಮುಖ್ಯವಾಗಿ ಸಿಹಿ ತಿನಿಸು ಸೇರಿದಂತೆ

27. ಸೀರೆ ಉಟ್ಟ ರೀತಿ, ಹೆಜ್ಜೆ ಹಾಕಿ ನಡೆದು ಬಂದ ರೀತಿ, ಕೈ, ಕಾಲು, ಕಣ್ಣು, ರೂಪ, ಬಣ್ಣ, ಮೈಕಟ್ಟು ಎಲ್ಲವನ್ನು ಗಮನಿಸುತ್ತಾರೆ.

28. ಗಂಡು ಹೆಣ್ಣುಗಳ ಹೆಸರುಗಳ ಮೊದಲಕ್ಷರಗಳು ಸಂಕೇತಿಸುವ ನಕ್ಷತ್ರಗಳು ಒಂದುಗೂಡುತ್ತವೆಯೋ ಇಲ್ಲವೋ ಎಂಬುದನ್ನು ಪುರೋಹಿತರಲ್ಲಿ ನೋಡಿಸುವುದೇ 'ಸಾಲಾವಳಿ'

29. ಹೆಂಗಸರು ಹೋಗುವಾಗ ಹಣ್ಣು ಹೂ ಎಲೆ ಅಡಿಕೆ ಅರಿಸಿನ ಕುಂಕುಮ ಎಲ್ಲವನ್ನು ತೆಗೆದುಕೊಂಡು ಹೋಗುತ್ತಿದ್ದರು.

30. ಈ ನೋಗವನ್ನು ಜನ ಪವಿತ್ರವಾಗಿಯೇ ಕಾಣುತ್ತಾರೆ. ಆದ ಕಾರಣ ನೋಗವನ್ನೇ ಮಾಡುತ್ತಾರೆ.

31. ಅನ್ನ ತುಪ್ಪ, ಹೋಳಿಗೆ, ಪಾಯಸ ಮತ್ತು ಮದುವೆಗೆ ತಂದಿದ್ದ ಹೊಸ ಬಟ್ಟೆಗಳನ್ನು ಹಾಕು(ಇಡು)ತ್ತಾರೆ. ಧನಲಕ್ಷ್ಮಿ ಬಿಟ್ಟು ಹೋಗುತ್ತಾಳೆ ಎಂದು ನಂಬುತ್ತಾರೆ. ಈ ಕಾರಣದಿಂದ ಹೆದರಿ ಮನೆಯ ಹೊರಗಡೆ ಹೋಗುವುದಿಲ್ಲ.

ಅ ನು ಬ ಂ ಧ

1. ಉಪ್ಪಾರರ ಮದುವೆ ಹಾಡುಗಳು
2. ನಿರೂಪಕರ ವಿವರ ಮತ್ತು ಕರಿಂವೋಲಿ
3. ಗ್ರಂಥಋಣ

1

ಹಂದರ ಪ್ರವೇಶ

ಹತ್ತು ಸಾವಿರ ಚಿನ್ನ ಹತ್ತು ಸಾವಿರ ರನ್ನ
ಹತ್ತು ಸಾವಿರ ಹಗಲ ಬತ್ತಿ। ತಡಕಂಡೆ
ಗುತ್ತೀಂವೆ ರಾಜ ಇಳಂ ಬಂದ।

ಕರಿಮಣಿ ಕಂದಬಂದ ಪಂಜರದ ಗಿಳಿ ಬಂದ
ನಂದ ಗೋಪ್ಯರ ಮಗ ಬಂದ। ದಾರೀಂ
ಕೆಂಡ ಸಂಪಿಗೆ ಅಲದದೆ

ಆನೀ ಹೇರೀಕಂಡಿ ಜಾಣಾ ನಗ್ಯಕೆ ಬಂದ
ಜಾಣ ದೇವಕಿ ಬಸುರಲ್ಲಿ। ಹುಟ್ಟಿದ ಕಂದ
ಜಾಣ ಬಂದಾ ಜಾಣೀ ಗೆಲುವಲ್ಲಿ।

ಕಲ್ಲಾ ಮೆಟ್ಟೀ ಬಂದಾ ಬಿಲ್ಲಾ ಮುರಿಯುತೆ ಬಂದಾ
ವಳ್ಳಾದೇವಕಿ ಮಗಬಂದಾ। ಉಡುಪೀಯ
ಕೃಷ್ಣ ಬಂದಾ ರಾಣೀಗೆಲುವಲ್ಲಿ।

ನಿಂಬೀಯ ಹಣ್ಣ ಅಂಬರಕೆ ಈಡಾಡುತ
ಸಿರಿಗಣಪಗೆ ಕಯ್ಯ ಮುಗಿಯುತ್ತ। ಮದುಮಣ್ಣ
ಬಂದ ಮಂಟಪಕೆ ಹರುಸಾಗಿ।

ದೊಡ್ಡ ಗೋಡೆಯ ಮನೆ ದೊಡ್ಡ ದೀಪವ ಹಚ್ಚ
ದೊಡ್ಡತ್ತೇ ನೋಡೇ ಅಳಿಯನ।

ಇಂದೇ ಬಂದಳಿಯನ ಇಂದೇನ ನೋಡುರಿ
ಅಂಗಾಲು ಕಾದಿ ಮೊಕ ಬಾಡಿ। ಅತ್ಯಮ್ಮ
ನಾಳೆ ಬಂದೊನ್ನೀಡೇ ಅಳಿಯನ।

ಹೊಳುವದು ದಾರುಕೆಲ ಕಣಪಿಣನನು ತಮ್ಮ
ಯರಂದು ಕಾಣೆ ಮದುಮಗ।

ಬಾಸಿಂಗ ಮುಡುದಾನೆ ಸೂಸಿಕವ ತಡುದಾನೆ
ನಾಲ್ವರು ಬಾವದೀರ ನೆಡುದೀರಿ। ನಿಂತಯಮನೆ
ಅದು ಕಾಣ ನಿಮ್ಮ ಅಳಿಯನು।

ಅಳಿಯನ ನೋಡಿದರೆ ವರುದಾ ಪುತ್ತುಂಸರ
ವರುನಲ್ಲ ಹತ್ತು ಹದಿನಾರು। ಮಾವಯ್ಯ
ಅಳಿಯಗೆ ಮಗಳ ಕೊಡಬಹುದೋ।

ಕರ್ಪೂರದಾರನೇ ಸಿರಿದೇವಿ ಕಂದನೇ
ಸುದ್ದ ದಿರಮಾನ ಅಳಿಯನೇ। ಮಾದಯ್ಯ
ಅಳಿಯಗೆ ಮಗುಳ ಕೊಡಬಹುದೋ।

ಅತ್ತ ತಮ್ಮಯ್ಯ ಕಾವಣೊಕ್ಯೊವಂಗೆ
ಕಾವಣದೊಳಗೆಲ್ಲ ಪರಿಮಳ। ಕಸ್ತುರಿ ಬಟ್ಟು
ಬಾವದೀರಿಟ್ಟರಿಯೇ ನೆಸುಳೀಗೇ

ಗಿಂಬಿರ ಅಂಬೊವ ಹುರಿಯ ಕಾಂನ ಮುಂಡ
ಒಡನೆ ಹಾಸಿದಳೆ ನಕಲತಿ। ತನ್ನಳಿಯಗೆ
ನಾರಿ ತನ್ನಳಿಯು ಕುಳುವಲ್ಲಿ।

ಹತ್ತೂ ಸಾವಿರ ಮುಂದಿ ವತ್ತೆ ವತ್ತೆ ನಿಂದಿ
ಮುತ್ತು ಬೆಲ್ಲೀದಂಜೆ ಕೆರುಬೆಗರಿ। ತಮ್ಮಯ್ಯಗೆ
ಕುಳ್ಪಲ್ಲಿ ದಾಳಸರೀ ಡವಲವ।

ಉತ್ತಗಿಂಡಿ ಎಡನಲ್ಲಿ ಮುತ್ತಗಿಂಡಿ ಬಲನಲ್ಲಿ
ಮುತ್ತಾನ ಸಂಬಳಗಿ ಬೆಳಿಯಲೆ। ಅಡಕೆ ಬಾಗ
ತಂದೀ ಕೊಡನಿನ್ನ ಅಳಿಯಗೇ

ಮಡಿಲು ತುಂಬುವಾಗ

ಮಾಳಾಗಿ ಒಳಗೆ ಹೋಗಿ ನೋಡುವ ಬನ್ನಿ
ಈಗಿನರು ಬರೆದ ಹಸಗಾರ ಬುಡದಲ್ಲಿ
ಸಿಸುವಾ ಸಿಂಗರಿಸಿದಾ ಹದಲವ.

ಹಸೆಂತು ಹಾಸವ್ರೆ, ಹಸಗೇರಿ ಬರದವ್ರೆ,
ಮನೆ ಪಪುಳವ ಬಿಡುಸವ್ರೆ, ಪಾಂಡವರ
ಸಿಸುವೇ ಸಿಂಗರಿಸಿ ಕುಳಸವ್ರೆ

ಅಟ್ಟಕ್ಕೇ ಪುಟ್ಟಕಿ ಪುಟಬ್ಯಾ ತೆಂಗಿನಕಾಂಯಿ
ಪಕ್ಕಸ ಅಕ್ಕಿ ಪಲಗಾಂಯಿ ನಾವ ತಂದವ್ರೆ,
ಮರಾಂತ್ರು, ಮಗಳ ಮಡುರೀಗೆ.

ಬಡಗು ಬಡಗು ಬಂತೆ ಬಡಗೀನೊಾಂತ್ಕರ ಬಂತೇ
ಹಡುಗೀನ ಮೆನ ಬಂತು ಹೊಸ ಮುತ್ತು, ಇವ ಮನೆಂತೂ
ಮಾರಾಂತ್ರು, ಮಗಾಳು ಮಡುರೀಗೆ

ಕಾಲಿಗೆ ಕಡಗ ಬಂತೆ ತೋಳೀಗ ರವ್ಕಿ ಬಂತೆ
ಆನಿಮೆನ ಬಂತೆ ಮಡಲಕ್ಕಿ ಮದುಮಗಳೆ
ಸುತ್ತೀನ ಸೆರ್ಗ ಸಡ್ಲಸೇ

ಮಡ್ಲಕ್ಕಿ ತುಂಬೀರೆ ಮದಗದ ಮಾಗವ್ರೀಗೆ
ಕಡಲು ಬೂಪತಿಂತಾ ಮಗಳೀಗೆ ಪೆಣ್ಣಮ್ರ್ಗೆ
ಬದೊಾ್ರ್ಕೀರೆ ತುಂಬಿದರೆ ಮಡ್ಲಕ್ಕಿ

ಮದುಮಗನ ಅಲಂಕಾರ

ಬಾಶಿಂಗದ ಮೆನೇ ಅರವತ್ತ್ರಂಟು ಗಿಳಿಕುಳತೊ
ಚಂದ್ರ ಮಾಣಿಕದ ರವೆ ಬಾದೊ ಜೋ
ಚಂದ್ರ ಮಾಣಿಕದ ರವೆ ಬಂದಾ ಬಾಶಿಂಗವ
ತಂದೇ ಬಾಂಧರೋ ಮಗನೀಗೆ ಜೋ.

ಜೋತಾರಗೆಂತ್ಯು ಬಣಜೀಗ ಮಗನೇ ಕೇಳೋ
ಜೋತುರದೊಳಗೆಲ್ಲ ಶಿವದಾರ ಹತ್ತೀದಾರ
ಒಪ್ಪೀತೋ ಮದುಮಗನ ನೆಡವೀಗೆ ಜೋ

ಉಂಗಾಲಗೆಂತ್ಯಾ ಜೊನಗಾರ ಮಗನೆ ಕೇಳೋ
ಉಂಗುರದೊಳಗೆಲ್ಲ ಚವದಾರ ಬೆಳ್ಳಿದಾರ
ಒಪ್ಪೀತೋ ಮದುಮಗನ ಬೆರಳಿಗೋ ಜೋ,

ಅರ್ತೀಗೆ ಅರಗಳಿಗೆ ಹಿಡಕೊಳೋ ಬಾಲೆಲೆ ಮಗನೆ
ಪಿರ್ತಿಗೆ ನಿನಮಡದಿ ಬರುವಾಳೋ ಜೋ
ಬಾಸಿಂಗ ಕಟ್ಟುವಲ್ಲೀ ನೂರೆಂಟು ಗಿಳಿಂಮೇ ಬಂದೊ
ಚಂದ ಚಂದ ಕುಪ್ಪರವೆ ಬಂದೊ ಮಗನೀಗೆ
ತಂದಿನ್ನೇ ಬಣ್ಣಚಿಕೋ ಮಗನಿಗೊ ಮಗನೀಗೆ
ಎಡಳೀನ ಬಾಚಿಂಗಲೀ ನಿಲಚೀರೊ

ಬಾಚಿಂಗಗೆಂತ್ಯಾ ಗುಡಗಾರ ಮಗನೆ ಕೇಳು
ಬಾಚಿಂಗದೊಳಗೆಲ್ಲ ಚವದಾರ ಚಿನ್ನದ ದಾರ
ಒಪ್ಪೀತೋ ಮದುಮಗ್ನ ನೆಡಳಿಗೋ ಬಾಲೆಲೆ ಮಗನೆ
ತೊಳಚಮ್ಮಗೆ ಕಂತ್ಯಾ ಮುಗದೆಂತೋ

ಕಟ್ಟೀದ ಬಾಚಿಂಗೋ ಉಚ್ಚೀದ ಜೋತರಮ್ಮೆ
ಂತಾರ್ಯಾಗಿಗೆ ಕಂತ್ಯಾ ಮುಗದೇಲೋ ಬಾಲೆಲೆ ಮಗನೆ
ಗಾಳಮ್ಮಗೆ ಕಂತ್ಯಾ ಮುಗದೆಂತೋ
ಹುಲಿಗಮ್ಮಗೆ ಕಂತ್ಯಾ ಮುಗದೆಂತೋ
ಕುಲದೇವರಿಗೆ ಕಂತ್ಯಾ ಮುಗದೆಂತೋ.

ಸುರಗಿಯಲ್ಲಿ ಸ್ನಾನ

ಅತ್ತೀಯ ಮಣಿಗ್ವೀಳಿ ಹತ್ತೆಂಟು ದಿನವಾದೆವಾ
ಅತ್ತೀ ಮಣಿಯಾಕೆ ಬರಲಿಲ್ಲಾ ಬಿಡಗಿನ ಮನೆಯಾ
ಹತ್ತೆಡ್ಡ ಕೊಡವಾ ತೆಗತನ್ನಿ

ಯೀಗ ತೋಡಿದ ಬಾವಿ ಯೀಗ ನೀರಿದಾಂವೋ
ನೀರಿನಾ ಕಣುಕೇ ಹರಿದಾವೊ ಮುಕ್ಯಾನೀರಾ
ಮುತ್ರೀ ನಿನ್ಮಗನಾ ಜಳುಕಕ್ಕೇ.

ಯುಂದು ತೋಡಿದ ಬಾವಿ ಯುಂದ್ವೀಗೆ ನೀರಿದಾಂವೋ
ಯುಂದೇಳು ಕಡಿಗೆ ಹರಿದಾವೋ ಮುಕ್ಯಾನೀರು
ನಾರೀ ನಿನ್ಮಗನಾ ಜಳುಕಕ್ಕೇ

ಅಂಯುದರ ಜಾಂಯುದರ ಮೂರಾಂಯುದಲ ಮಲಿಹೂಡಿ
ಶ್ರೀಗಂಧದ ಚಕ್ಕಿ ಮಲಿಗಿಟ್ಟು ಕಾದಾನೀರು
ನಾರೀ ನಿನ್ಮಗನಾ ಜಳಕಕ್ಕೇ.

ಅತ್ತೀಯವಾ ಮಣಿ ಬಂದೆವಾ ಮುತ್ತೀನ ತಂದಿಗೆ ಬಂದೆವಾ
ಹೆತ್ತವ್ವಾ ನೀರಾ ಬೆರಸಂಬೆವಾ ಅವಳ ಕೊಮರಾ
ಅತ್ಕೃದರ ನೀರಾ ಬೆರಸೆಂಬೆವಾ.

ಆಲದ ಮಣಿ ಬಂದೆವಾ ನೀಲದ ತಂದಿಗೆ ಬಂದೆವಾ
ಹಡೆದವ್ವಾ ನೀರಾ ಬೆರಸಂಬೆವಾ ನಿನಕೊಮರಾ
ಚಂದದರ ಮುಂದಾ ಉದಕವಾ

ಬಾಲಾ ಮುಂದಾ ನೀರು ಬಾಗಿಂಗೆ ಹರಿದಾವೋ
ಬಾಗೀಲ ದಾಟಿ ಮುಗುದಾಟಿ ಮುಂದ್ರಣ್ಣ
ತೋಟಕೆ ನೀರು ಹರಿದಾವೋ

ಪುತ್ರ ಬಿಂದಾ ನೀರು ಹಸ್ತಠಗೆ ಹರಿದಾವೋ
ಹಸ್ತೀಲ ದಾಟಿ ಮುಗುದಾಟಿ ಮುಂದ್ರಾಣ
ಗದೆಂಗೆ ನೀರು ಹರಿದಾವೊ

ಬಾಲಾ ಬಿಂದ ಬಂದು ಬಾಗಿಲಠ ನಿಂದಂತ್ಯಾಕನೆ
ನೋಡುವರ ದೃಷ್ಟಿಗನದಲ್ಲ ತಾಂತುವ್ವ
ಬಾಲನಾವಳಗೆ ಕರಿಬೇಗ.

<u>ಈಳಾ್ಯಕೊಡುವಾಗ(ಹೆಣ್ಣಿನ)</u>

ವುಗಳು ವದುವೆಗೆ ನೆರ್ದಾಳಿಂದೇಳಿ
ಬಾದಿದೋರ್ಗೆ ಈಳಾ್ಯ ಕೊಡುವಾನೋ
ವಾದಿದೋಗಳ ಈಳಾ್ಯ 'ಎನಂದಿ ಕೊಡುವಾನೋ
ನೀವಿಲಂ ವುದಿ್ವ ಚನ್ನಿಲಾ್ಲ,

ವುಗಳು ವದುವೆಗೆ ನೆರ್ದಾಳಿ ಅಂದೇಳಿ
ಕಂಬಾರ್ಗೆ ಈಳಾ್ಯ ಕೊಡುವನೆ
ಕಂಬಾರ್ಗೆ ಈಳಾ್ಯ 'ಎನಂದಿ ಕೊಡುವನೇ
ನೀ ಬಂದದೊತರ್ವ ವುದಿ್ವ ಚನ್ನಿಲಾ್ಲ

ವುಗಳು ವದುವೆಗೆ ನೆರ್ದಾಳಿ ಅಂದೇಳಿ
ಗುಡಗಾರ್ಗೆ ಈಳಾ್ಯ ಕೊಡುವಾನೆ
ಗಡಗಾರ್ಗೆ ಈಳಾ್ಯ 'ಎನಂದಿ ಕೊಡುವನೆ
ನೀ ಬಂದೆದೊತರ್ವ ವುದಿ್ವ ಚನ್ನಿಲಾ್ಲ ಗುಡಾ್ಗರ
ಬಾಸಿಂಗ ಬೀಗ ಬಚೀಕು.

ಈಳ್ಯಾ ಕೊಡುವಾಗ(ಗಂಡು)

ಮಗ ಮದುವೆಗೆ ಬಂದಾನೆಂದು
ವಾದಿದೋಗೇ ಈಳ್ಯಾ ಕೊಡುವಾನೋ
ವಾದಿದೋಗಳ ಈಳ್ಯಾ 'ಎನಂದಿ ಕೊಡುವಾನೋ
ನೀವಿದಂ ಮದ್ವಿ ಚಂದಿಲ್ಲಾ

ಮಗ ಮದುವೆಗೆ ಬಂದಾನೆಂದೇಳಿ
ಕುಂಬಾರ್ಗೆ ಈಳ್ಯಾ ಕೊಡುವನೆ
ಕುಂಬಾರ್ಗೆ ಈಳ್ಯಾ 'ಎನಂದಿ ಕೊಡುವನೇ
ನೀ ಬಂದಲಾತರ್ಕ ಮದ್ವಿ ಚಂದಿಲ್ಲಾ.

ಮಗ ಮದುವೆಗೆ ಬಂದಾನೆಂದೇಳಿ
ಗುಡಗಾರ್ಗೆ ಈಳ್ಯ ಕೊಡುವಾನೆ
ಗುಡಗಾರ್ಗೆ ಈಳ್ಯಾ 'ಎನಂದಿ ಕೊಡುವಾನೆ
ನೀ ಬಂದೆಲಾತರ್ಕ ಮದ್ವಿ ಚಂದಿಲ್ಲಾ ಗುಡ್ಗಾರ
ಬಾಸಿಂಗ ಬೇಗ ತರಬೇಕು.

ಇಳ್ಮಾ ಮಾಡಿಸುವಾಗ

ಒಪ್ಪಿ ಬಂದೀವೀ ಕಪ್ಪನಾರು ತಂದೀವೆ
ಬಾರೆ ನಾಯಕರಾತ ಜಗಲೀಗೆ। ಚಣ್ಣಮ್ಮನೆ
ಬಣ್ಣಕು ಡೊಂಬಕು ಅಳತೆಂತೊಲೇ।

ಒಪ್ಪಿ ಬಂದೀವೀ ಕಪ್ಪುನಾರು ತಂದೀವೆ
ಬಾರೆ ನಾಯಕರಾತ ಜಗಲೀಗೆ। ಚಣ್ಣಮ್ಮನೆ
ಚಿನ್ನಕು ಕೆದಿಗು ಅಳತೆಂತೊಲೇ।

ಒಪ್ಪಿ ಬಂದೀವೀ ಕಪ್ಪನಾರು ತಂದೀವೆ
ಬಾರೆ ನಾಯಕರಾತ ಜಗಲೀಗೆ। ಚಣ್ಣಮ್ಮನೆ
ಹೂಂಗಿಗಾ ತಲಗು ಅಳತೆಂತೊಲೇ।

ಹೂಂಗಾಲೇ ಮುಡುವಾಕೇ ಇನ್ನೇರೀ ಕರದಾನೇ
ನಿಮ್ಮಾರೀ ಅಕದೀರ ಕರುದಾನೆ। ಚಣ್ಣಮ್ಮನೇ
ಊರಾಲೇ ಗವ್ಡರ ಕರದಾನೆ। ಚಣ್ಣಮ್ಮನೇ
ಡೋದುರದಾ ಅತ್ತಿ ಕರೀದಾಳೊ। ಚಣ್ಣಮ್ಮನೇ
ದೆವಗೋಂದ ಪಲ ತಗೀದಾಳೆ। ಚಣ್ಣಮ್ಮನೇ
ಅಕದೀಗೋಂದ ಪಲ ತಗೀದಾಳೆ। ಚಣ್ಣಮ್ಮನೇ
ನೆಲ್ಲಗೊಂದ ಪಲ ತಗೀದಾಳೆ। ಚಣ್ಣಮ್ಮನೇ
ತಾನೊಂದೇ ಪಲ ಮುಡೀದಾಳೆ।

ಚಣ್ಣಕ್ಕಿ ಚಾಡೀ ಚಲ್ಲಾಡೀ ತುಂಬೀರೋ
ಎಲ್ಲ ಮುಲುಲ್ಲಗಿಂಯಾ ಮುಡೀದಾರೋ। ಅಕದೀರ
ಚಲ್ಲಾಡೀ ತುಂಬೀರೋದವದಲ್ಲೋ।

ಆರತಿ

ದಿಬ್ಬೀ ಮಣಿಗಳು ತೋಳುಮಣಿಗಳು
ಶಾವಿಲೀ ಶಂಕ್ರಗೆ ಬೂದಿ ಪುತ್ರಗೆ। ಬೂದಿಹರಶಂಗೆ
ತುಪ್ಪದಾರತಿಯೂ ಗಂಟೀದಾಳೋ ಕೋ

ಹಿಬ್ಬೀನಾರತಿಯೂ ಗಂಟೂಂಳೋ ನಿನ್ನಾಲೀಲತ್ತಿ
ಅದು ಬಂದೋ ಶಾರೀ ಮು — ರಿಂಟುಲ್ಲೀ ಕೋ

ಅದು ಬಂದೋ ಶಾರೀ ಮುರಿಯುಲ್ಲಿ ತುಪ್ಪದಾರತಿಯೋ
ತೋಳುಡಮ್ಯಗೆ ಮೋದಲೀ ಬಳುಗ್ಯಾಳಿಯಾ ಕೋ

ತೋಳುಡಮ್ಯಗೆ ಮೋದಲೀ ಬಳುಗ್ಯಾಳೋ ತುಪ್ಪದಾರತಿಯೂ
ಅದು ಬಂದೋ ಕನ್ನೀ ಮುಗೂಳಿಗೆ ಕೋ

ಅದು ಬಂದೋ ಕನ್ನೀ ಮುಗುಳಿಗೆ ತುಪ್ಪದಾರತಿಂಟೂ
ಕೆನ್ನೆಗಿಂದು ಕೆಳಗೆ ಬಳೂಗ್ಯಾಳಿಯಾ ಕೋ

ಕೆನ್ನೆಗಿಂದು ಕೆಳಗೆ ಬಳುಗ್ಯಾಳಿಯಾ ತುಪ್ಪದಾರತಿಯೋ
ತಾಗೀದೊಂದ ದಿಟ್ಟ ತಗೀದಾಳಿಯಾ ಕೋ

ತಾಗೀದೊಂದ ದಿಟ್ಟ ತಗಿದಾಳೋ ನಿನ್ನಾಲೀ ತಾಂಟುವ
ಆಗೊಂದೀ ಬಟ್ಟಂಡೀದಾಳೋ ಕೋ.

ಧಾರಿ

ಯಾರೀಗೆ ಹುಟ್ಟೀದೆ ಯಾರೀಗೆ ಬೆಳದಿದಿಯೇ
ಯಾರ ಲಂಬಲವ ನೆನದಿದಿಯೇ।

ತಾಯೀಗೆ ಹುಟ್ಟೀದೆ ತಂದೆಗೆ ಬೆಳೆದಿದನೊ
ನೆಲ್ಲನ ಹಂಬಲವ ನೆನದಿದನೊ।

ಯಾರೀಗೆ ಹುಟ್ಟೀದೆ ಯಾರೀಗೆ ಬೆಳದಿದಿಯೇ
ಯಾರು ತಂದಹೂವ ಮುಡಿದಿದೆಯೇ।

ತಾಯೀಗೆ ಹುಟ್ಟೀದೆ ತಂದೆಗೆ ಬೆಳದಿದನೊ
ನೆಲ್ಲ ತಂದಹೂಂಗ ಮುಡಿದಿದೆನೋ।

ಯಾರೀಗೆ ಹುಟ್ಟೀದೆ ಯಾರೀಗೆ ಬೆಳದಿದಿಯೇ
ಯಾರು ತಂದಬಣ್ಣ ಉಡುದೀಯೇ।

ತಾಯೀಗೆ ಹುಟ್ಟೀದೆ ತಂದೆಗೆ ಬೆಳೆದಿದನೊ
ನೆಲ್ಲ ತಂದಬಣ್ಣಾ ಉಡುವೆನೊ।

ಯಾರೀಗೆ ಹುಟ್ಟೀದೆ ಯಾರೀಗೆ ಬೆಳದಿದಿಯೇ
ಯಾರು ತಂದ ಚಿನ್ನ ಇಟ್ಟದಿಯೊ।

ತಾಯೀಗೆ ಹುಟ್ಟೀದೆ ತಂದೆಗೆ ಬೆಳದಿದನೊ
ನೆಲ್ಲ ತಂದ ಚಿನ್ನಾ ಇಟ್ಟದೆನೊ।

ಶೀತೆಯುದೆಯಾಂಲಿನ್ಗ ಚಿಂತಕ ಯಾತಕೇ
ಶೀತೆ ಚಿಣ್ಣವಳೋ ಒಳಗಿಂದೇ। ಹೊರಗೇ ಬರುವಾಗೇ
ಶಿಂತಕ ಹೊಳೆದಾಂಗೆ ಹೊಳೀದಾಳೊ।

ದಾರಿ ಎರಿಂಯಾಕೆ ಯಾವ ಶೀಮೆ ಜಲದೀಬೇಕೋ
ಹಂಪಿನಾಡ ಹೊಸ ಜಲದಿ। ತಡದೇಲೇ
ಅಪ್ಪಟ್ಟ ದಾರೀಗೆ ಇಳೀದಾರೊ.

ದಾರಿ ಎರಿವಾಗೇ ಯಾವಪ್ಪ ಹಸಿದಾನೋ
ದಾರಿಲಿ ಕಂಕಣದಾ ಹರೀಯಪ್ಪ। ಹಸಿದಾರಿ
ಹಸಿದಿನ್ನೇ ದಾರಿ ಎರವಾನೋ।

ದಾರಿ ಎರವಾಕೆ ಯಾವ ತಾಯಿ ಹಸಿದಾಳೇ
ದಾರಿ ಕಂಕಣದಾ ಹರೀತಾಯಿ। ಹಸಿದಾರಿ
ಹಸಿದಾಲೀ ದಾರಿ ಎರವಳೋ।

ದಾರಿ ಎರಿವದು ಗಂಡಿ ಮೋರೆ ತೊಳವದು ಗಂಡಿ
ಪುಣಾಗ್ಗಳ್ಳರುಗಂಡಿ ಹದಿಮಯ್ಯುಂ। ತಡದೀಕಂಡೇ
ಹಾಲಲ್ಲೀ ದಾರಿ ಎರೀದಾರೋ।

ಆತನ ಕಯ್ಯತೊಗೆ ಶೀಲಿಯು ಕಯಿನೆಡಗಿ
ಶೆಣ್ಣ ಶಕ್ಕರವೇ ಎಡನೆಡಗೆ। ಇಬ್ಬೀಕಂಡಿ
ಹಾಲೊಯ್ಯ ದಾರಿ ಎರದೀನೋ। ನಿನ್ನಾ ಮಾವಾನೆ
ನೀರೊಯ್ಯೇ ಕಯ್ಯಾ ತೊಳದೀನೋ। ನಿನ್ನಾ ಮಾವನೆ
ಊರಾ ಉಪ್ಪಾರರ ಕರದೀನೋ। ನಿನ್ನಾ ಮಾವನೆ

ಕನ್ನೆ ಹೆಣ್ಣಿನ ಪುಣ್ಯ ಪಡೀದಾರೋ
ದಾರಿಗೆ ಬಂದಾಕಯ್ಯ ತೊಳದೇ ಕೊಡವಾಳೋ
ದಡಬೇಡ್ವೋ ರಾಯು ತಡಕೊಳೇ। ನಿನ್ನಾ ಮಡದೀನೆ
ಮೂರು ಮಾಣಿಕದ ಹರಳತಡೋ। ಬೆರಳತಡೋ
ಗೆದೆಂ ಅಂದ ಬೀತೇ ಕಯ್ದಡೋ।

ಅಕ್ಕಿ ಒದೆಯುವಾಗ

ಈಡೆ ಕತ್ತಲಾ ದೀಪ ಈಡೆ 'ಒರಯದ ಮಲ್ಲೆ
ಮೆಲ್ಲನೆ ನಿನ್ನಾ ಬಲಗಾಲ ಮುಂದಿಟ್ಟು
ನಲ್ಲನ ಮಾಳಗ್ಗೇ ಮನದುಂಬೀ

ಹೆಬ್ಬಾಗಲಲ್ಲಿ ಹಬ್ಬದವೇ ರತಿಬಳ್ಳಿ
ಗಿಜ್ಜೀಯ ಕಾಲಾ ಸೊಸ ಬಂದು ಹೊಕ್ಕುವಂಗೆ
ಅಬ್ಬರದಿ ಕಾಳೀ ನುಡೀದಾವೆ.

ಬಾಗಲ ಪೂಜ್ಯನ ಮಾಡೀ ಬಾಲನ ಪಡದೀರೆ
ಬಾಲಗೇ ಒಪ್ಪೊ ಮಡದೀಯ ತಂದಾನೇ
ಬಂದೀ ನೋಡೆ ನಿನ್ನಾ ಸೊಸೆ ಮುದ್ದು

ಹಲಸೀನ ಮರತಟ್ಟು ತರಸಿರಿ ಕಯ್ಯೀವಿಗಿಯ
ಅರಸೀಯ ಕಾಣ ಜನರೆಲ್ಲ ನಿನ್ನಲು ಮಗ
ಅರಸೀ ಕಯ್ತಡದೇ ಬರತ್ತಾನೆ

ಒಳಗಿದಂ ಅತ್ತೀಯಮ್ಮ ಒಳಗೀನ ಮಾಡುತೆ
ಸೊಸ ಬಂದೀ ಬಾಳೂ ತಡವಾದೊ ಅತ್ತೀಯಮ್ಮ
ಸೊಸಿಯಾ ಮಾಳಗ್ಗ ಬರವೇಳೆ

ಮುತ್ತು ಬಂತೇ ಮನೆಗೇ ಮಾಣಿಕ ಬಂತೇ ಮನಗೇ
ಅಕ್ಕಂದೇ ತೊಳಿಯೇ ಸೆರಿಹೊನ್ನು ಅತ್ತೀಯಮ್ಮ
ನೀರಂದೇ ಚೆಲ್ಲೀ ನೊರಿಹಾಲ.

ಹಸೆಮಣೆ ಶಾಸ್ತ್ರ

ಮಾಳ್ಯಾಗಿ ಹೋಗುವಾಕೇ ಯಾಕಾಲ ಮುಂದಿಟ್ಟದಿಯೋ
ಜೋತುರುಷ್ಟ ಕಾಲು ಬಲಗಾಲು। ಮುಂದಿಟ್ಟ
ಮಾವನಾ ಮನೆಂತ್ಯಾ ಒಳಗೋಗೋ।

ಮಾವನ ಮನೆಂತ್ಯಾ ಒಳಗೋಗೋ ಮಾವನ ಮಗನೋ
ಬಲಗಾಂಗೆ ಬಾಗೀ ಬರ್ಯಾವದೊ। ಮಾವನ ಮಗನೊ
ಎಡಗಾಂಗೆ ಶಿರಿಂತ್ಯಾ ಬರುವದೊ। ಮಾವನ ಮಗನೊ
ಶಿರಿಕರಶ್ಣ ಬೆನ್ನೀಗೆ ಬರೋವಾನೊ। ಮಾವನ ಮಗನೊ
ಶಿರಿ ಬಂದೇ ಒಳಗೇ ಒಂದಾವೊ। ಮಾವನ ಮಗನೊ
ಮಾಲಕುಂತು ಕಂತ್ಯಾಕ ಹಿಡೀದಾವೊ।

ಮಾಳ್ಯಾಗಿ ವಳಗೋಗ್ಯಾವಾಗ ಯಾಕಾಲ ಮುಂದಿಟ್ಟದಿಯೋ
ಬಣ್ಣ-ಮಟ ಕಾಲೇ ಬಲಗಾಲೇ। ಮಾದುಲು ಮಗಳೆ
ಬಲಗಾಲಲೆ ಬಾಗೀ ಬರುವಾದೊ। ದಣ್ಣಮ್ಮನೆ
ಎಡಗಾಲಲೆ ಬಿರಿಂತೇ ಬರುವದೊ। ಬಾಲೆಲೆ ಮಗುಳೆ
ಮಾಲಕೆ ಡ್ಯಾವೀ ಬಂದೊ ಬಲನಂ।

ಮಾಲ್ಯಾಗಿ ಒಲುಗೇ ಶುವಮ್ಮನೆ ಕುಲುಕುತ ಬಾಲ
ನೀರು ನೀರೆಂದೀ ಏನಾ ಬೇಡ। ಬಾಲಂತ್ಯನೇ
ನೀರಿಲ್ಲ ನೀಲಡ ನೆಲಗಟ್ಟ।

ಮಾಲ್ಯಾ ಒಲುಗೇ ಡುವಮ್ಮನೆ ಕುಲುಕುತ ಬಾಲ
ಗೊಡಿಮನೆ ನೋಡೋ ಗಿಂಗೋಲೆ। ಬಾಲಂತ್ಯನೆ
ಗುಡುಗಾರನ ಹರಿಂತ್ಯಾ ಬರದೀರು

ಗುಡುಗಾರನ ಹರಿಂತ್ಯಾ ಬರವಕೆ ಬಾಲಂತ್ಯನೆ
ಗುಡುಗಾರ ನಮ್ಮ ನೆರಿಂತುಲುವೋ। ಬಾಲಂತ್ಯನೆ
ನಾಕಲ್ತ್ರೆ ನಾನು ಬರದೀನೋ।

ಬೇಡೀಯ ಹೂಗ್ಗೆಬ್ಬ ರೊಡಿಯಂ ತಡುಕಂಡೇ
ಪತಿಯರಕು ಪಾರಪತಿ ಬರದೀನೋ। ಬಾಲಯನೆ
ಪತಿಯರಕೆ ದೂಲೀ ಬರದೀನೋ। ಬಾಲಯನೆ
ಹದವಂತರ ಮರುವೇ ದಡೂಬೀನೊ। ಬಾಲಯನೆ
ಬುಡುತಲುಕೆ ಕಟ್ಟ ದಡೂಬಿನೋ। ಬಾಲಯನೆ
ಮುತ್ತ ಶುರುವೀನೋ ಎಲೆಗೊಂದು।

ಚಿಕೆಚಿಕೆ ಚಂಪೂಗೆ ಮೊಕೆ ಮೊಕೆ ಮಲಲ್ಲೂಗೆ
ಚಿಕಿಯಲಿಲ್ಲೋ ಮಾವನೋರ ಮನೆಯೊಲುಗೆ। ಬಾಲಯ್ಯನೆ
ದೀಪು ದೀಪಣಗಿ ಮರತೇ ಬಂದೇ। ಬಾಲಯ್ಯನೆ
ಬೆಲಗಾದರೆ ದೀಪಣಗಿ ತರೂಪುಲಿ।

ಯಾಲಕ್ಕಿ ಹೊಡಿಲೂಡಿ ಎಲೆಸೂಟಿ ಪುಡಿಮಾಡಿ
ಅರಕೊಡು ನೀರಿಗೆ ಹದಮಾಡು। ಲತ್ತೀಯಮ್ಮ
ಬಂದಂತ ದೀಗರಿಗು ಕೊಡಬೇಗೆ।

ತಮ್ಮ ನಿಮ್ಮತ್ತೆಯೋ ಅಡ್ಡ ಮುತ್ತಯ್ಯಯೋ
ಕೆನ್ನೆಗಿಂತು ಮನೆ ಚಿಗೆಮುತ್ತು: ಶೀರಿಶಿಕಂಡೇ
ರಡನಾಲೇ ಕೆ[illegible]ಮಯು ತಡದೀಲು: ನಿನ್ನತ್ತೀಯು
ಚೀರ ಚಕ್ಕರಿಯೀ ತಡದೀಲು: ನಿನ್ನತ್ತೀಯು
ಅರಿಯನ ಕಯ್ಯಲ್ಲೀ 'ಎನಂದೇ ಕೊಡಲೀಲು

ಅರಿಯನ ಕಯ್ಯಲ್ಲೀ 'ಎನಂದೇ ಕೊಡಲೀಲು
ಒಬ್ಬನೆ ನೀನೂ ಮೆಲೂಬೆಡಾ। ತಮ್ಮಯ್ಯನೇ
ಅಕ್ಕ ತಂಗಿಡೀರು ಅಯ್ವರು। ಅಯುವರು
ಹಚ್ಬಾಡೇ ನೀವ್ವಾ ಮೆಲೂಬೇಕು।

ಅತ್ತೀರ ದರ್ಗದ ಮೆನೆ ಮುತ್ತಿನ ಶದರದ ಮೆನೆ
ಗೊಡಿಗಂಬ್ಬಿಯಾ ದಡಶೀರೋ: ಮಾವನ ಮಗನೊ
ಸಕ್ಕರು ಗಾರೊಯೋ ಕುಡಬೇಕೋ: ಮಾವನ ಮಗನೊ
ಹೊನ್ನೊಲಿ ಎಣ್ಣಶುತೇ ಕುಳ್ಳತೆಯೋ: ಮಾವನ ಮಗನೊ
ಮಾನಮಾನ ಕಡೆಗೇನ ನುಡದೆಯೊ:

ಕೇಳಲಿಯಾ ಕೇಳಿಲಿಯಾ ಮಾವಾನೆ ನೀನಲಿ ಕೇಳಿಯೋ
ಎಲವಸ್ತ್ರ ದುರ್ಗ ನಿನಗಂದ। ಮಾವನ ಕುಡಿಗ
ಕೆರಿಂತಲು ದೇವರಿಂತು ತನಗಂದಾ। ಮಾವನ ಕುಡಿಗ
ನೆರಿದಲು ಕನ್ನೆ ತನಗಂದ।

ಹದಮಾ ಹಡೆದಿನ 'ಎನೆಂಜಲಾದಾವೋ
ಹಾಲೆಂಜಲಾದಯಾ ಹಡೆದುನೆ। ಮದುವುಗನೆ
ನೀನುಂಡಿ ಬರಿವುತದೀಗ ಕೊಡುಲೆಂತಿಯೋ। ಮದುವುಗನೆ
ಮುಡದುಂಕೇ ಬರಿಂತೋಗಳ ಕೊಡುವಾಳಿಯಾ। ಮದುವುಗನೆ
ನೀನುಂಡೇ ಬಾಂತಾರಿ ತೊಳೇದೆಂತಿಯೋ। ಮದುವುಗನೆ
ಮುಡದುಂಡೇ ಬಾಂತಾರೀ ತೊಳೇದಾಳಿಯಾ।

ಬಾಗಿಲು ತಡೆಯುವುದು

ದೊಡ್ಡುರೇ ಅಕ್ಕಗೇ ದೊಡ್ಡ ಕಾಲುಂಗಿಲ
ಶಾನುಂತ್ರಿಗೆ ದಂಡೇ ಕೆಬಿದುಂಬೇ। ಮುಡಿದ್ದೇಕಂಡೇ
ದೊಡ್ಡಕ್ಕ ಬಾಗೀಲ ತಡಿದಾಳೆ

ಬಾಗೀಲ ತಡದಕ್ಕ ಬಾಗಿ ಬಳುವ್ಳಿ ಕೊಡುವೆ
ಹಳೆಯೋರುಂಬಳಿ ಬರಕೊಡುವೆ
ಉಂಬಳಿ ಬೂಮಿ ನಿನರಂಬೆಗೆ ಉಳಿಯಲೋ
ಹೆಣ್ಣರೇ ಕೊಡೊ ತಮ್ಮ ಮಗರಾಯಗೆ

ಹಂಪಿ ಅಂಗ್ಡೀಲಿ ರಸಬಾಳೆ ತಂದೀತೆ
ಹಜದಿರುವಲಕ್ಕ ಮೇಲೇರೀಬಾರೆ
ರಸಬಾಳೆ ಹಣ್ಣು ಹಜದಾಲಿ ಮಡದೀಗಿರಲೋ
ಹೆಣ್ಣು ಕೊಡೊ ತಮ್ಮ ಮಗರಾಯಗೆ

ಹೆಣ್ಣ ಕೊಡುವಕೆ ಹೆಂಗೆಲೆ ಮಾಡಲೆ ಅಕ್ಕ
ಕನ್ನೀ ತಂದೀನೇ ಬಲೂ ಚೆನ್ನು। ಅಕ್ಕ ಕೇಳೇ
ಹೆಣ್ಣುಬ್ಬದರೆ ಅಕ್ಕ ನಿನಗಿರಲೇ। ಅಕ್ಕಕೇಳೇ
ಗಂಡುಬ್ಬದರೆ ಹಿರಿಯೋರ ಹೆಸರಾದೊ। ಅಕ್ಕಕೇಳೆ
ಹಳೆಯೋರೊಂದ್ದರೇ ಹೊಗಳಾರೇ।

ಇಂದಾ ಮಾತಕೊಟ್ಟೇ ನಾಳೆಕೆಕೊಡೆನೆಂಬೆ
ಹಂದರದಲ್ಲಿರುವ ಹಾಲುಗಂಬ ಸಾಕ್ಷಿ। ಬಂದಾ ಜನ ಸಾಕ್ಷಿ
ನನತಮ್ಮ ನನಗ್ಹೆಣ್ಣ ಕೊಡತ್ಕಂದ

ಅಟ ಆಡಿಸುವಾಗ

ಸಾಣಾಗಲ್ಲಿನ ಮೇಲಿ ಜಾಣಾರು ಪಗುಡಿ ಹೂಡಿ
ಸಾಣಾಗಲ್ಲುಡದೀ ಸಿಗುರೆದಿಂ: ಈವಾರ
ಜಾಣಾರೂಡವ್ರ ಪಗುಡೇಂತು:

ಮಾವನ ಮನೆಂತು ಮುಗುಳು ಮಂಟಪದಲ್ಲಿ
ಜನರು ಕುಳ್ತಲ್ಲಿ ತಳವೆಲ್ಲಾ: ತಾಂತುವ್ವ
ಹ್ಯಾಂಗಾಡಲಿ ತಾಂತೋ ಪಗೂಡಿಂತು

ಕಿರುಕೇನ ಬಚ್ಚೀಗೆ ಕಿರುಮುದ್ರ ದುಂಗೀಲಾ
ತಿದಾಂಡೋ ಮಗನೆ ಪಗೂಡಿಂತೂ: ಮಾವಂತ್ಯನೆ
ಸೋತೆನಂದೆ ಮಗುಳಾ ಕೊಡೂವಾನೊ:

ಕರಿಂತೊಲಿ ನಿನ್ನಾ ಕರದು ಕಾರಣವೇನು
ಬೆಳಿಂತೊಲಿ ನಿನ್ನಾ ದಿಗಿ ಬಾಳು: ನಮತಮ್ರ
ಸ-ದಿಂತುಲ್ಲಿ ಕುಂತವನೆ ಬೆಳುತಂಕ:

ನಿರೂಪಕರ ವಿವರ:

1. ಅಂಜಿನಮ್ಮ, w/o ಉಪ್ಪಾರ ಅಳ್ಳಪ್ಪ, ವಯಸ್ಸು 43
ಪಾಪಿನಾಯಕನ ಹಳ್ಳಿ, ಹೊಸಪೇಟೆ ।ತಾ। , ಬಳ್ಳಾರಿ ಜಿಲ್ಲೆ.

2. ಅಳ್ಳಪ್ಪ ಉಪ್ಪಾರ, ವಯಸ್ಸು 55
ಪಾಪಿನಾಯಕನ ಹಳ್ಳಿ, ಹೊಸಪೇಟೆ ।ತಾ। , ಬಳ್ಳಾರಿ ಜಿಲ್ಲೆ.

3. ಎರಿಸ್ವಾಮಿ, ವಯಸ್ಸು 20
ಅನಂತಶಯನ ಗುಡಿ, ಹೊಸಪೇಟೆ ।ತಾ। .

4. ಕೆಂಚಪ್ಪ, ವಯಸ್ಸು 41
ಮಲಪನಗುಡಿ, ಹೊಸಪೇಟೆ ।ತಾ। , ಬಳ್ಳಾರಿ ಜಿಲ್ಲೆ.

5. ಕರಿಗುಡ್ಡದ ಎಲ್ಲಪ್ಪ, ವಯಸ್ಸು 55
ಕೋಸಿಗಿ, ಆದೋನಿ ।ತಾ। , ಕರ್ನೂಲ ಜಿಲ್ಲೆ,
ಆಂಧ್ರಪ್ರದೇಶ.

6. ಗಾಳಪ್ಪ, ವಯಸ್ಸು 52
ಮಲಪನಗುಡಿ, ಹೊಸಪೇಟೆ ।ತಾ।, ಬಳ್ಳಾರಿ ಜಿಲ್ಲೆ.

7. ತಿಮ್ಮಕ್ಕ, ವಯಸ್ಸು 40
ಹಿರೇಕೊಳಚಿ, ಹೊಸಪೇಟೆ ।ತಾ। , ಬಳ್ಳಾರಿ ಜಿಲ್ಲೆ.

8. ನವಣಿಪ್ಪ, ವಯಸ್ಸು 58
ಮಲಪನಗುಡಿ, ಹೊಸಪೇಟೆ ।ತಾ। , ಬಳ್ಳಾರಿ ಜಿಲ್ಲೆ.

9. ನಾಗಮ್ಮ, ವಯಸ್ಸು 35
ಅನಂತಶಯನ ಗುಡಿ, ಹೊಸಪೇಟೆ ।ತಾ। , ಬಳ್ಳಾರಿ ಜಿಲ್ಲೆ.

10. ನಾಗೇಂದ್ರಪ್ಪ ಟಿ.ಬಿ. ವಯಸ್ಸು 45

ಚಿರಸ್ತಹಳ್ಳಿ, ಹರಪನಹಳ್ಳಿ ।ತಾ। , ಬಳ್ಳಾರಿ ಜಿಲ್ಲೆ.

11. ನೀಲಕಂಠ, ವಯಸ್ಸು 28

ಅನಂತಶಯನ ಗುಡಿ, ಹೊಸಪೇಟೆ ।ತಾ। , ಬಳ್ಳಾರಿ ಜಿಲ್ಲೆ.

12. ಪಕೀರಮ್ಮ, ವಯಸ್ಸು 56

ಮಲಪನ ಗುಡಿ, ಹೊಸಪೇಟೆ ।ತಾ। , ಬಳ್ಳಾರಿ ಜಿಲ್ಲೆ.

13. ಪರಶುರಾಮ, ವಯಸ್ಸು 29

ಕಾಮಲಾಪುರ, ಹೊಸಪೇಟೆ ।ತಾ।, ಬಳ್ಳಾರಿ ಜಿಲ್ಲೆ.

14. ಬಡಿಗೇರ ಮೂನಪ್ಪ, ವಯಸ್ಸು 45, ಅಕ್ಕಸಾಲಿ

ಪಾಪಿನಾಯಕನ ಹಳ್ಳಿ, ಹೊಸಪೇಟೆ ।ತಾ। , ಬಳ್ಳಾರಿ ಜಿಲ್ಲೆ.

15. ಮಲ್ಲಿಕಾರ್ಜುನ ವೈ. ವಯಸ್ಸು 28, (ನಾಯಕ)

ಅನಂತಶಯನ ಗುಡಿ, ಹೊಸಪೇಟೆ ।ತಾ। , ಬಳ್ಳಾರಿ ಜಿಲ್ಲೆ.

16. ಮಲ್ಲಿಕಾರ್ಜುನ, ವಯಸ್ಸು 28

ಕಾಮಲಾಪುರ, ಹೊಸಪೇಟೆ ।ತಾ। , ಬಳ್ಳಾರಿ ಜಿಲ್ಲೆ.

17. ಮೂಕಪ್ಪ, ವಯಸ್ಸು 35

ಹಿರಿಹಡಗಲಿ, ಹೂವಿನ ಹಡಗಲಿ ।ತಾ। , ಬಳ್ಳಾರಿ ಜಿಲ್ಲೆ.

18. ರಾಮಪುರದ ಹನುಮಂತಪ್ಪ, ವಯಸ್ಸು 47, (ನಾಯಕ)

ಉಕ್ಕಡಕೇರಿ, 13ನೇ ವಾರ್ಡ, ಹೊಸಪೇಟೆ ।ತಾ।, ಬಳ್ಳಾರಿ ಜಿಲ್ಲೆ.

19. ಲಿಂಗಮ್ಮ, ವಯಸ್ಸು 80

ಅಮರಾವತಿ, ಹೊಸಪೇಟೆ.

20. ವೀರಮ್ಮ, W/o ವೀರೇಶ, ವಯಸ್ಸು 23
ಕೊಸಗಿ, ಆದೋನಿ ।ತಾ।, ಕರ್ನೂಲ ಜಿಲ್ಲೆ.
ಆಂಧ್ರಪ್ರದೇಶ.

21. ವೀರೇಶ, ವಯಸ್ಸು 28
ಪಾಪಿನಾಯಕನ ಹಳ್ಳಿ, ಹೊಸಪೇಟೆ ।ತಾ।, ಬಳ್ಳಾರಿ ಜಿಲ್ಲೆ.

22. ವೆಂಕೋಬ, ವಯಸ್ಸು 35
ಹಿರೆಹಡಗಲಿ, ಹೂವಿನ ಹಡಗಲಿ ।ತಾ।, ಬಳ್ಳಾರಿ ಜಿಲ್ಲೆ.

23. ಶಿವಲಿಂಗಯ್ಯ ಸ್ವಾಮಿ ಎಮ್., ವಯಸ್ಸು 56 (ಅಯ್ಯನವರು)
ಪಾಪಿನಾಯಕನ ಹಳ್ಳಿ, ಹೊಸಪೇಟೆ ।ತಾ।, ಬಳ್ಳಾರಿ ಜಿಲ್ಲೆ.

24. ಶ್ರೀನಿವಾಸ ಕೆ., ವಯಸ್ಸು 31, ಕಮ್ಮಾರ
ಅನಂತಶಯನಗುಡಿ, ಹೊಸಪೇಟೆ ।ತಾ।, ಬಳ್ಳಾರಿ ಜಿಲ್ಲೆ.

25. ಸಕ್ಕರಪ್ಪ, ವಯಸ್ಸು 38
ಮಲಪನ ಗುಡಿ, ಹೊಸಪೇಟೆ ।ತಾ।, ಬಳ್ಳಾರಿ ಜಿಲ್ಲೆ.

26. ಸುಬ್ರಹ್ಮಣ್ಯ, ವಯಸ್ಸು 45
ಪಾಪಿನಾಯಕನ ಹಳ್ಳಿ, ಹೊಸಪೇಟೆ ।ತಾ।, ಬಳ್ಳಾರಿ ಜಿಲ್ಲೆ.

27. ಹನುಮಂತಪ್ಪ ಉಪ್ಪಾರ, ವಯಸ್ಸು 70
ಅನಂತಶಯನ ಗುಡಿ, ಹೊಸಪೇಟೆ ।ತಾ।, ಬಳ್ಳಾರಿ ಜಿಲ್ಲೆ.

28. ಹನುಮಂತಪ್ಪ, ವಯಸ್ಸು 21
ಹೊಸಹಳ್ಳಿ, [illegible], ರಾಯಚೂರು.

29. ಹನುಮಂತಮ್ಮ, W/o ಹನುಮಂತಪ್ಪ, ವಯಸ್ಸು 38, (ನಾಯಕ)
ಉಕ್ಕಡ ಕೇರಿ, 13ನೇ ವಾರ್ಡ, ಹೊಸಪೇಟೆ ।ತಾ।, ಬಳ್ಳಾರಿ ಜಿಲ್ಲೆ.

30. ಹನುಮಂತಮ್ಮ, ವಯಸ್ಸು 38

ಮಲಪನ ಗುಡಿ, ಹೊಸಪೇಟೆ ।ತಾ। , ಬಳ್ಳಾರಿ ಜಿಲ್ಲೆ.

31. ಹನುಮೇಶ, ವಯಸ್ಸು 39

ಪಾಪಿನಾಯಕನ ಹಳ್ಳಿ, ಹೊಸಪೇಟೆ ।ತಾ। , ಬಳ್ಳಾರಿ ಜಿಲ್ಲೆ.

32. ಹುಲಿಗಮ್ಮ, W/o ಉಪ್ಪಾರ ಹನುಮಂತಪ್ಪ, ವಯಸ್ಸು 50

ಅನಂತಶಯನ ಗುಡಿ, ಹೊಸಪೇಟೆ ।ತಾ। , ಬಳ್ಳಾರಿ ಜಿಲ್ಲೆ.

ಕರೆಯೋಲೆ



॥ ಶ್ರೀ ಉರುಕುಂದೆ ಈರೇಶ್ವರಾಯ ನಮಃ ॥

ಕಲ್ಯಾಣ ಮಂಟಪಾರೂಢೌ । ಪಾರ್ವತಿಪರಮೇಶ್ವರೌ ।
ದಿವ್ಯಾಲಂಕರಣೋಪೇತೌ । ರಕ್ಷಿತಾಂಚ ವಧೂ-ವರೌ ।

ವಿವಾಹ ಮಹೋತ್ಸವ ಆಹ್ವಾನ ಪತ್ರಿಕೆ

ಸ್ವಸ್ತಿ ಶ್ರೀ ವಿಜಯಾಭ್ಯುದಯ ಶ್ರೀಮನ್ನೃಪ ಶಾಲಿವಾಹನ ಶಕೆ ೧೯೧೫ ನೇ ಶ್ರೀಮುಖನಾಮ ಸಂವತ್ಸರದ ಮಾಘ ಬ॥
ತ್ರಯೋದಶಿ ತಾ॥ **10-3-1994** ಗುರುವಾರ ಉದಯ ಗಂಟೆ 10-02 ರಿಂದ 12-50 ರ ವರೆಗೆ ಸಲ್ಲುವ
ಮೇಷ ಲಗ್ನದ ಶುಭ ಮುಹೂರ್ತದಲ್ಲಿ ಮಾಂಗಲ್ಯಧಾರಣೆ (ಅಕ್ಷತಾರೋಹಣ)

ಹೊಸಪೇಟೆ ತಾ॥ ಪಾಪಿನಾಯಕನಹಳ್ಳಿ ಗ್ರಾಮ ನಿವಾಸಿ
ಶ್ರೀ ಜಾನೇಕಲ್ಲು ಉಪ್ಪಾರು ಹಳ್ಳಪ್ಪ ಇವರ ಸುಪುತ್ರ

ಚಿ॥ ವೀರೇಶ

ಎಂಬ ವರಶ್ರೇಷ್ಠನಿಗೆ

卐

ಆದವಾನಿ ತಾ॥ ದೊಡ್ಡ ಕೋಸಿಗಿ ಗ್ರಾಮ ನಿವಾಸಿ
ಶ್ರೀ ಉಪ್ಪಾರು ಕರೆಗುಡ್ಡದ ಯಲ್ಲಪ್ಪ ಇವರ ಸುಪುತ್ರಿ

ಚಿ॥ ಕಂ॥ ಸೌ॥ ವೀರಮ್ಮ

ಎಂಬ ಕನ್ಯಾಮಣಿಯನ್ನು

ಇವರ ವಿವಾಹ ಮಹೋತ್ಸವವನ್ನು ಹೊಸಪೇಟೆ ತಾಲೂಕು ಪಾಪಿನಾಯಕನಹಳ್ಳಿ ಗ್ರಾಮದ ನಮ್ಮ ಸ್ವಗೃಹದಲ್ಲಿ
ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುತ್ತಾರೆ ಕಾರಣ ತಾವುಗಳು ಈ ಶುಭ ಕಾರ್ಯಕ್ಕೆ
ಸಹಕುಟುಂಬ ಪರಿವಾರ ಸಮೇತರಾಗಿ ಆಗಮಿಸಿ ವಧೂ - ವರರನ್ನು ಆಶೀರ್ವದಿಸಿ
ಫಲ-ತಾಂಬೂಲಾದಿಗಳನ್ನು ಸ್ವೀಕರಿಸ ಬೇಕಾಗಿ ಕೋರುವ.

ತಮ್ಮ ಆಗಮನಾಭಿಲಾಷಿಗಳು.

ಶ್ರೀಮತಿ ಮತ್ತು ಶ್ರೀ ಉಪ್ಪಾರು ಹಳ್ಳಪ್ಪ

ಪಾಪಿನಾಯಕನಹಳ್ಳಿ (ಹೊಸಪೇಟೆ ತಾ॥)

ಸ್ವಾಗತ ಬಯಸುವವರು : ಕುಲಬಾಂಧವರು ಮತ್ತು ಬಂಧು-ಮಿತ್ರರು,

ರಾಯರ್ ಹೊಸಪೇಟೆ

ಪರಾಮರ್ಶನ ಗ್ರಂಥಗಳು:

1. ಅಂಬಳಿಕೆ ಹಿರಿಯಣ್ಣ, 1978. 'ಮಲೆನಾಡ ಜನಪದ ಸಂಪ್ರದಾಯಗಳು' ಮೈಸೂರು: ಪ್ರಜ್ವಲ ಪ್ರಕಾಶನ.

2. ಅಂಬಳಿಕೆ ಹಿರಿಯಣ್ಣ, 1993. 'ಕಬ್ಬಲಿಗರ ಸಂಸ್ಕೃತಿ', ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ.

3. ಕೃಷ್ಣಮೂರ್ತಿ ಹನೂರು, 1993. 'ಮ್ಯಾಸ ಬೇಡರ ಸಂಸ್ಕೃತಿ', ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ.

4. ಕೆಮ್ತೂರು ರಘುಪತಿಭಟ್ಟ, 1979. 'ತುಳುನಾಡಿನ ಸ್ಥಳನಾಮಗಳು', ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.

5. ಖಂಡೋಬಾ ಪಿ.ಕೆ., 1991. 'ಕರ್ನಾಟಕದ ಲಂಬಾಣಿಗಳು ಒಂದು ಸಾಂಸ್ಕೃತಿಕ ಅಧ್ಯಯನ' (ಪಿಎಚ್.ಡಿ. ಪ್ರಬಂಧ) ಗುಲಬರ್ಗಾ: ದಿ. ತೇಜಸಿಂಗ ರಾಠೋಡ ಮೆಮೋರಿಯಲ್ ಟ್ರಸ್ಟ್.

6. ಚಂದ್ರಶೇಖರ ಕಂಬಾರ, (ಸಂ) 1985. 'ಕನ್ನಡ ಜಾನಪದ ವಿಶ್ವಕೋಶ', ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ.

7. ಚಲುವೇಗೌಡ ತ.ಚ., 1978. 'ಕೆಲವು ಜನಪದ ಸಂಪ್ರದಾಯಗಳು', ಮೈಸೂರು: ತಳಗವಾದಿ ಪ್ರಕಾಶನ, ಸರಸ್ವತೀಪುರಂ.

8. ಜೋಶಿ ಗುರುನಾಥ, 1990. 'ಗುರುನಾಥ ಜೋಶಿ ಇವರ ಕನ್ನಡ – ಕನ್ನಡ ಶಬ್ದಕೋಶ', ಗದಗ: ಮೆ: ಬಿ.ಬಿ. ಸಂಕೇಶ್ವರ ಆ್ಯಂಡ ಕಂಪನಿ.

9. ನಂಜಮ್ಮಣ್ಣಿ ಎಂ., 1974. 'ಸಾಮಾಜಿಕ ಮಾನವ ಶಾಸ್ತ್ರ', ಮೈಸೂರು: ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ.

10. ನರಸಿಂಹಾಚಾರ ಡಿ.ಎಲ್., (ಸಂ) 1970. 'ಕನ್ನಡ ನಿಘಂಟು ಮೊದಲನೆಯ ಸಂಪುಟ', ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.

11. ನಾಯಕ ಎನ್.ಆರ್., (ಸಂ) 1983. 'ಕೂಸಾಯ್ತು ನಮ್ಮ ಕೊಮರಾಗೆ' ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.

12. ನಾಯಕ ಹಾ.ಮಾ., (ಸಂ) 1977. 'ಕನ್ನಡ ರತ್ನಕೋಶ', ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.

13. ನೀಲಪ್ಪ ಹೆಚ್., (ಸಂ) 1986. 'ಉಪ್ಪಾರ ಸ್ಮರಣ ಸಂಚಿಕೆ', ಬೆಂಗಳೂರು: ಕರ್ನಾಟಕ ರಾಜ್ಯ ಉಪ್ಪಾರ ಸಂಘ(ರಿ)

14. ಪಂಡಿತ ಕಮ್ರಿಚೆ.ಎ., (ಸಂ) 1957. 'ಸಚಿತ್ರ ಕನ್ನಡ — ಕನ್ನಡ ಕಸ್ತೂರಿ ಕೋಶ', ಧಾರವಾಡ: ರಾಮಾಶ್ರಯ ಬುಕ್ ಡಿಪೋ.

15. ಪಾಂಡುರಂಗ ಡಿ.ಆರ್., 1990. 'ದಕ್ಷಿಣ ಕನ್ನಡ ಜಿಲ್ಲೆಯ ಬೈರರ ಸಾಹಿತ್ಯಕ — ಸಾಂಸ್ಕೃತಿಕ ಅಧ್ಯಯನ' (ಪಿಎಚ್.ಡಿ ಪ್ರಬಂಧ) ಉಡುಪಿ: ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಎಂ.ಜಿ.ಎಂ. ಕಾಲೇಜು.

16. ಪುರುಷೋತ್ತಮ ಬಿಳಿಮಲೆ, 1990. 'ಕರಾವಳಿ ಜಾನಪದ', ಮಂಗಳಗಂಗೋತ್ರಿ: ಮಂಗಳೂರು ವಿಶ್ವವಿದ್ಯಾನಿಲಯ.

17. ರಾಮಾನುಜಂ ಪಿ.ಎಸ್., 1975. 'ಕೊಡವರು', ಮೈಸೂರು: ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ, ಗೃಹಸರಸ್ವತಿ ಗ್ರಂಥಮಾಲೆ.

18. ವಿಶ್ವನಾಥ ಬದಿಕಾನ, 1994. 'ಗಾಡ ಕನ್ನಡದ ಜನಪದ ಕತೆಗಳು ವರ್ಗ ಮತ್ತು ಆಶಯ ಸೂಚಿ', ಮಂಗಳ ಗಂಗೋತ್ರಿ: ಮುದಿಪು ಪ್ರಕಾಶನ.

19. ವೆಂಕಟ ಸುಬ್ಬಯ್ಯ ಜಿ., (ಸಂ) 1985. 'ಕನ್ನಡ — ಕನ್ನಡ — ಇಂಗ್ಲಿಷ್ ನಿಘಂಟು', ಬೆಂಗಳೂರು: ಐ.ಬಿ.ಎಚ್ ಪ್ರಕಾಶನ, ಗಾಂಧಿನಗರ.

20. ವೆಂಕಟಾಚಲ ಡಿ., (ಸಂ) 1992. 'ಉಪ್ಪಾರ ವೇದಿಕೆ' ಕೊಳ್ಳಗಾಲ: ಉಪ್ಪಾರ ವೇದಿಕೆ ಮಾಸ ಪತ್ರಿಕಾ ಕಾರ್ಯಾಲಯ.

21. ಶಂಕರನಾರಾಯಣ ತೀ.ನಂ., 1982. 'ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು(ಪಿಎಚ್.ಡಿ. ಪ್ರಬಂಧ) ಮೈಸೂರು: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.

22. ಶಿವರಾಮಕಾರಂತ, 1990. 'ಸಿರಿಗನ್ನಡ ಅರ್ಥಕೋಶ', ಬೆಂಗಳೂರು: ಎಸ್.ಬಿ.ಎಸ್. ಪಬ್ಲಿಷರ್, ಡಿಸ್ಟ್ರಿಬ್ಯೂಟರ್.

23. ಸದಾನಂದ ಕನವಳ್ಳಿ, (ಅನು) 1992. 'ರಾಬರ್ಟ್ ಸಿವೆಲ್-ಮರೆತು ಹೋಗಿರುವ ಸಾಮ್ರಾಜ್ಯ ವಿಜಯನಗರ', ಹಂಪಿ: ಕನ್ನಡ ವಿಶ್ವವಿದ್ಯಾಲಯ.

ENGLISH REFERENCES

1. ANANTHA KRISHNA IYER L.K.(Ed) : 1935, THE MYSORE TRIBES AND CASTES VOL-I:MYSORE: MYSORE UNIVERSITY.

2. EDGAR THURSTON & K.RANGACHARI : 1987, CASTES AND TRIBES OF SOUTHERN INDIA VOL-VII. T TO Z: MADRAS :GOVERNMENT PUBLICATIONS.

3. KITTEL (REV.F.,) : 1894, KITTEL'S KANNADA-ENGLISH DICTIONARY VOL-NOI. MANGALORE: BASEL MISSION BOOK AND TRACT DEPOSITORY.

4. SHERRING M.A. : 1974, HINDU TRIBES AND CASTES: VOL-II:DELHI: COSMO PUBLICATIONS.

5. SURYANATH U.KAMATH (Ed) : 1981, KARNATAKA STATE GAZETTEER, CHIKKAMAGALUR DISTRICT:BANGALORE: GOVERNMENT PRESS.

6. SURYANATH U.KAMATH (Ed) : 1988, KARNATAKA STATE GAZETTEER, MYSORE DISTRICT, BANGALORE:GOVERNMENT PRESS.

- - -